ಡಿಸೆಂಬರ್ 2023

₹ 15/-

# ಯುಗರಶ್ಮಿ

ತ್ರೈಮಾಸಿಕ




- ಸಾಮಾಜಿಕ ಶಾಂತಿ
- ಶಾಂತಿ ಸ್ಥಾಪನೆಗಿರುವ ಮಾರ್ಗೋಪಾಯಗಳು
- ಇಸ್ಲಾಮಿನ ವಿರುದ್ಧ ಆಕ್ಷೇಪಗಳಿಗೆ ಉತ್ತರ
- ನೀನು ಮಾಡು – ಮಾಡಬೇಡ

"ಯಾವನಾದರೂ ಒಂದು ಕೆಡುಕನ್ನು ಮಾಡಿ ಅಥವಾ ತನ್ನ ಆತ್ಮದೊಡನೆ ದ್ರೋಹವನ್ನೆಸಗಿ ಅಲ್ಲಾಹನೊಡನೆ ಪಾಪ ಮುಕ್ತಿಗಾಗಿ ಪ್ರಾರ್ಥಿಸಿದರೆ, ಅವನು ಅಲ್ಲಾಹನನ್ನು ಅತ್ಯಂತ ಕ್ಷಮಿಸುವವನಾಗಿಯೂ ಕಾರುಣ್ಯನಿಧಿಯಾಗಿಯೂ ಕಾಣುವನು."

# ಯುಗರಶ್ಮಿ

ವಿಷಯ ಸೂಚಿಕೆ ಪುಟ


- ಸ್ವಾತಂತ್ರ್ಯ ಅನುಮತಿಸುವ ಆಡಳಿತೆಯ ವಿರುದ್ಧ ಸಮರ ಸಲ್ಲದು 01
- ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು 02
- ಸಾಮಾಜಿಕ ಶಾಂತಿ 03
- ವಿನಾಶದ ಕಡೆಗೆ ಸಾಗುತ್ತಿರುವ ಲೋಕದಲ್ಲಿ ಶಾಂತಿ ಸ್ಥಾಪನೆಗಿರುವ ಮಾರ್ಗೋಪಾಯಗಳು 08
- ಇಸ್ಲಾಮಿನ ವಿರುದ್ಧ ಸಾಮಾನ್ಯವಾಗಿ ಮಾಡಲಾಗುತ್ತಿರುವ ಆಕ್ಷೇಪಗಳಿಗೆ ಉತ್ತರ 13
- ನೀನು ಮಾಡು – ಮಾಡಬೇಡ 19
- ಇಸ್ರೇಲ್ – ಪ್ಯಾಲೆಸ್ತೀನ್ ಸಂಘರ್ಷದ ಕುರಿತು ಅಹ್ಮದಿಯಾ ಮುಸ್ಲಿಂ ಜಮಾಅತಿನ ಜಾಗತಿಕ ನೇತಾರರ ಕರೆ 22
- ಓದಿದ್ದು : 25

• ಒಳ್ಳೆಯ ಬಟ್ಟೆ, ಕಪ್ಪು ಕನ್ನಡಕಗಳನ್ನು ಧರಿಸಿದ್ದ ದಲಿತನಿಗೆ ಹಲ್ಲೆ • ಚೀನದಲ್ಲಿ ಬದಲಾಗುತ್ತಿರುವ ನೀತಿಗಳು • ಶರ್ಟ್ ಧರಿಸದ ಅಧಿಕಾರಿಯ ಅಮಾನತು • ಅತ್ಯಪರೂಪದ ಶೋಧ: ಕೃತಕ ಭ್ರೂಣ ಕೋಶ ಸೃಷ್ಟಿ! • ಬಾಲಕನ ಕುತ್ತಿಗೆ – ತಲೆ ಮರು ಜೋಡಿಸಿದ ಇಸ್ರೇಲ್ ವೈದ್ಯರು! • 16 ಸಾವಿರ ಅನಾಥ ಮೃತದೇಹಗಳ ಅಂತ್ಯಸಂಸ್ಕಾರ • ಶ್ವಾನವಾಗಿ ಬದಲಾದ ವ್ಯಕ್ತಿ! • ಮಗುವಿಗೆ ಮದ್ಯ ಕುಡಿಸಿದ ತಾಯಿ! • ಪತ್ರದ ವಿಳಂಬ ವಿತರಣೆ: ಅಂಚೆ ಪಾಲಕರಿಗೆ 3.10 ಲ. ರೂ. ದಂಡ! • ಬಾಲಕಿಗೆ ಲೈಂಗಿಕ ಕಿರುಕುಳ 97 ವರ್ಷ ಜೈಲು, 8.30 ಲ. ರೂ. ದಂಡ • ನರ್ಸ್‌ಗೆ ಜೀವನ ಪರ್ಯಂತ ಜೈಲು • ದಿನಕ್ಕೆ ಗಂಟೆ ಕೆಲಸ: ವರ್ಷಕ್ಕೆ 1 ಕೋಟಿ ಸಂಬಳ • ಗೋಹತ್ಯೆ ನಿಷೇಧದಿಂದ ರೈತರು ಸಂಕಷ್ಟದಲ್ಲಿ • ಶಾಲೆಗೆ ಬಾರದೆ 9 ವರ್ಷ ಸಂಬಳ ಪಡೆದ ಶಿಕ್ಷಕ! • ತಾಯಿಯ ಬೆತ್ತಲೆಗೊಳಿಸಿ, ಮಗನ ಹತ್ಯೆ • ವಿದ್ಯಾರ್ಥಿಗೆ 9 ಸಲ ಕಚ್ಚಿದ ಸರ್ಪ! • ರಕ್ಷಾ ಬಂಧನದಂದೇ ಸಾಮೂಹಿಕ ಅತ್ಯಾಚಾರ • ಪತ್ನಿಯನ್ನೇ ಬೆತ್ತಲೆ ಮೆರವಣಿಗೆ ಮಾಡಿದ! • ಶಬರಿಮಲೆ ಭೇಟಿಗಾಗಿ ಪಾದ್ರಿ ಸ್ಥಾನಕ್ಕೆ ರಾಜೀನಾಮೆ! • ಮದ್ರಸಾಗಳಲ್ಲಿ ಸಂಸ್ಕೃತ ಪಾಠ! • 168 ಇಲಿ ಹಿಡಿಯಲು 69.5 ಲಕ್ಷ ರೂ.! • ಮ.ಪ್ರ: ಬಾಲಕಿಯ ಅತ್ಯಾಚಾರ • ಮುಸ್ಲಿಮರು ಕೂಡ ನಮ್ಮವರೇ: ಭಾಗವತ್ • ಲೈಂಗಿಕ ಕಿರುಕುಳ ಪ್ರತಿಭಟಿಸಿದ ಬಾಲಕಿಯನ್ನು ಚಲಿಸುತ್ತಿದ್ದ ರೈಲಿನೆದುರು ಎಸೆದ ದುಷ್ಕರ್ಮಿಗಳು • ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಸ್ವಯಂಘೋಷಿತ 'ದೇವಮಾನವ'ನ ಬಂಧನ • ಚರ್ಮದ ಕ್ಯಾನ್ಸರ್ ಗುಣಪಡಿಸಲು ಸೋಪ್ ಸಂಶೋಧಿಸಿದ 14ರ ಬಾಲಕ! • ಜೈಲುಗಳಿಗೆ ಹೋಗುವವರಲ್ಲಿ ಮುಸ್ಲಿಮರೇ ನಂ.1: ಬದ್ರುದ್ದೀನ್ • ಮಗನಿಂದಲೇ ತಾಯಿಯ ಕೊಲೆ; ಅತ್ಯಾಚಾರ • ಮನುಷ್ಯನನ್ನೇ ಪುಡಿಗಟ್ಟಿದ ರೋಬೋಟ್ ಮೆಷಿನ್! • ಉ.ಪ್ರ.ದಲ್ಲಿ ಹಲಾಲ್ ಪ್ರಮಾಣೀಕೃತ ವಸ್ತುಗಳ ಮಾರಾಟ ನಿಷೇಧ • ನಾಗರಿಕ ಸಮಾಜ ತಲೆ ತಗ್ಗಿಸುವಂತಹ ಕೃತ್ಯ

- ಕವನ 37
- ಸಂಪಾದಕರಿಗೆ ಪತ್ರ 37
- ವಾರ್ತೆಗಳು 41
- ಪ್ರತಿಭೆಗಳು 41


ಮುಖಪುಟ ಚಿತ್ರ :
ಬೈತುಲ್ ಹುದಾ ಮಸ್ಜಿದ್, ಮಾರ್ಸ್‌ಡೆನ್ ಪಾರ್ಕ್, ನ್ಯೂ ಸೌತ್ ವೇಲ್ಸ್, ಆಸ್ಟ್ರೇಲಿಯಾ.


ಬಿಡಿ ಪ್ರತಿ : ರೂ. 15/– ವಾರ್ಷಿಕ ಚಂದಾ : ರೂ. 60/– ಅಂಚೆ ಮೂಲಕ : ರೂ. 70/–



ವಿಳಾಸ : 10–23–1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು – 575001.
ಸಂಪರ್ಕಿಸಿರಿ : 9900410789

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

*ಸಂಪಾದಕ : ಮುಹಮ್ಮದ್ ಯೂಸುಫ್*

**ಡಿಸೆಂಬರ್ 2023**

| | | | |
|---|---|---|---|
| ಆರಂಭ : 1975 | ಸಂಪುಟ : 40 | ಫತ್‌ಹ್ : 1403 ಹಿಜರೀ ಶಮ್ಸೀ | ಸಂಚಿಕೆ : 1 |

## ಸ್ವಾತಂತ್ರ್ಯ ಅನುಮತಿಸುವ ಆಡಳಿತೆಯ ವಿರುದ್ಧ ಸಮರ ಸಲ್ಲದು

ಈ ಕಾಲದಲ್ಲಿ ಅಮುಸ್ಲಿಂ ಆಡಳಿತೆಗಾರರು ಇಸ್ಲಾಮಿನ ವಿಚಾರದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ ಎಂಬುದು ಸ್ಪಷ್ಟ. ಇಸ್ಲಾಮಿನ ಮೂಲಭೂತ ಕರ್ಮಾನುಷ್ಠಾನಗಳನ್ನು ಅವರು ವಿರೋಧಿಸಿಲ್ಲ. ನವಮುಸ್ಲಿಮರನ್ನು ಅವರು ಕೊಂದುಬಿಡುವುದಿಲ್ಲ. ಅವರನ್ನು ಸೆರೆಮನೆಗೆ ಅಟ್ಟಿ ಕಷ್ಟಕೊಡುವುದಿಲ್ಲ. ಹಾಗಿರುವಾಗ ಇಸ್ಲಾಮಿನ ಖಡ್ಗ ಏಕೆ ಪ್ರಯೋಗಿಸಲ್ಪಡಬೇಕು? ಧರ್ಮ ಕಾರ್ಯಗಳಲ್ಲಿ ಇಸ್ಲಾಂ ಎಂದಿಗೂ ಬಲಪ್ರಯೋಗವನ್ನು ಬೆಂಬಲಿಸುವುದಿಲ್ಲ. ಪವಿತ್ರ ಖುರ್‌ಆನ್, ಹದೀಸುಗಳು ಮತ್ತು ಚರಿತ್ರೆ ದಾಖಲೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದ್ದರೆ ಧರ್ಮವನ್ನು ಬೆಳೆಸಲಿಕ್ಕಾಗಿ ಇಸ್ಲಾಂ ಖಡ್ಗ ಪ್ರಯೋಗಿಸಿತೆಂಬ ಆರೋಪಣೆ ಸಂಪೂರ್ಣವಾಗಿ ಆಧಾರ ರಹಿತವಾಗಿದೆ ಎಂದು ಮನಗಾಣುವುದು ಪ್ರಯಾಸಕರವಲ್ಲ.

(ಮಸೀಹ್ ಹಿಂದುಸ್ಥಾನ್ ಮೆ)

**ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**

ಅಹ್ಮದಿಯಾ ಮುಸ್ಲಿಂ ಸಂಘಟನೆಯ ಸ್ಥಾಪಕರು

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

- ಮನುಷ್ಯನು ಆತನು ಪ್ರೀತಿಸುವವನೊಂದಿಗೆ (ಪರಲೋಕದಲ್ಲಿ) ಇರುತ್ತಾನೆ.
- ತನ್ನ ಯಥಾರ್ಥ ಸ್ಥಿತಿಯನ್ನು ತಿಳಿದುಕೊಂಡಿರುವವನು ನಾಶವಾಗಲಿಕ್ಕಿಲ್ಲ.
- ಪಾಪದಿಂದ ಪಶ್ಚಾತ್ತಾಪಪಡುವವನು ಪಾಪ ಮಾಡದವನಂತೆ.
- ಪವಿತ್ರ ಖುರ್‌ಆನನ್ನು ಕಲಿಯುವವನು ಮತ್ತು ಕಲಿಸುವವನು ನಿಮ್ಮ ಪೈಕಿ ಉತ್ತಮನು.
- ಸುಳ್ಳು ಪ್ರಮಾಣ ಮನೆಗಳನ್ನು ವಿಜನಮಾಡುತ್ತದೆ.
- ಕರ್ಮಗಳು ಅದರ ಪರ್ಯವಸಾನದಲ್ಲಿ ಅಧಿಷ್ಠಿತವಾಗಿದೆ.
- ವಿಶ್ವಸ್ತತೆ ಗೌರವಾರ್ಹವಾಗಿದೆ.
- ಸಂತಾಪ ಸೂಚನೆ ಒಂದು ಸಲ ಸಾಕು.
- ಸ್ತ್ರೀಯರ ವಿಚಾರದಲ್ಲಿ ದೇವನಿಗೆ ಭಯಪಡಿರಿ.
- ನೀನು ಮುಸ್ಲಿಂ ಆಗು. (ಆಗ ನೀನು ಎಲ್ಲ ದೋಷಗಳಿಂದಲೂ ಕೆಡುಕುಗಳಿಂದಲೂ ನಷ್ಟಗಳಿಂದಲೂ) ಸುರಕ್ಷಿತನಾಗುವೆ.
- ಇಹ್‌ತಿಕಾಫ್ ಕುಳಿತುಕೊಳ್ಳಿರಿ, ಜೊತೆಗೆ ಉಪವಾಸ ಮಾಡಿರಿ.
- ನಿಕಾಹ್ ಬಹಿರಂಗಪಡಿಸಿರಿ.
- ವಿಶ್ವಾಸಿಯ ವಾಗ್ದಾನ ಕೈಯಲ್ಲಿ ಸಿಕ್ಕಿದ ಹಾಗೆ.
- ಒಬ್ಬ ವಿಶ್ವಾಸಿ ತನ್ನ ಸಹೋದರನೊಂದಿಗೆ ಮೂರು ದಿವಸಗಳಿಗಿಂತ ಹೆಚ್ಚು ಸಂಬಂಧ ಕಡಿಯುವುದು ಅನುಮತನೀಯವಲ್ಲ.

("ಹದೀಸ್ ಸಮಾಹಾರಂ" ಪುಸ್ತಕದಿಂದ ಆಯ್ದುದು)

**SWORDS CAN WIN TERRITORIES**
**BUT NOT HEARTS.**
**FORCES CAN BEND HEADS**
**BUT NOT MINDS.**

**- Hazrat Mirza Tahir Ahmad, Khalifathul Masih IV**

ಖಡ್ಗಗಳಿಂದ ಪ್ರದೇಶಗಳನ್ನು ಜಯಿಸಬಹುದು
ಆದರೆ ಹೃದಯಗಳನ್ನಲ್ಲ.
ಬಲದಿಂದ ಶಿರಗಳನ್ನು ಬಾಗಿಸಬಹುದು
ಆದರೆ ಮನಸ್ಸುಗಳನ್ನಲ್ಲ.

– ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್, ಅಹ್ಮದಿಯಾ ಚತುರ್ಥ ಖಲೀಫ

# ಸಾಮಾಜಿಕ ಶಾಂತಿ

♦ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್, ಅಹ್ಮದಿಯಾ ಮುಸ್ಲಿಂ ಜಮಾಅತಿನ ನಾಲ್ಕನೇ ಖಲೀಫ

## ವರ್ಣಭೇದ, ವರ್ಗಭೇದಗಳ ರದ್ದುಗೊಳಿಸುವಿಕೆ

ಇಂದಿನ ಕಾಲದ ಶಾಪಗಳಲ್ಲಿ ವರ್ಣಭೇದ, ವರ್ಗಭೇದ ಜಾಗತಿಕ ಶಾಂತಿ ಸ್ಥಾಪನೆಗೆ ಅತ್ಯಂತ ಹೆಚ್ಚು ಅಪಾಯಕರವಾಗಿದೆ.

ಪವಿತ್ರ ಖುರ್‌ಆನ್ ಮುಸ್ಲಿಮರನ್ನು ಮಾತ್ರವಲ್ಲ ಮಾನವರೆಲ್ಲರನ್ನು ಸಂಬೋಧಿಸಿ ಹೀಗೆ ಹೇಳಿದೆ:

**"ಎಲೈ ಮನುಷ್ಯರೇ, ನೀವು ನಿಮ್ಮ ಪ್ರಭುವಿನ ಭಯವಿರಿಸಿಕೊಳ್ಳಿರಿ. ಅವನು ನಿಮ್ಮನ್ನು ಒಂದು ಜೀವಾಳದಿಂದ ಸೃಷ್ಟಿಸಿ, ಅದರಿಂದ (ಅದರ ವರ್ಗದಿಂದಲೇ) ಅದರ ಜೋಡಿಯನ್ನೂ ಸೃಷ್ಟಿಸಿ, ಅವೆರಡರಿಂದ ಅನೇಕ ಪುರುಷರನ್ನೂ ಸ್ತ್ರೀಯರನ್ನೂ (ಲೋಕದಲ್ಲಿ) ವ್ಯಾಪಿಸುವಂತೆ ಮಾಡಿರುವನು. ಯಾವೊಬ್ಬನ ಹೆಸರಿನಲ್ಲಿ ನೀವು (ಪರಸ್ಪರ ಹಕ್ಕು ಬಾಧ್ಯತೆಗಳನ್ನು) ಕೇಳುತ್ತೀರೋ ಆ ಅಲ್ಲಾಹನ ಭಯವಿಟ್ಟುಕೊಳ್ಳಿರಿ – (ವಿಶೇಷವಾಗಿ) ಕುಟುಂಬ ಸಂಬಂಧದ ವಿಚಾರದಲ್ಲಿಯೂ. ನಿಸ್ಸಂದೇಹವಾಗಿಯೂ ಅಲ್ಲಾಹನು ನಿಮ್ಮ ಮೇಲೆ ನಿಗಾ ಇರಿಸಿಕೊಂಡಿದ್ದಾನೆ."** (4:2).

ಯಾರಿಗೂ ಬೇರೆ ಯಾರ ಮೇಲೆಯೂ ಶ್ರೇಷ್ಠತೆ ಇಲ್ಲ. ಪವಿತ್ರ ಖುರ್‌ಆನ್ ಇನ್ನೊಂದು ವಚನದಲ್ಲಿ ಹೀಗೆ ಹೇಳಿದೆ:

**"ಎಲೈ ಮನುಷ್ಯರೇ, ನಾವು ನಿಮ್ಮನ್ನು ಗಂಡು ಮತ್ತು ಹೆಣ್ಣಿನಿಂದ ಸೃಷ್ಟಿಸಿದೆವು. ನೀವು ಪರಸ್ಪರ ಗುರುತಿಸಲ್ಪಡಲಿಕ್ಕಾಗಿ ನಿಮ್ಮನ್ನು ಕುಲಗಳನ್ನಾಗಿಯೂ ಗೋತ್ರಗಳನ್ನಾಗಿಯೂ ಮಾಡಿರುವೆವು. ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು. ದಿಟವಾಗಿಯೂ ಅಲ್ಲಾಹನು ಸರ್ವಜ್ಞನೂ ಎಲ್ಲ ಅರಿತವನೂ ಆಗಿದ್ದಾನೆ."** (49:14).

ಇನ್ನೊಂದು ವಚನ ಹೀಗಿದೆ:

**"ಎಲೈ ವಿಶ್ವಾಸಿಗಳೇ, ಒಂದು ಜನಾಂಗ ಇನ್ನೊಂದು ಜನಾಂಗವನ್ನು ಪರಿಹಾಸ ಮಾಡದಿರಲಿ. (ಒಂದು ವೇಳೆ) ಅವರು (ಪರಿಹಾಸಕ್ಕೀಡಾದವರು) ಇವರಿಗಿಂತ (ಪರಿಹಾಸ ಮಾಡುವವರಿಗಿಂತ) ಉತ್ತಮರಾಗಿರಬಹುದು. ಸ್ತ್ರೀಯರು (ಬೇರೆ) ಸ್ತ್ರೀಯರನ್ನೂ ಅಪಹಾಸ್ಯ ಮಾಡದಿರಲಿ. (ಒಂದು ವೇಳೆ) ಅವರು ಇವರಿಗಿಂತ ಉತ್ತಮರಾಗಿರಬಹುದು. ನೀವು ನಿಮ್ಮದೇ ಜನರ ಮೇಲೆ ದೋಷಾರೋಪಣೆ ಮಾಡಬೇಡಿರಿ. ನೀವು ಪರಸ್ಪರ ವಿಕೃತ ನಾಮದಿಂದ ಕರೆಯಬೇಡಿರಿ. ಸತ್ಯವಿಶ್ವಾಸ ಹೊಂದಿದ ಬಳಿಕ ಅಪಕೀರ್ತಿಗೆ ಈಡಾಗುವುದು (ನಿಜವಾಗಿಯೂ) ಕೆಟ್ಟದ್ದಾಗಿದೆ. ಯಾರು ಪಶ್ಚಾತ್ತಾಪಪಡುವುದಿಲ್ಲವೋ ಅವರೇ ಅಧರ್ಮಿಗಳು,"** (49:12).

ಮೇಲಿಂದ ಮೇಲೆ ನೋಡುವಾಗ ಕಾಣುವುದೇನೆಂದರೆ, ಇಂದಿನ ಕಾಲದ ಸಮಾಜವು ವರ್ಗಭೇದ, ವರ್ಣಭೇದಗಳ ಭೀಕರ ಪರಿಣಾಮಗಳನ್ನರಿತುಕೊಳ್ಳುತ್ತಾ ಇದ್ದು ಅದರಿಂದ ದೂರ ಸರಿದು ಹೋಗುತ್ತಿರುವಂತೆ ಕಾಣಿಸಿಕೊಳ್ಳುತ್ತದೆ. ಆದರೆ ನೀವು ಈ ವಿಷಯವನ್ನು ತಳಸ್ಪರ್ಶಿಯಾಗಿ ಜಾಗರೂಕತೆಯಿಂದ ಪರಿಶೀಲಿಸುವುದಾದರೆ ವರ್ಗಭೇದವು ಎಲ್ಲ ಕಡೆಗಳಲ್ಲೂ ಇರುವುದಾಗಿ ಕಾಣಬಹುದು.

ವರ್ಗಭೇದ ಎಂದರೇನೆಂದು ವಿವರಿಸುವುದು ಬಹಳ ಕಷ್ಟಕರವಾದುದಾಗಿದೆ. ವಿವಿಧ ಕೋನಗಳಿಂದ ನೋಡುವಾಗ ಅದು ಬೇರೆ ಬೇರೆಯಾಗಿ ಕಾಣಿಸಬಹುದಾಗಿದೆ. ವರ್ಗಭೇದ, ಜಾತಿ ಅಥವಾ ಧರ್ಮದ ಶ್ರೇಷ್ಠತೆಯ ಮನೋಭಾವ, ಗೋತ್ರದ ಬಗ್ಗೆ ಹೆಮ್ಮೆ, ಫ್ಯಾಸಿಸಮ್, ಸಾಮ್ರಾಜ್ಯವಾದ ಮತ್ತು ರಾಷ್ಟ್ರೀಯತೆ ಇವುಗಳ ಮಧ್ಯೆ ನಿಖರವಾದ ಗೆರೆ ಎಳೆಯುವುದು ಬಹಳ ಕಷ್ಟಕರವಾಗಿದೆ. ಪಶ್ಚಿಮ ಯುರೋಪಿನ ಕ್ರೈಸ್ತ ಜನರಿಂದ ಒಂದು ಸಾವಿರ ವರ್ಷಗಳಿಂದ ಹೆಚ್ಚು ಕಾಲ ಯಹೂದಿಯರಿಗೆ ನೀಡಲಾದ ಅತ್ಯಂತ ದಾರುಣ ಮತ್ತು ಮನುಷ್ಯತ್ವರಹಿತ ಹಿಂಸೆಯ ಚರಿತ್ರೆಯು ಭೂತಕಾಲದಲ್ಲಿ ಹೂಳಲ್ಪಟ್ಟಿರಬಹುದಾದರೂ ಇಪ್ಪತ್ತನೆಯ ಶತಮಾನದ ಮೂವತ್ತರ ಮತ್ತು ನಲ್ವತ್ತರ ದಶಕಗಳಲ್ಲಿ ಜರ್ಮನಿಯ ನಾಝಿಗಳು ಅವರನ್ನು ಗುರಿಪಡಿಸಿದ ಮೃಗೀಯ ಕ್ರೂರ ಹಿಂಸೆ ಇತ್ತೀಚೆಗಿನದಾಗಿದ್ದು ಮರೆತು ಬಿಡುವಂತಹದ್ದಲ್ಲ. ಆದುದರಿಂದ ನಾವು ವರ್ಗಭೇದ ಶಬ್ದ ಕೇಳುವಾಗ ಸಿಮೆಟಿಕ್ ಜನಾಂಗಗಳು (ಯಹೂದಿ, ಅಸ್ಸೀರಿಯನ್, ಅರಬಿ ಮತ್ತು ಫಿನೀಶಿಯನ್ ಜನಾಂಗಗಳು) ಅನ್ಯ ಜನಾಂಗದವರ ಕೈಗಳಿಂದ ಅನುಭವಿಸಿದ ಹಿಂಸೆಗಳ ಕಡೆಗೆ ನಮ್ಮ ಮನಸ್ಸು ನಾವು ಉದ್ದೇಶಿಸದಿದ್ದರೂ ತಿರುಗುತ್ತದೆ.

ಇದು ವರ್ಗಭೇದದ ಬಗ್ಗೆ ಸೀಮಿತವಾದ ತಿಳುವಳಿಕೆಯಾಗಿದೆ. ಇದು ಎಷ್ಟು ಸೀಮಿತವಾಗಿದೆ ಎಂದರೆ ಇತರ ಸನ್ನಿವೇಶಗಳು ನಮ್ಮ ಗಮನಕ್ಕೆ ಬಾರದೆ ದೂರ ಇರುತ್ತವೆ. ಯಹೂದಿಯರಲ್ಲಿರುವ ತೀವ್ರವಾದಿಗಳು ತಾವು ಎಂತಹ ಭಯಾನಕ ದ್ವೇಷಾಸೂಯೆಗಳಿಂದ ಅನ್ಯ ಜನಾಂಗಗಳ ಕಡೆಗೆ ಈಗ ನೋಡುತ್ತಾ ಇದ್ದಾರೆಂದು ಯೋಚಿಸಲು ನಾವು ಮುಂದಾಗುವುದೇ ಇಲ್ಲ.

ಇದು ಮಾತ್ರವಲ್ಲ, ವರ್ಗಭೇದವು ನಮಗೆ ಕಾಣಿಸಿಕೊಳ್ಳುವ ಹಾಗೆ ಮಾತ್ರವಲ್ಲ, ಅದಕ್ಕಿಂತ ಹೆಚ್ಚಿಗೆ ಇದೆ. ವರ್ಗಭೇದವು ವಿವಿಧ ರೂಪಗಳಲ್ಲಿವೆ. ಉದಾಹರಣೆಗೆ, ರಾಷ್ಟ್ರೀಯತೆ ಅದರಲ್ಲಿ ಒಂದಾಗಿದೆ. ಧಾರ್ಮಿಕ, ಗೋತ್ರಕ್ಕೆ ಸಂಬಂಧಿಸಿದ ಮತ್ತು ಪ್ರಾದೇಶಿಕ ದುರಭಿಮಾನಗಳು ಬೇರೆ ಕೆಲವು ಉದಾಹರಣೆಗಳಾಗಿವೆ. ಬಿಳಿ ವರ್ಣದ ಜನರು ಬಿಳಿಯರಲ್ಲದ ಜನರ ಬಗ್ಗೆ ಹೊಂದಿರುವ ದುರಭಿಪ್ರಾಯಗಳು ವರ್ಗಭೇದದ ರೂಪಗಳಾಗಿವೆ. ಆದರೆ ಬಿಳಿಯರನ್ನು ಮಾತ್ರ ನಿಂದಿಸುವುದು ಅನ್ಯಾಯಕರವಾಗಿದೆ. ಕಪ್ಪು ಜನರ ವರ್ಗಭೇದ, ಹಳದಿ ಜನರ ವರ್ಗಭೇದ ಮತ್ತು ಬಿಳಿ, ಕಪ್ಪು, ಹಳದಿ ವರ್ಣಗಳಿಗೆ ಸೇರದ ಅವುಗಳ ಮಧ್ಯದಲ್ಲಿರುವ ಜನರ ವರ್ಗಭೇದವೂ ಇರುತ್ತದೆ.

ವರ್ಗಭೇದದ ಮುಖ್ಯ ಅಂಶವು ವರ್ಗಗಳ ಮಧ್ಯೆ ಇರುವ

ದ್ವೇಷವಾಗಿದೆ. ವರ್ಗಭೇದದ ಉತ್ತಮ ವಿವರಣೆ ಇದಾಗಿದೆ. ತಮ್ಮ ವರ್ಗದ ಹಿತಾಸಕ್ತಿಯ ನೆವನದಿಂದ ಬೇರೊಂದು ವರ್ಗದ ವಿರುದ್ಧ ದ್ವೇಷದಿಂದ ವರ್ತಿಸುವಾಗ ವರ್ಗಭೇದವು ಹೊರಕ್ಕೆ ಬರುತ್ತದೆ ಮತ್ತು ಅದರ ಕುರೂಪಿ ಮತ್ತು ವಿಷಮಯ ತಲೆಯನ್ನು ಎತ್ತುತ್ತದೆ. ಅಂತಹ ದ್ವೇಷ ಪ್ರಕಟಣೆ ಸಂದರ್ಭದಲ್ಲಿ ಯಾವುದೇ ಬುದ್ಧಿಯನ್ನು ಪ್ರಯೋಗಕ್ಕೆ ತರುವುದಿಲ್ಲ. ವ್ಯಕ್ತಿಗಳ ಯೋಗ್ಯತೆಗಳು ಕಡೆಗಣಿಸಲ್ಪಡುತ್ತವೆ. ಅವರು, ವಿರುದ್ಧ ವರ್ಗದ ಎಲ್ಲರನ್ನೂ ಸಮಾನರಾಗಿ ಕಾಣುತ್ತಾರೆ.

ಕೆಲವು ಶತಮಾನಗಳ ಹಿಂದೆ ಯುರೋಪಿನಲ್ಲಿ ಮುಸ್ಲಿಮ್ ದೇಶಗಳು ಮತ್ತು ಕ್ರೈಸ್ತ ದೇಶಗಳು ಎದುರು ಬದುರಾಗಿದ್ದುವು. ಆ ಕಾಲಘಟ್ಟದಲ್ಲಿ ಯಹೂದಿಯರು ತಮ್ಮ ಧಾರ್ಮಿಕ ದ್ವೇಷದ ಕಾರಣದಿಂದ ಮುಸ್ಲಿಮ್ ದೇಶಗಳ ವಿರುದ್ಧ ನಡೆಸಿದ ಕಾರಸ್ಥಾನಗಳು ನಗಣ್ಯವಾಗಿವೆ. ಆದರೆ ಯಹೂದಿಯರು ಕ್ರೈಸ್ತ ಯುರೋಪಿನ ಭಾಗವಾಗಿದ್ದರು. ಮೆಡಿಟೆರೇನಿಯನ್ ಸಮುದ್ರದ ಸುತ್ತುಮುತ್ತು ಇದ್ದ ಮುಸ್ಲಿಮ್ ದೇಶಗಳನ್ನು ಯುರೋಪಿನ ಕ್ರೈಸ್ತ ದೇಶಗಳು ಶಂಕಿಸುತ್ತಿದ್ದು ಪಶ್ಚಿಮದ ಕಡೆಗೆ ಮುಸ್ಲಿಮರ ವಿಸ್ತಾರವನ್ನು ಭಯಪಡುತ್ತಿದ್ದುವು.

ಮುಸ್ಲಿಮರ ಮತ್ತು ಕ್ರೈಸ್ತರ ಮಧ್ಯೆ ತೀವ್ರ ಹೋರಾಟಗಳು ನಡೆಯುತ್ತಿದ್ದಾಗ ವರ್ಣ ವ್ಯತ್ಯಾಸದ ಕಾರಣದಿಂದ ಅದರಲ್ಲಿ ವರ್ಗಭೇದದ ಮನೋಭಾವವು ತೀವ್ರವಾಗಿದ್ದುವು. ಆ ಕಾಲದಲ್ಲಿ ಇಂಡೋನೇಶಿಯಾ, ಮಲೇಶಿಯಾ ಮತ್ತು ಹಿಂದೂಸ್ತಾನದ ಮುಸ್ಲಿಮರು ಈ ಹೋರಾಟದಿಂದ ದೂರವಿದ್ದು ಅವರ ಬಗ್ಗೆ ಗಮನಿಸಿರಲಿಲ್ಲ. ಆ ಹೋರಾಟಗಳು ಟರ್ಕಿ – ಅರಬ್ ಗುಂಪು ಮತ್ತು ಕ್ರೈಸ್ತ ಯುರೋಪಿನ ಮಧ್ಯೆ ನಡೆದವುಗಳಾಗಿದ್ದುವು.

ಈ ಚರಿತ್ರೆ ಹೂಳಲ್ಪಟ್ಟು ಮರೆತುಬಿಡಲಾಗಿದ್ದರೂ ಅದು ಪುನಃ ತಲೆ ಎತ್ತುತ್ತಿರುವುದಾಗಿ ನಾನು ಕಾಣುತ್ತೇನೆ. ಮಾನವರಿಗೆ ಸಂಬಂಧಿಸಿದ ಸಮಸ್ಯೆಗಳು ಎಷ್ಟು ಆಳವಾಗಿ ಹೂಳಲಾಗಿದ್ದರೂ ಶಾಶ್ವತವಾಗಿ ಸತ್ತು ಹೋದುದಾಗಿ ಕಾಣುವುದಿಲ್ಲ. ಇಂದಿನ ಕಾಲಘಟ್ಟದ ಕಡೆಗೆ ಬರುವಾಗ ಎರಡು ಮಹಾಶಕ್ತಿ ರಾಷ್ಟ್ರಗಳು ಮತ್ತು ಅವುಗಳೊಂದಿಗೆ ಬಾಂಧವ್ಯ ಸ್ಥಾಪಿಸಿದ ದೇಶಗಳ ಮಧ್ಯೆ ಲೋಕವು ವಿಭಜಿಸಲ್ಪಟ್ಟಿರುವಾಗ ಪಶ್ಚಿಮ ದೇಶಗಳಿಗೆ ಹಿತಕರವಾಗಿರುವುದೇನೆಂದರೆ, ಅಂತಹ ಸಮಸ್ಯೆಗಳು ಕೆದಕಲ್ಪಡಬಾರದೆಂದೂ ಹಾಗೆ ಕೆದಕಲು ಅನುಮತಿ ನೀಡಬಾರದೆಂದೇ ಆಗಿದೆ. ಆದರೆ ಪೂರ್ವ ಪಶ್ಚಿಮಗಳ ಬಾಂಧವ್ಯಗಳ ಹೊಸ ಯುಗದ ಪ್ರಾರಂಭವಾದ ನಂತರ ಮಧ್ಯಕಾಲೀನ ಯುಗದ ಒಂದು ಕಾಳರಾತ್ರಿ ತನ್ನ ಭೀಕರ ನೆರಳನ್ನು ಹಾಯಿಸಲಿದೆ.

ಕ್ರೈಸ್ತರ ಮತ್ತು ಮುಸ್ಲಿಮರ ಮಧ್ಯೆ ಧಾರ್ಮಿಕ – ರಾಷ್ಟ್ರೀಯ ಸ್ಪರ್ಧೆಗಳ ಪುನಶ್ಚೇತನದ ಅಪಾಯ ತಲೆದೋರಿರುವುದು ಯು.ಎಸ್.ಎಸ್.ಆರ್. ಮತ್ತು ಪೂರ್ವ ಯುರೋಪಿನಲ್ಲಿ ಸಂಭವಿಸಿದ ಗಂಭೀರ ಬದಲಾವಣೆಗಳ ನಂತರವಾಗಿದೆ. ಎರಡು ವಿಭಾಗಗಳಿಗೆ ಸೇರಿದ ಸ್ವಾರ್ಥ ಸಾಧಕರು ಇದಕ್ಕೆ ಉತ್ತೇಜನ ನೀಡಿದರು. ಕ್ರೈಸ್ತ ಮತ್ತು ಮುಸ್ಲಿಮ್ ಮತಪಂಡಿತರು ಈ ಸನ್ನಿವೇಶವನ್ನು ಅಪಾಯಕರವಾಗಿ ವರ್ಧಿಸುವಂತೆ ಮಾಡಿ ಮುಸ್ಲಿಮರು ಮತ್ತು ಕ್ರೈಸ್ತರ ಮಧ್ಯೆ ಶಾಂತಿ ಮತ್ತು ಸೌಹಾರ್ದ ಸ್ಥಾಪಿಸುವ ಸಾಧ್ಯತೆಗಳನ್ನು ನಾಶಗೊಳಿಸುವರೆಂದು ನಾನು ಭಯಪಡುತ್ತೇನೆ. ಹೀಗೇನಾದರೂ ಸಂಭವಿಸಿದರೆ ಅದು ಇಸ್ರಾಯೇಲ್‌ಗೆ ಪ್ರಯೋಜನಕರವಾಗುವುದು. ಇಸ್ರಾಯೇಲನ್ನು ನಿರಾಸಕ್ತ ಮತ್ತು ಹಸ್ತಕ್ಷೇಪ ನಡೆಸದ ವೀಕ್ಷಕನೆಂದು ಪರಿಗಣಿಸಲಾಗದು.

ಇದಲ್ಲದೆ ರಾಜಕೀಯ ಆರ್ಥಿಕ ವಿಭಜನೆ ರೇಖೆಗಳೂ ಇವೆ. ಅವು ಹೊಸ ವರ್ಗಭೇದಕ್ಕೆ ಜನ್ಮ ನೀಡುತ್ತವೆ. ಎಂದರೆ ಶ್ರೀಮಂತ ಉತ್ತರ ದೇಶಗಳು ಮತ್ತು ಬಡ ದಕ್ಷಿಣ ದೇಶಗಳು, ಪೂರ್ವ ಮತ್ತು ಪಶ್ಚಿಮ ದೇಶಗಳ ವ್ಯತ್ಯಾಸವನ್ನು ಒಬ್ಬ ಕವಿ ಹೀಗೆ ಸೂಚಿಸಿದ್ದಾನೆ:

ಈಸ್ಟ್ ಈಸ್ ಈಸ್ಟ್ ಆ್ಯಂಡ್ ವೆಸ್ಟ್ ಈಸ್ ವೆಸ್ಟ್,

ಆ್ಯಂಡ್ ನೆವರ್ ದಿ ಟ್ವೈನ್ ಶಲ್ ಮೀಟ್

ಪೂರ್ವ ಪೂರ್ವವೇ ಪಶ್ಚಿಮ ಪಶ್ಚಿಮವೇ ಆಗಿರುವುದು. ಇವೆರಡು ಎಂದೂ ಒಗ್ಗೂಡಲಾರವು.

ಮಹಾಶಕ್ತಿ ರಾಷ್ಟ್ರಗಳು ಇತ್ತೀಚೆಗೆ ಸೌಹಾರ್ದ ಸ್ಥಾಪನೆಗೋಸ್ಕರ ಮತ್ತು ಬಿಗುವಿನ ಸ್ಥಿತಿ ಸಡಿಲಗೊಳಿಸಲು ಮಾಡಿದ ಪ್ರಯತ್ನಗಳು ಚಾರಿತ್ರಿಕವಾದ ಧಾರ್ಮಿಕ – ರಾಜಕೀಯ ವಿವಾದಗಳನ್ನು ಮತ್ತು ಸ್ಪರ್ಧೆಗಳನ್ನು ಪಶ್ಚಿಮದ ಕ್ರೈಸ್ತರ ಮತ್ತು ಪೂರ್ವದ ಮುಸ್ಲಿಮರ ಮಧ್ಯೆ ಪುನಶ್ಚೇತನಗೊಳಿಸಬಹುದು. ಹೊಸ ಸಾಮ್ರಾಜ್ಯ ವಾದ ಮತ್ತು ವಿಶಾಲವಾಗಿರುವ ವರ್ಗಭೇದದ ಕಾರಣ ಪೂರ್ವ ಮತ್ತು ಪಶ್ಚಿಮ ಪರಸ್ಪರ ದೂರ ಸರಿದು ಹೋಗುವುದು ಆಶ್ಚರ್ಯಕರವಾಗಲಾರದು. ಮಹಾಶಕ್ತಿ ರಾಷ್ಟ್ರಗಳ ಮಧ್ಯೆ ಇದ್ದ ಬಿಗುವಿನ ಪರಿಸ್ಥಿತಿ ಸಡಿಲಗೊಂಡಿರುವುದರಿಂದ ಇದು ಸಂಭವಿಸಿಯೇ ತೀರುವುದು.

ಸಾರ್ವತ್ರಿಕವಾಗಿ ಅಂಗೀಕರಿಸಲ್ಪಟ್ಟ ಸಾಂಕೇತಿಕ ಪದದ ಅರ್ಥವನ್ನು ವಿಸ್ತರಿಸಿ ವರ್ಗಭೇದವು ಆರೋಪಿಸಲ್ಪಡದ ಕ್ಷೇತ್ರಗಳಿಗೂ ಅದನ್ನು ಅನ್ವಯಿಸುವಂತೆ ಮಾಡಿ ನಾನು ಅರ್ಥಮಿತಿಯನ್ನು ದಾಟಿ ಹೋಗುವುದಾಗಿ ಕಾಣಿಸಬಹುದು. ಆದರೆ ನನ್ನ ಅಭಿಪ್ರಾಯ ಪಕ್ಷಪಾತ ರಹಿತವಾಗಿ ಮತ್ತು ತಳಸ್ಪರ್ಶಿಯಾಗಿ ಮಾನವರ ಪ್ರೇರಕ ಶಕ್ತಿಗಳನ್ನು ಅಧ್ಯಯನ ಮಾಡಿ ಅವು ಹೇಗೆ ವರ್ಗಭೇದವನ್ನು ಹುಟ್ಟಿಸುತ್ತವೆ ಎನ್ನುವುದನ್ನು ಕಂಡುಕೊಂಡುದರಿಂದಾಗಿದೆ. ಮಾನವರ ಅಂತರ್ಗತ ಪ್ರೇರಕ ಶಕ್ತಿಗಳು ಬದಲಾವಣೆ ಹೊಂದದೆ ಇರುವಾಗ ನೀವು ಮನುಷ್ಯರ ವಿಕೃತ ಸ್ವಭಾವಗಳನ್ನು ವರ್ಗಭೇಧ ಎಂದಾಗಲೀ ಬೇರೆ ಯಾವುದಾದರೂ ಸಭ್ಯ ನಾಗರಿಕ ಹೆಸರಿನಲ್ಲಿ ಕರೆದರೂ ರೋಗವು ಹಾಗೆಯೇ ಮುಂದುವರಿಯುತ್ತದೆ.

ವರ್ಗಭೇದವನ್ನು ವಿಶಾಲವಾದ ಅರ್ಥದಲ್ಲಿ ಪರಿಗಣಿಸುವುದಾದರೆ, ಗುಂಪುಗಳ ದ್ವೇಷ ಮನೋಭಾವ ಎಂದೇ ಹೇಳಬೇಕಾಗುತ್ತದೆ. ಇದು ಪರಿಪೂರ್ಣ ನ್ಯಾಯಪಾಲನೆ ಮತ್ತು ಉತ್ತಮ ವರ್ತನೆಗೆ ವಿರುದ್ಧವಾಗಿದೆ.

ಅಮೇರಿಕನ್ ಗುಂಪು ರಾಷ್ಟ್ರಗಳು ಮತ್ತು ರಶ್ಯನ್ ಗುಂಪು ರಾಷ್ಟ್ರಗಳು ವೇಗವಾಗಿ ಚದುರಿ ಹೋಗುತ್ತಿರುವುದರಿಂದ ಸಂಪೂರ್ಣವಾಗಿ ಹೊಸದಾದೊಂದು ಕಾಲಘಟ್ಟಕ್ಕೆ ನಾಂದಿಯಾಗಿದ್ದು ಅದರ ಪರಿಣಾಮವಾಗಿ ಭಿನ್ನತೆಗಳು ಅಪ್ರತ್ಯಕ್ಷವಾಗದೆ ಜಾಗತಿಕವಾಗಿ

ಹೊಸ ಕ್ರಮೀಕರಣಕ್ಕೆ ನಾವು ಮುಂದುವರಿಯುತ್ತಿದ್ದೇವೆ. ಸೈದ್ಧಾಂತಿಕವಾದ ಭಿನ್ನತೆಗಳು ಅಳಿಸಿ ಹೋಗುತ್ತಿರುವಾಗ ಅಂತರ್ರಾಷ್ಟ್ರೀಯ ಸಂಬಂಧಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿದ್ದ ಭಿನ್ನತೆಗಳು ಇನ್ನಷ್ಟು ವೃದ್ಧಿಗೊಂಡು ಹೆಚ್ಚು ಸ್ಪಷ್ಟವಾಗಲಿವೆ. ಭಂಡವಾಳಶಾಹಿ ಮತ್ತು ಸಮಾಜವಾದಿ ಸ್ಪರ್ಧೆಗಳ ಕಾಲಘಟ್ಟದಲ್ಲಿ ಪೂರ್ವ ಮತ್ತು ಪಶ್ಚಿಮದ ಮಧ್ಯೆ ಇದ್ದ ಪಾರಂಪರಿಕ ಭಿನ್ನತೆಗಳು ಪ್ರಾಮುಖ್ಯ ರಹಿತವಾಗಿ ದ್ವಿತೀಯ ಸ್ಥಾನಕ್ಕೆ ತಳ್ಳಲ್ಪಟ್ಟಿದ್ದುವು. ಈ ಪರಿಸ್ಥಿತಿ ಬದಲಾಗಿರುವುದರಿಂದ ಪೂರ್ವ – ಪಶ್ಚಿಮಗಳ ಭಿನ್ನತೆಗಳು ಹೆಚ್ಚು ಪ್ರಾಮುಖ್ಯತೆ ಪಡೆದು ಮೇಲೇಳುವುವು ಮತ್ತು ಅಭಿವೃದ್ಧಿ ಹೊಂದಿದ ಪಶ್ಚಿಮದ ದೇಶಗಳು ಪೂರ್ವದ ಅಭಿವೃದ್ಧಿ ಹೊಂದದ ದೇಶಗಳ ಮಧ್ಯೆ ವಿಭಜನೆಯ ರೇಖೆಯಾಗಿ ಮುಂದುವರಿಯುವುದು.

ವಿಮೋಚಿತ ಪೂರ್ವ ಯುರೋಪಿಯನ್ ದೇಶಗಳು ಮತ್ತು ರಶ್ಯ ಕ್ರಮೇಣ ತಮ್ಮ ಧೋರಣೆಗಳನ್ನು ಬದಲಾಯಿಸಿ ಭಂಡವಾಳಶಾಹಿ ದೇಶಗಳ ನಿಲುವನ್ನು ಹೊಂದಿ ತೃತೀಯ ಲೋಕದ ರಾಷ್ಟ್ರಗಳ ವಿರುದ್ಧ ಭಂಡವಾಳಶಾಹಿ ದೇಶಗಳ ಧೋರಣೆಗಳನ್ನೇ ಕೈಗೊಳ್ಳುವುವು. ವಿದೇಶೀಯ ಮಾರುಕಟ್ಟೆಗಳಲ್ಲಿ ಏಕ ಸ್ವಾಮ್ಯ ಗಳಿಸಲು ಹೊಸ ಸ್ಪರ್ಧೆಗಳು ಪ್ರಾರಂಭವಾಗುವುವು. ಆದರೆ ಪಶ್ಚಿಮದ ದೇಶಗಳು ಪೂರ್ವದ ಗುಂಪು ದೇಶಗಳನ್ನು ತಮ್ಮೊಂದಿಗೆ ಸೇರಿಸಿಕೊಂಡು ಹೆಚ್ಚು ಬಲಿಷ್ಠವಾದ ರಾಜಕೀಯ – ಆರ್ಥಿಕ ಘಟಕವಾಗಿ ಹೊರಬರುವುವು. ಈ ಪರಿಸ್ಥಿತಿಯ ಕಾರಣ ಪಶ್ಚಿಮ ಮತ್ತು ಪೂರ್ವ ದೇಶಗಳ ಮಧ್ಯೆ ಇರುವ ಸಾಂಪ್ರದಾಯಿಕ ಭಿನ್ನತೆಗಳು ಹೆಚ್ಚಾಗುವುವು.

ಇದರೊಂದಿಗೆ ನವೀನ ಸಮಾಜವಾದವು ಹುಟ್ಟುವುದು. ಈ ಸಮಾಜವಾದ ಸಿದ್ಧಾಂತದಲ್ಲಿ ವ್ಯಕ್ತಿಗಳಿಗೆ ಮತ್ತು ವ್ಯಕ್ತಿಗಳ ವರ್ಗಗಳಿಗೆ ಬದಲಾಗಿ ದೇಶಗಳು ಇರುವುವು. ಒಂದು ದೇಶದ ಶ್ರೀಮಂತರು ಇನ್ನೊಂದು ದೇಶದ ಬಡವರ ವಿರುದ್ಧವಾಗುವರು. ಕೆಲವು ವರ್ಷಗಳ ಕಾಲ ಈ ವಿನಾಶಕಾರಿ ಧ್ರುವೀಕರಣವು ಅದುಮಿಡಲಾಗುವುದಾದರೂ ಕೊನೆಯ ಶಕ್ತಿಶಾಲಿ ಎದುರಿಸುವಿಕೆಯನ್ನು ಶಾಶ್ವತವಾಗಿ ತಡೆಗಟ್ಟಲಾಗದು.

ಜಾಗತಿಕ ವರ್ಗಭೇದದ ಹೊಸ ಯುಗವನ್ನು ನಾವು ಪ್ರವೇಶಿಸುತ್ತಿರುವುದಾಗಿ ನಾನು ಬಹಳ ಭಯಭೀತನಾಗಿರುತ್ತೇನೆ. ಅದು ಅತ್ಯಂತ ದಾರುಣ ರೀತಿಯದಾಗಿದ್ದು ಝಿಯೋನಿಸ್ಟ್ ರಾಜಕೀಯ ನಾಯಕತ್ವದ ಒಂದು ವಿಭಾಗದಿಂದ ಬೆಂಬಲ ಗಳಿಸಿ ಅದು ಇನ್ನಷ್ಟು ಘೋರವಾಗುವುದು. ಹೈಫ ಯುನಿವರ್ಸಿಟಿಯ ಬೆಂಜಮಿನ್ ಬೈತ್ ಹಲ್ಲಾಹ್‌ಮಿ (BENJAMIN BEIT HALLAHMI) ದಿ ಇಸ್ರಾಯೇಲಿ ಕನೆಕ್ಷನ್: ಹೂಮ್ ಇಸ್ರಾಯೇಲ್ ಆರ್ಮ್ಸ್ ಆ್ಯಂಡ್ ವೈ (THE ISRAELI CONNECTION: WHOM ISRAEL ARMS AND WHY. PUBLISHED 1988 BY I.B. TAURIS & CO. LTD. LONDON) ಎಂಬ ಪುಸ್ತಕದಲ್ಲಿ ಬರೆದುದನ್ನು ನಾವು ಗಂಭೀರವಾಗಿ ತೆಗೆದುಕೊಳ್ಳುವುದಾದರೆ ಮತ್ತು ಲೇಖಕ ನೀಡಿದ ಸಾಕ್ಷ್ಯಾಧಾರಗಳು ಝಿಯೋನಿಸ್ಟ್‌ಗಳ ನಿಖರ ರಾಜಕೀಯ ಸಿದ್ಧಾಂತವಾಗಿದ್ದರೆ ಜಾಗತಿಕ ಶಾಂತಿಯ ಸ್ಥಾಪನೆಗೆ ಅದು ಅಪಶಕುನವಾಗಬಹುದು.

ಇಸ್ರಾಯೇಲ್ ದೇಶ ಹಿಂದೆ ಕೈಗೊಂಡ ಮತ್ತು ಮುಂದೆ ಕೈಗೊಳ್ಳಲಿರುವ ಕ್ರಮಗಳು ಜಾಗತಿಕ ಸಮಸ್ಯೆಗಳನ್ನು ಎದುರಿಸಲು ಹೀಗಿರುತ್ತವೆ:

ಡೇವಿಡ್ ಬೆನ್ ಗ್ಯುರಿಯೋನ್ – ಇಸ್ರಾಯೇಲ್ ದೇಶದ ರಾಷ್ಟ್ರಪಿತನಾಗಿದ್ದು ಜನವರಿ 1957ರಲ್ಲಿ ಹೀಗೆ ಹೇಳಿದ್ದರು: ನಮ್ಮ ಅಸ್ತಿತ್ವ ಮತ್ತು ಭದ್ರತೆಗೆ ಸಂಬಂಧಿಸಿ ಹೇಳುವುದಾದರೆ ಏಶಿಯಾ ಖಂಡದ ಎಲ್ಲ ಜನರ ಅಭಿಪ್ರಾಯಗಳಿಗಿಂತ ಯುರೋಪಿನ ಒಂದು ದೇಶದ ಸ್ನೇಹ ಸಂಬಂಧ ಹೆಚ್ಚು ಬೆಲೆಬಾಳುವುದಾಗಿದೆ. (ಮೆಡ್‌ಝುನಿ 1976 ಪುಟ 75) ಪುಟ 5.

ಅರಬಿಗಳ ಮೇಲೆ ಉನ್ನತಾಧಿಕಾರವನ್ನು ಪುನಃ ಗಳಿಸಲು ಇಸ್ರಾಯೇಲ್‌ಗಿರುವ ಸ್ವಂತ ಕಾಳಜಿ ಅಮೇರಿಕನರಿಗೆ ಸಾಮ್ರಾಜ್ಯಶಾಹಿಯ ಅವನತಿಯನ್ನು ತಡೆಯಬೇಕೆಂಬ ಉದ್ದೇಶಲಕ್ಷ್ಯದೊಂದಿಗೆ ಆಕಸ್ಮಿಕವಾಗಿ ಒಂದುಗೂಡಿದೆ. (ಪುಟ 205)

ಆಧುನಿಕ ಬಲಪಂಥೀಯನು ಇಸ್ರಾಯೇಲಿಯನ್ನು ಪ್ರೀತಿಸುತ್ತಾನೆ – ಎತ್ತರವಾದ ಶರೀರ ಹೊಂದಿ ಬಲಿಷ್ಠನಾಗಿ ಉಝಿ ತುಪಾಕಿಯನ್ನು ಹಿಡಿದು ಕರಿವರ್ಣದ ದೇಶವಾಸಿಗಳನ್ನು ಕೊಲ್ಲುತ್ತಾ ತೃತೀಯ ವಿಶ್ವದ ಕ್ರಾಂತಿಕಾರಿಗಳ ಮೇಲೆ ಜಯಶಾಲಿಯಾಗುವವನನ್ನು ಅರ್ಜಂಟೀನದ ಜನರಲ್‌ಗಳು, ಪೆರುಗ್ವೆದ ಕರ್ನಲ್‌ಗಳು ಮತ್ತು ದಕ್ಷಿಣ ಆಫ್ರಿಕದ ಬಿಳಿವರ್ಣದ ಆಫ್ರಿಕಾನರ್ ಯೋಧರು ಇಸ್ರಾಯೇಲಿಗಳನ್ನು ಪ್ರೀತಿಸಲು ಇದೇ ಕಾರಣವಾಗಿದೆ. (ಪುಟ 218).

"ತೃತೀಯ ವಿಶ್ವಕ್ಕೆ ನಾಶ" ಎಂಬ ಘೋಷಣೆ 1970ರ ನಂತರ ಅಮೇರಿಕದಲ್ಲಿ ಪ್ರಚಾರಗೊಳ್ಳುತ್ತಿರುವುದನ್ನು ಇಸ್ರಾಯೇಲ್‌ನೊಂದಿಗೆ ಜೋಡಿಸಲಾಗುತ್ತಿದೆ. ಅದರ ಪ್ರತಿಪಾದಕರಾದ ಡೇನಿಯಲ್ ಪ್ಯಾಟ್ರಿಕ್ ಮೊಯಿನಿಹಾನ್ (DANIEL PATRICK MOYNIHAN) ಮತ್ತು ಜೀನ್ ಕಿರ್ಕ್‌ಪ್ಯಾಟ್ರಿಕ್ (JEAN KIRK PATRICK) ಇಸ್ರಾಯೇಲನ್ನು ತಮ್ಮ ಮಿತ್ರ ದೇಶವೆಂದೂ ಸ್ಫೂರ್ತಿ ಎಂದೂ ಪರಿಗಣಿಸಿರುವರು. (ಪುಟ 222).

ವ್ಲಾದಿಮಿರ್ ಜಬೋಟಿನ್‌ಸ್ಕಿ (VLADIMIR JABOTINSKY) ಬಲಪಂಥೀಯ ಝಿಯೋನಿಸಮ್‌ನ ದ್ವಿತೀಯ ಜಾಗತಿಕ ಮಹಾಯುದ್ಧಕ್ಕೆ ಮೊದಲಿನ ಕಾಲದ ನಾಯಕರಾಗಿದ್ದು ಅವರು ಝಿಯೋನಿಸಮ್ ಮತ್ತು ಇಂಪೀರಿಯಸಮ್ ಮಧ್ಯೆ ಇರುವ ಮಿತ್ರ ಸಂಬಂಧದ ಬಗ್ಗೆ ನಿಸ್ಸಂಕೋಚವಾಗಿ ಹೀಗೆ ಹೇಳುತ್ತಾರೆ:

ಝಿಯೋನಿಸಮ್ ಮೆಡಿಟೇರಿಯನ್ ಪ್ರದೇಶವನ್ನೆಲ್ಲ ಯುರೋಪಿಯನ್ ಕೈಗಳಲ್ಲಿರಿಸಲು ದೃಢವಾದ ನಿರ್ಧಾರ ಹೊಂದಿದೆ..... ಪೂರ್ವ–ಪಶ್ಚಿಮ ಸಂಘರ್ಷಗಳ ಸಂದರ್ಭಗಳಲ್ಲಿ ನಾವು ಯಾವಾಗಲೂ ಪಶ್ಚಿಮದ ಕಡೆಗಿರುವೆವು. ಏಕೆಂದರೆ ಕಳೆದ ಒಂದು ಸಾವಿರ ವರ್ಷಕಾಲದಲ್ಲಿ – ಬಗ್‌ದಾದ್ ಖಿಲಾಫತ್ ಮಂಗೋಲರಿಂದ ನಾಶಗೊಳಿಸಲ್ಪಟ್ಟ ನಂತರ – ಪಶ್ಚಿಮವು ಪೂರ್ವಕ್ಕಿಂತ ಶ್ರೇಷ್ಠವಾದ ಸಂಸ್ಕೃತಿಯನ್ನು ಹೊಂದಿದೆ..... ನಾವು ಇಂದು ಈ ಸಂಸ್ಕೃತಿಗೆ ಅತ್ಯಂತ ನಿಷ್ಠಾವಂತರಾದವರಾಗಿದ್ದೇವೆ..... ನಾವು ಅರಬಿಗಳ ಚಳುವಳಿಯನ್ನು ಎಂದೂ ಬೆಂಬಲಿಸಲಾರೆವು. ಅದು ಈಗ ನಮಗೆ ವಿರುದ್ಧವಾಗಿದೆ. ಈ ಚಳುವಳಿಗೆ ಸಂಭವಿಸುವ ಪ್ರತಿಯೊಂದು ಹಾನಿಯಿಂದ ನಾವು ಹೃತ್ಪೂರ್ವಕವಾಗಿ ಸಂತೋಷಗೊಳ್ಳುವೆವು. (Brenner 1984

P 75-77) (ಪುಟ 227.)

ತೃತೀಯ ವಿಶ್ವದ ಗುಂಪಿಗೆ ಸ್ವಾತಂತ್ರ್ಯದ ಅಭಿಪ್ರಾಯ ಝಿಯೋನಿಸಮ್ ತತ್ವಸಾರವನ್ನೇ ಬೆದರಿಸುತ್ತದೆ. ಮಾನವ ಹಕ್ಕುಗಳ ಸಂರಕ್ಷಣೆ ಎನ್ನುವುದು ಇಸ್ರಾಯೇಲಿನ ರಾಜಕೀಯ ವ್ಯವಸ್ಥೆಗೆ ಅಪಾಯಕಾರವಾಗಿದೆ..... ಪಲೆಸ್ತೀನಿನ ಜನತೆಗೆ ಮಾಡಲಾದ ಅನ್ಯಾಯ ಎಷ್ಟು ಸ್ಪಷ್ಟವೂ ನೋವನ್ನುಂಟುಮಾಡುವುದೂ ಆಗಿದೆ ಎಂದರೆ ಅದರ ಬಗ್ಗೆ ಬಹಿರಂಗ ಚರ್ಚೆ ಮಾಡಬಾರದು. ಇಸ್ರಾಯೇಲ್ ತೃತೀಯ ಲೋಕದಲ್ಲಿ ಏನನ್ನು ಮಾಡುತ್ತಿದೆ ಎನ್ನುವುದರ ಬಗ್ಗೆ ಚರ್ಚೆ ಖಂಡಿತವಾಗಿಯೂ ಪಾಲೆಸ್ತೀನರ ಹಕ್ಕುಗಳ ಪರಿಶೀಲನೆಯ ಕಡೆಗೆ ನಿಶ್ಚಯವಾಗಿಯೂ ಒಯ್ಯುವುದು. ಮಾನವರ ಮೂಲಭೂತ ಹಕ್ಕುಗಳು ಮತ್ತು ವಿಶ್ವದಲ್ಲಿ ನ್ಯಾಯಪಾಲನೆ ಬಗ್ಗೆ ಚರ್ಚಿಸುವಾಗ ಅವರು (ಎಂದರೆ ಇಸ್ರಾಯೇಲಿಗಳು) ಲೋಕದಲ್ಲಿರುವ ಅನ್ಯರನ್ನು ಕಪಟಿಗಳೆಂದು ಕೂಡಲೆ ನಿಂದಿಸುತ್ತಾರೆ. ಈ ವಿಷಯಕ್ಕೆ ಸಂಬಂಧಿಸಿ ಅವರು (ಬಿಳಿಯರ ಆಡಳಿತೆ ಹೊಂದಿದ್ದ) ಸೌತ್ ಆಫ್ರಿಕನರ ಹಾಗಿದ್ದಾರೆ. (ಪುಟ 236–237).

ಫಿಲಿಪ್ಪೀನ್ಸಿನ ಮನಿಲದಿಂದ ಹೊಂಡುರಾಸಿನ ತೆಗುಸಿಗಲ್ಪ ಮತ್ತು ನಮೀಬಿಯ ವಿಂಡ್ ಹೋಯಿಕ್ ತನಕ ಇಸ್ರಾಯೇಲಿನ ರಹಸ್ಯ ದೂತರು ಭಾಗವಹಿಸಿ ಮುಂದವರಿಯುತ್ತಿರುವ ಯುದ್ಧದಲ್ಲಿ, ಅದು ವಾಸ್ತವಿಕವಾಗಿ ಜಾಗತಿಕ ಯುದ್ಧವೇ ಆಗಿದೆ. ಇಸ್ರಾಯೇಲ್ ಯಾವ ಶತ್ರುವಿನ ವಿರುದ್ಧ ಹೋರಾಡುತ್ತಿದೆ? ಅದು ತೃತೀಯ ಲೋಕದ ಜನರು. ಅವರು ಕ್ರಾಂತಿಯಲ್ಲಿ ಜಯಶಾಲಿಗಳಾಗಬಾರದು. (ಪುಟ 243).

ಇಸ್ರಾಯೇಲ್‌ನ ಭವಿಷ್ಯ ಉತ್ತಮವಾಗಿರುವುದು ಅರಬ್ ಲೋಕ ಮತ್ತು ತೃತೀಯ ಲೋಕದ ಇತರರು ಒಡಕನ್ನು ಹೊಂದಿ ಬಲಹೀನರಾಗಿರುವಾಗ ಮಾತ್ರವಾಗಿದೆ. ಈ ಚಿತ್ರದಲ್ಲಿ ಯಾವುದಾದರೂ ಬದಲಾವಣೆ ಆಗುವುದಾದರೆ ಅದು ಇಸ್ರಾಯೇಲ್‌ಗೆ ಹಾನಿಕರವಾಗುವುದು. (ಪುಟ 247).

ಇಸ್ರಾಯೇಲ್ ರಫ್ತು ಮಾಡುತ್ತಿರುವುದು ದೌರ್ಜನ್ಯಗಾರನ ತರ್ಕಶಾಸ್ತ್ರವನ್ನಾಗಿದೆ – ಯಶಸ್ವಿಯಾಗಿ ಅಧಿನಿವೇಶನಕ್ಕೆ ಬಂಧಿಸಲ್ಪಟ್ಟ ಲೋಕವನ್ನು ಕಾಣುವ ಬಗೆಯನ್ನು. ರಫ್ತು ಮಾಡಲ್ಪಡುವುದು ತಾಂತ್ರಿಕ ಜ್ಞಾನ, ಆಯುಧಗಳು, ಅನುಭವ ಜ್ಞಾನ ಮತ್ತು ನೈಪುಣ್ಯಗಳನ್ನಲ್ಲ – ಒಂದು ವಿಶಿಷ್ಟ ಮನೋಭಾವವನ್ನು. (ಪುಟ 248).

ಝಿಯೋನಿಸಮಿನ ಮೇಲೆ ಉಲ್ಲೇಖಿಸಲಾದ ಯುದ್ಧ ಘೋಷಣೆಗಳಿಗೆ ವಿರುದ್ಧವಾಗಿ ಇಸ್ರಾಯೇಲ್‌ನಲ್ಲಿ ಹೆಚ್ಚು ಸಮಚಿತ್ತತೆಯುಳ್ಳ ನಾಯಕರು ಮೇಲಧಿಕಾರ ಪಡೆಯುವರೆಂದು ಬಲಯುತವಾಗಿ ಪ್ರತೀಕ್ಷಿಸಲಾಗುತ್ತಿದೆ. ಇಸ್ರಾಯೇಲ್‌ನ ಮಧ್ಯಮ ಮನೋಭಾವ ಹೊಂದಿದ ಲೇಖಕರಲ್ಲಿ ಹರ್‌ಕಬಿ ಎಂಬ ಲೇಖಕನನ್ನು ಅವರ ಪ್ರತಿನಿಧಿಯಾಗಿ ಗಣಿಸಬಹುದು. ಆತನು ಝಿಯೋನಿಸ್ಟ್ ತೀವ್ರವಾದಿಗಳ ಕ್ರೂರ ಮನೋಭಾವವನ್ನು ತಿರಸ್ಕರಿಸುತ್ತಾನಲ್ಲದೆ ಅವರ ಮನೋಭಾವ ಝಿಯೋನಿಸ್ಟ್ ಹಿತಾಸಕ್ತಿಗಳಿಗೆ ಮಾರಕವಾಗಬಹುದೆಂದೂ ಅವರ ವರ್ತನೆ ಆತ್ಮಹತ್ಯೆಗೆ ಸಮವೆಂದೂ ಪ್ರತಿಪಾದಿಸಿದ್ದಾನೆ. ಹರ್‌ಕಬಿಯ ಅಭಿಪ್ರಾಯಗಳನ್ನು ಯಹೂದಿ ಚಿಂತಕರು ಮತ್ತು ಬುದ್ಧಿಶಾಲಿಗಳು ಅಂಗೀಕರಿಸಿಲ್ಲ. ಉದಾಹರಣೆಗೆ ಹೇಳುವುದಾದರೆ, ಹರ್‌ಕಬಿ ಸಮಸ್ಯೆಗಳಿಗೆ ಪ್ರಾಯೋಗಿಕವೂ ವಾಸ್ತವಿಕವೂ ಆದ ಪರಿಹಾರಗಳನ್ನು ಸೂಚಿಸುತ್ತಾನೆ. ಹರ್‌ಕಬಿ ಮುಂದಿರಿಸಿದ "ಶಾಂತಿಗೋಸ್ಕರ ಭೂಮಿ" ಎಂಬ ಪ್ರಸ್ತಾಪ ಅರಬಿಗಳಿಗೆ ಶುಭ ಪ್ರತೀಕ್ಷೆಯ ಬಾಗಿಲನ್ನು ತೆರೆಯುತ್ತದೆ.

ನಾನು ದೃಢವಾಗಿ ಹೀಗೆ ನಂಬುತ್ತೇನೆ: ತಾರತಮ್ಯತೆ ಮತ್ತು ಮಾನವರನ್ನು ವಿಭಜಿಸಲು ಯಾವುದಾದರೂ ಕ್ಷೇತ್ರದಲ್ಲಿ ಮಾಡುವ ಪ್ರಯತ್ನ ಕೆಲವರಿಗೆ ತಾತ್ಕಾಲಿಕ ಲಾಭ ದೊರಕಿಸಿ ಕೊಡಬಲ್ಲದಾದರೂ ಅದರ ದುಷ್ಪರಿಣಾಮಗಳು ಮುಂದೆ ಎಲ್ಲರಿಗೂ ಹಾನಿಕರವಾಗುವುದು. ಇಂದಿನ ಈ ಪರಿಸ್ಥಿತಿಯಲ್ಲಿ ಇಸ್ಲಾಮ್ ಗುಣಾತ್ಮಕ ಸಂದೇಶ ನೀಡುತ್ತದೆ. ಅದು ಪ್ರಭಾಶಾಲಿ ಪಾತ್ರ ವಹಿಸಬಹುದಾಗಿದೆ.

ಇಸ್ಲಾಮ್ ವರ್ಗಭೇದ, ವರ್ಣಭೇದಗಳನ್ನು ಮತ್ತು ವರ್ಗೀಯ ದ್ವೇಷಗಳನ್ನು ಬಲಯುತವಾಗಿ ಖಂಡಿಸುತ್ತದೆ. ಯಾವುದೇ ರೀತಿಯಲ್ಲಿ ಶಾಂತಿಭಂಗ ಮಾಡುವುದನ್ನು ಇಸ್ಲಾಮ್ ಇಷ್ಟಪಡುವುದಿಲ್ಲ. ಇದನ್ನು ಸೂಚಿಸುವ ಪವಿತ್ರ ಖುರ್‌ಆನಿನ ಅನೇಕ ವಚನಗಳನ್ನು ಇದಕ್ಕೆ ಮೊದಲು ಉಲ್ಲೇಖಿಸಲಾಗಿದೆ.

ಹಝ್ರತ್ ಮುಹಮ್ಮದ್ ಪೈಗಂಬರ್‌ರನ್ನು(ಸ) ದೇವನ ಪ್ರಕಾಶವೆಂದೂ ಅದು ಪೂರ್ವಕ್ಕೆ ಸೇರಿದುದಾಗಲೀ ಪಶ್ಚಿಮಕ್ಕೆ ಸೇರಿದುದಾಗಲೀ ಅಲ್ಲವೆಂದೂ ಘೋಷಿಸಲಾಗಿದೆ. ಅದರ ಅರ್ಥ ಅದು ಎರಡು ವಿಭಾಗಗಳಿಗೂ ಸಮಾನವಾಗಿ ಹಂಚಲಾದುದೆಂದಾಗಿದೆ. ಪವಿತ್ರ ಖುರ್‌ಆನಿನ ವಚನ ಹೀಗಿದೆ: **"ಅಲ್ಲಾಹನು ಆಕಾಶಗಳ ಮತ್ತು ಭೂಮಿಯ ಪ್ರಕಾಶನಾಗಿದ್ದಾನೆ. ಅವನ ಪ್ರಕಾಶದ ಉಪಮೆ – ಒಂದು (ಹೊಳಪುಳ್ಳ) ಗೋಡೆಗೂಡು ಇದ್ದು ಅದರೊಳಗೆ ದೀಪ ಇಟ್ಟ ಹಾಗೆ. ಆ ದೀಪ ಒಂದು ಗಾಜಿನ ಬುರುಡೆಯೊಳಗಿದೆ. ಆ ಗಾಜಿನ ಬುರುಡೆ ಪ್ರಕಾಶಮಾನವಾದ ನಕ್ಷತ್ರದಂತೆ ಹೊಳೆಯುತ್ತದೆ. ಅದು (ಆ ದೀಪ) ಪೌರ್ವಾತ್ಯವಾಗಲಿ, ಪಾಶ್ಚಿಮಾತ್ಯವಾಗಲಿ ಅಲ್ಲದ ಅನುಗ್ರಹೀತವಾದೊಂದು ಒಲಿವ್ ವೃಕ್ಷದ ತೈಲದಿಂದ ಉರಿಸಲ್ಪಡುತ್ತದೆ; ಅಗ್ನಿ ಆ ತೈಲವನ್ನು ಸ್ಪರ್ಶಿಸಿಲ್ಲವಾದರೂ ಅದು ತನ್ನಿಂತಾನೇ ಪ್ರಕಾಶಿಸುವುದು; ಪ್ರಕಾಶದ ಮೇಲೆ ಪ್ರಕಾಶ. ಅಲ್ಲಾಹನು ತಾನಿಚ್ಛಿಸುವವರನ್ನು ತನ್ನ ಪ್ರಕಾಶದ ಕಡೆಗೆ ಕೊಂಡೊಯ್ಯುತ್ತಾನೆ. ಜನರಿಗೋಸ್ಕರ ಅಲ್ಲಾಹನು ಉಪಮೆಗಳನ್ನು ನೀಡುತ್ತಾನೆ. ಅಲ್ಲಾಹನು ಎಲ್ಲ ವಿಚಾರಗಳನ್ನು ಬಲ್ಲವನಾಗಿದ್ದಾನೆ."** (24:36).

ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ಪವಿತ್ರ ಖುರ್‌ಆನಿನ ಇನ್ನೊಂದು ವಚನದಲ್ಲಿ ಹೀಗೆ ಪರಿಚಯ ಮಾಡಿಕೊಡಲಾಗಿದೆ: **ರಹ್ಮತುನ್ ಲಿಲ್ ಆಲಮೀನ್. "ಲೋಕದ ಎಲ್ಲ ಜನರಿಗೆ ಒಂದು ಅನುಗ್ರಹ"** (21:108).

ಮಧ್ಯಕಾಲೀನ ಮನೋಭಾವ ಹೊಂದಿದ ಅನೇಕ ಮುಸ್ಲಿಮ್ ಮತಪಂಡಿತರು ''ಮೂಲಭೂತವಾದಿಗಳೆಂದು'' ತಪ್ಪಾಗಿ ಕರೆಯಲ್ಪಡುತ್ತಿದ್ದು, ಅವರು ಈ ಕೆಳಗಿನಂತೆ ಅಭಿಪ್ರಾಯ ಹೊಂದಿರುವುದರಿಂದ ನಾನು ಆಶ್ಚರ್ಯಚಕಿತನಾಗಿದ್ದೇನೆ: ಮುಸ್ಲಿಮರು ಮುಸ್ಲಿಮೇತರರೊಂದಿಗೆ ಯುದ್ಧ ಮಾಡಬೇಕೆಂದೂ ಮುಸ್ಲಿಮೇತರರನ್ನು ನಾಶ ಮಾಡುವ ತನಕ ಅಥವಾ ಅವರು ಇಸ್ಲಾಮ್

ಧರ್ಮವನ್ನು ಸ್ವೀಕರಿಸುವ ತನಕ ಯುದ್ಧ ಮುಂದುವರಿಯಬೇಕೆಂದೂ ಅವರು ಅಭಿಪ್ರಾಯ ಹೊಂದಿದ್ದಾರೆ.

ಪವಿತ್ರ ಖುರ್‌ಆನ್ ಪ್ರತಿಪಾದಿಸುವ ಇಸ್ಲಾಮಿನಲ್ಲಿ ಈ ಮತಪಂಡಿತರು ಪ್ರತಿಪಾದಿಸುವ ಮೇಲೆ ವಿವರಿಸಿದಂತಹ "ಪವಿತ್ರ ಯುದ್ಧದ" ವಿಕೃತ, ಭ್ರಷ್ಟ ಕಲ್ಪನೆ ಇರುವುದಿಲ್ಲ. ಧಾರ್ಮಿಕ ಶಾಂತಿಯನ್ನು ಪ್ರತಿಪಾದಿಸುವ ಈ ಪುಸ್ತಕದ ಹಿಂದಿನ ಅಧ್ಯಾಯವಾದ "ಧಾರ್ಮಿಕ ಶಾಂತಿ"ಯಲ್ಲಿ ಇಸ್ಲಾಮಿನ ನೈಜ ತತ್ವಗಳನ್ನು ಪವಿತ್ರ ಖುರ್‌ಆನಿನ ವಚನಗಳ ಮೂಲಕ ವಿವರಿಸಲಾಗಿದೆ. ಆದುದರಿಂದ ಅವುಗಳನ್ನು ಇಲ್ಲಿ ಪುನರಾವರ್ತಿಸುವುದಿಲ್ಲ.

ಕೊನೆಯದಾಗಿ ನಾನು ಹೇಳಲು ಬಯಸುವುದೇನೆಂದರೆ, ಇಸ್ಲಾಮ್ ಮಾನವರನ್ನೆಲ್ಲ ಶಾಂತಿಯಿಂದ ಒಗ್ಗೂಡಿಸಲು ಮತ್ತು ಆ ಮೂಲಕ ಜಾಗತಿಕ ಶಾಂತಿಯನ್ನು ಸ್ಥಾಪಿಸಿ ಮಾನವರನ್ನೆಲ್ಲ ಐಕ್ಯದಿಂದಿರಲು ಆಶಿಸುತ್ತದೆ.

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಮನೋಭಾವ ಹೇಗಿತ್ತೆಂಬುದನ್ನು ಅವರು ತನ್ನ ಕೊನೆಯ ಹಜ್ಜ್ ವೇಳೆಯಲ್ಲಿ ಜನರ ಮಹಾ ಸಮ್ಮೇಳನವನ್ನು ಸಂಬೋಧಿಸಿ ನೀಡಿದ ಈ ಕೆಳಗೆ ಉಲ್ಲೇಖಿಸಲಾಗುವ ಪ್ರವಚನದಿಂದ ಮನವರಿಕೆ ಮಾಡಿಕೊಳ್ಳಬಹುದು. ಹಝ್ರತ್ ಪೈಗಂಬರರು(ಸ) ಹೇಳಿದರು:

**"ಎಲೈ ಜನರೇ, ನನ್ನ ಮಾತುಗಳನ್ನು ಗಮನಕೊಟ್ಟು ಆಲಿಸಿರಿ. ನಾನು ಇಂದು ನಿಮ್ಮ ಮುಂದೆ ಈ ಮೈದಾನದಲ್ಲಿ ನಿಂತು ಪ್ರವಚನ ನೀಡುವ ಹಾಗೆ ಪುನಃ ಎಂದಾದರೂ ನಿಮ್ಮ ಮುಂದೆ ಪ್ರವಚನ ನೀಡಬಲ್ಲೆನೋ ಎಂದು ನನಗೆ ತಿಳಿಯದು. ನಿಮ್ಮ ಜೀವಗಳನ್ನೂ ನಿಮ್ಮ ಸಂಪತ್ತನ್ನೂ ಪರಸ್ಪರ ಆಕ್ರಮಣ ಮಾಡುವುದರಿಂದ ಪುನರುತ್ಥಾನ ದಿನದ ತನಕ ಸಂರಕ್ಷಿಸಿರುವುದಾಗಿ ಅಲ್ಲಾಹನು ವಿಧಿಸಿರುವನು. ಅಲ್ಲಾಹನು ಪ್ರತಿಯೊಬ್ಬನಿಗೆ ವಾರಸು ಹಕ್ಕಾಗಿ ದೊರಕುವ ಪಾಲನ್ನು ನಿಗದಿಪಡಿಸಿರುವನು. ವಾರಸುದಾರರ ಹಕ್ಕುಗಳಿಗೆ ಹಾನಿಯನ್ನುಂಟುಮಾಡುವ ಮರಣಶಾಸನ (ವಸಿಯ್ಯತ್) ನ್ಯಾಯ ಬದ್ಧವಲ್ಲ. ಒಂದು ಮನೆಯಲ್ಲಿ ಜನಿಸಿದ ಮಗು ಆ ಮನೆಯವರದೆಂದು ಗಣಿಸಲಾಗುವುದು. ಯಾರಾದರೂ ಅನೈತಿಕ ವರ್ತನೆಯ ಆಧಾರದಿಂದ ಆ ಮಗು ತನ್ನದೆಂದು ವಾದಿಸುವನಾದರೆ ಅಂತಹ ವ್ಯಕ್ತಿ ಶರೀಅತಿನ ಶಿಕ್ಷೆಗೆ ಗುರಿಯಾಗುವನು. ಯಾರಾದರೂ ಬೇರೆ ಒಬ್ಬನ ಪಿತನನ್ನು ತನ್ನ ಪಿತನೆಂದು ಹೇಳುವನಾದರೆ ಮತ್ತು ಯಾರನ್ನಾದರೂ ಸುಳ್ಳು ಸುಳ್ಳಾಗಿ ತನ್ನ ಯಜಮಾನನೆಂದು ಹೇಳುವನಾದರೆ ಅವನ ಮೇಲೆ ಅಲ್ಲಾಹನ, ಅವನ ದಿವ್ಯದೂತರ ಮತ್ತು ಜನರ ಶಾಪ ಬಂದೆರಗುವುದು.**

**"ಎಲೈ ಜನರೇ, ನಿಮ್ಮ ಪತ್ನಿಯರ ಮೇಲೆ ನಿಮಗೆ ಕೆಲವು ಹಕ್ಕುಗಳಿವೆ. ಹಾಗೆಯೇ ನಿಮ್ಮ ಮೇಲೆ ನಿಮ್ಮ ಪತ್ನಿಯರಿಗೆ ಕೆಲವು ಹಕ್ಕುಗಳಿವೆ. ನಿಮಗೆ ನಿಮ್ಮ ಪತ್ನಿಯರಿಂದ ದೊರಕಬೇಕಾದ ಹಕ್ಕುಗಳು ಇವುಗಳಾಗಿವೆ: ಅವರು ಸುಶೀಲೆಯರಾಗಿ ಜೀವಿಸಬೇಕು. ಪತಿಯ ಕುಟುಂಬಕ್ಕೆ ಮಾನಹಾನಿಯಾಗುವ ರೀತಿಯಲ್ಲಿ ಕೀಳು ಕೆಲಸಗಳನ್ನು ಮಾಡಬಾರದು....... ಪತಿಗೆ ಮತ್ತು ಕುಟುಂಬಕ್ಕೆ ಅಪಮಾನ ಉಂಟುಮಾಡುವ ಕೆಲಸಗಳಲ್ಲಿ ಪತ್ನಿ ನಿರತಳಾಗದಿದ್ದರೆ ನಿಮ್ಮ ಶಕ್ತಿ ಸಾಮರ್ಥ್ಯಗಳಿಗೆ ಅನುಸಾರವಾಗಿ ಆಕೆಗೆ ಆಹಾರ ಮತ್ತು ಉಡುಗೆ ತೊಡುಗೆಗಳ ವ್ಯವಸ್ಥೆ ಮಾಡಬೇಕು. ನೀವು ನಿಮ್ಮ ಪತ್ನಿಯರೊಂದಿಗೆ ಉತ್ತಮವಾಗಿ ವರ್ತಿಸಬೇಕು. ಏಕೆಂದರೆ ಅವರನ್ನು ಅಲ್ಲಾಹನು ನಿಮ್ಮ ಮೇಲ್ವಿಚಾರಣೆಗೆ ನೀಡಿರುವನು. ಮಹಿಳೆ ಬಲಹೀನಳಾಗಿರುತ್ತಾಳೆ. ಅವಳು ಸ್ವತಃ ತನ್ನ ಹಕ್ಕುಗಳನ್ನು ಸಂರಕ್ಷಿಸಲಾರಳು. ನೀವು ಅವರನ್ನು ವಿವಾಹವಾದಾಗ ಅಲ್ಲಾಹನು ನಿಮ್ಮನ್ನು ಅವರ ಹಕ್ಕುಗಳ ಜಾಮೀನುದಾರನನ್ನಾಗಿ ಮಾಡಿರುವನು ಮತ್ತು ಅಲ್ಲಾಹನ ನಿಯಮಗಳ ಪ್ರಕಾರ ಅವರನ್ನು ನಿಮ್ಮ ಮನೆಗೆ ಕರೆದು ತರಲಾಗಿತ್ತು. ಅಲ್ಲಾಹನ ಖಾತರಿಯನ್ನು ತಾತ್ಸಾರ ಮಾಡಬೇಡಿರಿ. ಮಹಿಳೆಯರ ಹಕ್ಕುಗಳ ಬಗ್ಗೆ ಯಾವಾಗಲೂ ಕಾಳಜಿ ವಹಿಸಿರಿ.**

**"ಎಲೈ ಜನರೇ, ನಿಮ್ಮ ಅಧೀನದಲ್ಲಿ ಕೆಲವು ಯುದ್ಧ ಕೈದಿಗಳಿದ್ದಾರೆ. ಅವರಿಗೆ ನೀವು ತಿನ್ನುವುದನ್ನೇ ತಿನ್ನಲು ಕೊಡಿರಿ. ನೀವು ಧರಿಸುವುದನ್ನೇ ಅವರಿಗೆ ಧರಿಸಲು ಕೊಡಿರಿ. ನೀವು ಕ್ಷಮಿಸಲಾರದ ತಪ್ಪು ಅವರು ಮಾಡಿದ್ದರೆ ಅವರನ್ನು ಅನ್ಯರಿಗೆ ಒಪ್ಪಿಸಿರಿ. ಏಕೆಂದರೆ ಅವರು ಸಹ ಅಲ್ಲಾಹನ ಸೃಷ್ಟಿಯಾಗಿದ್ದಾರೆ. ಅವರಿಗೆ ಕಷ್ಟಕೊಡುವುದು ನ್ಯಾಯಬದ್ಧವಲ್ಲ. ಎಲೈ ಜನರೇ, ನಾನು ಹೇಳುವುದನ್ನು ಆಲಿಸಿರಿ ಮತ್ತು ಚೆನ್ನಾಗಿ ನೆನಪಿಟ್ಟುಕೊಳ್ಳಿರಿ. ಪ್ರತಿಯೊಬ್ಬ ಮುಸ್ಲಿಮ್ ಇನ್ನೊಬ್ಬ ಮುಸ್ಲಿಮನ ಸಹೋದರನಾಗಿದ್ದಾನೆ. ನೀವೆಲ್ಲರೂ ಒಂದೇ ಅಂತಸ್ತನ್ನು ಪಡೆದಿರುವಿರಿ. ನೀವೆಲ್ಲರೂ ಯಾವ ಜನಾಂಗಕ್ಕೆ ಸೇರಿದವರಾದರೂ ಯಾವ ಸ್ಥಾನವನ್ನು ಹೊಂದಿದವರಾಗಿದ್ದರೂ ಮನುಷ್ಯರೆಂಬ ಸ್ಥಿತಿಯಲ್ಲಿ ಸಮಾನ ಸ್ಥಾನವನ್ನು ಹೊಂದಿರುವಿರಿ. (ಅವರು ಎರಡು ಕೈಗಳನ್ನು ಎತ್ತಿ ಹಿಡಿದು ಎರಡು ಕೈಗಳ ಬೆರಳುಗಳನ್ನು ಪರಸ್ಪರ ಜೋಡಿಸಿ ಹೀಗೆ ಹೇಳಿದರು:) ಎರಡು ಕೈಗಳ ಬೆರಳುಗಳು ಪರಸ್ಪರ ಸಮವಾಗಿರುವ ಹಾಗೆ ನೀವು ಮಾನವ ವರ್ಗಕ್ಕೆ ಸೇರಿದವರು ಪರಸ್ಪರ ಸಮಾನರಾಗಿದ್ದೀರಿ. ನೀವು ಪರಸ್ಪರ ಒಬ್ಬರಿಗಿಂತ ಇನ್ನೊಬ್ಬರು ಶ್ರೇಷ್ಠರೆಂದು ಹೇಳಲು ನಿಮಗೆ ಯಾವ ಅಧಿಕಾರವೂ ಇಲ್ಲ. ನೀವು ಪರಸ್ಪರ ಸಹೋದರರ ಹಾಗೆ ಇದ್ದೀರಿ. ಎಲೈ ಜನರೇ, ನಿಮ್ಮ ದೇವನು ಒಬ್ಬನೇ, ನಿಮ್ಮ ಪೂರ್ವ ಪಿತನೂ ಒಬ್ಬನೇ. ಒಬ್ಬ ಅರಬಿಗೆ ಅರಬಿಯೇತರನ ಮೇಲೆ ಯಾವ ಶ್ರೇಷ್ಠತೆಯೂ ಇಲ್ಲ. ಅರಬಿಯೇತರನಿಗೆ ಅರಬಿಯ ಮೇಲೆ ಕೂಡ ಶ್ರೇಷ್ಠತೆ ಇಲ್ಲ. ಒಬ್ಬ ಬಿಳಿ ವರ್ಗದವನಿಗೆ ಕರಿ ವರ್ಗದವನ ಮೇಲೆ ಶ್ರೇಷ್ಠತೆ ಇಲ್ಲ. ಅದೇ ರೀತಿ ಕರಿವರ್ಗದವನು ಬಿಳಿ ವರ್ಗದವನಿಗಿಂತ ಶ್ರೇಷ್ಠನಲ್ಲ. ದೇವನಿಗೆ ಮತ್ತು ಮನುಷ್ಯನಿಗೆ ಸಲ್ಲಿಸಬೇಕಾದ ಹಕ್ಕುಗಳ ಈಡೇರಿಕೆಯಲ್ಲಿ ಮಾತ್ರ ಶ್ರೇಷ್ಠತೆ ಇರುತ್ತದೆ. ನಿಮ್ಮ ಪೈಕಿ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನಾದವನು ನಿಮ್ಮ ಪೈಕಿ ಅತ್ಯಂತ ಸಾತ್ವಿಕನಾದವನಾಗಿದ್ದಾನೆ......**

**"ಯಾವ ರೀತಿ ಇದು ಪರಿಶುದ್ಧ ತಿಂಗಳಾಗಿದೆಯೋ, ಇದು ಪರಿಶುದ್ಧ ಪ್ರದೇಶವಾಗಿದೆಯೋ, ಇದು ಪರಿಶುದ್ಧ ದಿನವಾಗಿದೆಯೋ ಅದೇ ರೀತಿ ಪ್ರತಿಯೊಬ್ಬ ಮನುಷ್ಯನ ಜೀವವನ್ನೂ ಅವನ ಸಂಪತ್ತನ್ನೂ ಗೌರವವನ್ನೂ ಪರಿಶುದ್ಧವೆಂದು ಅಲ್ಲಾಹನು ಘೋಷಿಸಿರುವನು. ಯಾರದಾದರೂ ಜೀವ, ಸಂಪತ್ತು ಅಥವಾ ಗೌರವದ ಮೇಲೆ ಆಕ್ರಮಣ ಮಾಡುವುದು ಈ ದಿನ, ಈ ತಿಂಗಳು ಮತ್ತು ಈ ಪ್ರದೇಶಕ್ಕೆ ಅಪಮಾನ ಮಾಡುವ ಹಾಗಿದೆ. ಇಂದಿನ ಈ ಆಜ್ಞೆ ಇಂದಿನ ದಿನಕ್ಕೆ ಮಾತ್ರವಾಗಿರುವುದಲ್ಲ.**

**12ನೇ ಪುಟಕ್ಕೆ**

# ವಿನಾಶದ ಕಡೆಗೆ ಸಾಗುತ್ತಿರುವ ಲೋಕದಲ್ಲಿ ಶಾಂತಿ ಸ್ಥಾಪನೆಗಿರುವ ಮಾರ್ಗೋಪಾಯಗಳು

**ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸರ್ವೋನ್ನತ ನೇತಾರ ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ (ಅಲ್ಲಾಹನು ಅವರಿಗೆ ಸರ್ವ ನೆರವುಗಳನ್ನು ನೀಡಲಿ.) 2023ರ ಪೀಸ್ ಸಿಂಪೋಸಿಯಂನಲ್ಲಿ ಮಾಡಿದ ಭಾಷಣ. 17ನೇ ಪೀಸ್ ಸಿಂಪೋಸಿಯಂನಲ್ಲಿ 1500ಕ್ಕಿಂತ ಹೆಚ್ಚು ಗಣ್ಯರು ಅತಿಥಿಗಳಾಗಿ ಭಾಗವಹಿಸಿದ್ದರು. 40 ದೇಶಗಳ ಸಚಿವರು, ರಾಯಭಾರಿಗಳು ಮತ್ತು ಪಾರ್ಲಿಮೆಂಟ್ ಸದಸ್ಯರು ಅವರಲ್ಲಿ ಸೇರಿದ್ದರು.**

**ಇಂದಿನ ವಿಶ್ವದ ರಾಜಕೀಯ ಸ್ಥಿತಿ ಅಭದ್ರವಾಗಿದ್ದು ಉಕ್ರೈನ್ ಮತ್ತು ತೈವಾನ್‌ಗಳ ಸಂಘರ್ಷ ಆಣವಿಕ ವಿನಾಶದ ಕಿಡಿಯನ್ನು ಹೊತ್ತಿಸಲು ಸಾಧ್ಯತೆ ಇದೆ. 2023ರ ಪೀಸ್ ಸಿಂಪೋಸಿಯಂನಲ್ಲಿ ಅಹ್ಮದಿಯಾ ಜಮಾಅತಿನ ಸರ್ವೋನ್ನತ ನೇತಾರ ಪಂಚಮ ಖಲೀಫರು, ರಕ್ತಪಾತದ ಸುರುಳಿಯನ್ನು ತಡೆಗಟ್ಟದಿದ್ದರೆ ಅದರಿಂದ ಸಂಭವಿಸಬಹುದಾದ ಅಪಾಯಕರ ಪರಿಣಾಮದ ಬಗ್ಗೆ ಮುನ್ನೆಚ್ಚರಿಕೆ ನೀಡಿದರು.**

ಸಾಂಪ್ರದಾಯಕ ಪ್ರಾರ್ಥನೆಗಳನ್ನು ಪಠಿಸಿದ ನಂತರ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಹೀಗೆ ಹೇಳಿದರು:

ಎಲ್ಲ ಗಣ್ಯ ಅತಿಥಿಗಳಿಗೆ ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವಬರಕಾತುಹೂ – ನಿಮ್ಮೆಲ್ಲರ ಮೇಲೆ ಅಲ್ಲಾಹನ ಶಾಂತಿ ಮತ್ತು ಅನುಗ್ರಹ ಸುರಿಸಲ್ಪಡಲಿ. ಮೊತ್ತಮೊದಲು, ಈ ಸಂಜೆ ಇಲ್ಲಿಗೆ ಬಂದು ಸೇರಿದ ನಮ್ಮ ಎಲ್ಲ ಅತಿಥಿಗಳಿಗೆ ಕೃತಜ್ಞತೆ ಅರ್ಪಿಸುತ್ತೇನೆ. ಕಳೆದ ಕೆಲವು ವರ್ಷಗಳಲ್ಲಿ ಕೋವಿಡ್ ಮಹಾಮಾರಿಯ ಕಾರಣದಿಂದ ಇಂತಹ ಸಮಾರಂಭ ಜರಗಿಸಲು ಸಾಧ್ಯವಾಗಿರಲಿಲ್ಲ. ನಾಲ್ಕು ವರ್ಷಗಳ ವಿರಾಮದ ನಂತರ ನಮ್ಮ ಹಳೆಯ ಮತ್ತು ಹೊಸ ಸ್ನೇಹಿತರಿಗೆ ಸತ್ಕಾರ ಮಾಡಲು ನಮಗೆ ಸಾಧ್ಯವಾದುದರಿಂದ ನಾವು ಸಂತೋಷಪಡುತ್ತಿದ್ದೇವೆ. ಬೈತುಲ್ ಫುತೂಹ್ ಮಸ್‌ಜಿದ್ ಸಂಕೀರ್ಣದ ಪುನರ್‌ನಿರ್ಮಾಣದ ಉದ್ಘಾಟನೆ ಮತ್ತು ಅದರೊಂದಿಗೆ ನಮ್ಮ ನ್ಯಾಶನಲ್ ಪೀಸ್ ಸಿಂಪೋಸಿಯಂ ಜರಗಿಸಲು ಈ ಸಮಾರಂಭವನ್ನು ಏರ್ಪಡಿಸಲಾಗಿದೆ. ಆದುದರಿಂದ ನಾನು ಮಸ್‌ಜಿದ್ ನಿರ್ಮಾಣದ ಉದ್ದೇಶಲಕ್ಷ್ಯಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸುವೆನು ಮತ್ತು ಲೋಕದ ಪ್ರಚಲಿತ ಪರಿಸ್ಥಿತಿ ಬಗ್ಗೆ ಹಾಗೂ ಜಾಗತಿಕ ಶಾಂತಿ ಮತ್ತು ಭದ್ರತೆ ಗಳಿಸುವ ಬಗ್ಗೆ ನನ್ನ ಚಿಂತನೆಗಳನ್ನು ನಿಮ್ಮ ಮುಂದೆ ಇರಿಸುವೆನು.

## ನೈಜ ಮುಸ್ಲಿಮನ ಮೂಲ ಮೌಲ್ಯಗಳು

ನನ್ನ ಧರ್ಮದ ನಂಬಿಕೆ ಹೇಗಿದೆ ಎಂದರೆ ಸಹಜೀವಿಗಳಾದ ಮನುಷ್ಯರ ಮತ್ತು ದೇವನ ಎಲ್ಲ ಸೃಷ್ಟಿಗಳ ಹಕ್ಕುಗಳನ್ನು ಈಡೇರಿಸುವ ತನಕ ಸರ್ವಶಕ್ತನಾದ ಅಲ್ಲಾಹನ ಹಕ್ಕುಗಳನ್ನು ಈಡೇರಿಸಲು ಮತ್ತು ಅವನ ಸಾಮೀಪ್ಯವನ್ನು ಗಳಿಸಲು ಸಾಧ್ಯವಿಲ್ಲ. ಆದುದರಿಂದ ನೈಜ ಮುಸ್ಲಿಮರು ಶಾಂತಿಯಿಂದ ಜೀವಿಸುತ್ತಾರೆ ಮತ್ತು ಶಾಂತಿ, ಸಹನೆ ಹಾಗೂ ಸಮಾಜದಲ್ಲಿ ಸೌಹಾರ್ದಭಾವನೆಯನ್ನು ಪ್ರಚಾರ ಮಾಡುತ್ತಾರೆ. ಅಹ್ಮದಿ ಮುಸ್ಲಿಮರಾದ ನಾವು ಹೀಗೆ ನಂಬುತ್ತೇವೆ: ಇಸ್ಲಾಮ್ ಧರ್ಮದ ಮೂಲ ತತ್ವಗಳಾದ ಸರ್ವಶಕ್ತನಾದ ಅಲ್ಲಾಹನ ಆರಾಧನೆಯನ್ನು ಮಾಡುವ ಬಗ್ಗೆ ಮತ್ತು ಮಾನವರ ಹಕ್ಕುಗಳನ್ನು ಈಡೇರಿಸಿ ಲೋಕದಾದ್ಯಂತ ಶಾಂತಿ ಮತ್ತು ಸೌಹಾರ್ದವನ್ನು ಹರಡಲು ಮಾನವರಿಗೆ ಉಪದೇಶಿಸಲು ನಮ್ಮ ಸಂಘಟನೆಯ ಸ್ಥಾಪಕರನ್ನು ಸರ್ವಶಕ್ತನಾದ ಅಲ್ಲಾಹನು ನಿಯೋಜಿಸಿರುವನು. ದೇವನ ಆರಾಧನೆ ಮತ್ತು ಮಾನವರ ಹಕ್ಕುಗಳ ಈಡೇರಿಸುವಿಕೆ ಮಧ್ಯೆ ನೇರವಾದ ಪರಸ್ಪರ ಸಂಬಂಧವಿದೆ ಎಂದು ಸ್ಪಷ್ಟಪಡಿಸಿದ ನಮ್ಮ ಜಮಾಅತಿನ ಸ್ಥಾಪಕರು ನಮಗೆ ಶಾಂತಿಯ ಬಳುವಳಿ ನೀಡಿದ್ದಾರೆ.

ಮಸ್‌ಜಿದ್ ಸಂಕೀರ್ಣದ ಭಾಗವಾಗಿರುವ ಈ ಕಟ್ಟಡದಲ್ಲಿ ಜಮಾಯಿಸುವಾಗ ನಾವು ಈ ತತ್ವವನ್ನು ನೆನಪಿನಲ್ಲಿಡುತ್ತಿದ್ದೇವೆ. ಮಸ್‌ಜಿದ್‌ಗಳನ್ನು ಸರ್ವಶಕ್ತನಾದ ಅಲ್ಲಾಹನ ಆರಾಧನೆಗೋಸ್ಕರ ನಿರ್ಮಿಸಲಾಗುತ್ತಿದೆ. ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಲಾಗಿದೆ: ದೇವನ ಸೃಷ್ಟಿಗಳ ಹಕ್ಕುಗಳನ್ನು ಒಬ್ಬನು ಈಡೇರಿಸಿ ಕೊಡದಿದ್ದರೆ ಅವನ ಆರಾಧನೆಗಳೂ ಬೇಡಿಕೆಗಳೂ ತಿರಸ್ಕರಿಸಲ್ಪಡುವುವು. ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಹೀಗೆ ಹೇಳುತ್ತಿದೆ: ಅನ್ಯರ ಹಕ್ಕುಗಳ ಬಗ್ಗೆ ಕಾಳಜಿ ಹೊಂದದವರು ಮಾಡುವ ಅರಾಧನೆ ಅವರ ಮೋಕ್ಷಕ್ಕೆ ಬದಲಾಗಿ ಅವರ ಅಧಃಪತನಕ್ಕೆ ಮತ್ತು ಹೀನೈಸುವಿಕೆಗೆ ಹೇತುವಾಗುವುದು.

## ಮಸ್‌ಜಿದ್‌ಗಳು – ಶಾಂತಿಯ ಧಾಮ

ಮಸ್‌ಜಿದ್‌ಗಳನ್ನು ಪವಿತ್ರ ಕಅ್‌ಬದ ಕಡೆಗೆ ಅಭಿಮುಖೀಕರಿಸಿ, ಎಂದರೆ ಮಕ್ಕದಲ್ಲಿರುವ ಪವಿತ್ರ ಭವನದ ಕಡೆಗೆ ಅಭಿಮುಖೀಕರಿಸಿ ನಿರ್ಮಿಸಿ ಆರಾಧಿಸಬೇಕೆಂದು ಮುಸ್ಲಿಮರಿಗೆ ಆಜ್ಞಾಪಿಸಲಾಗಿದೆ. ಆದರೆ ಕೇವಲ ಶಾರೀರಿಕವಾಗಿ ಪವಿತ್ರ ಕಅ್‌ಬದ ಕಡೆಗೆ ಅಭಿಮುಖೀಕರಿಸಿದರೆ ಸಾಕಾಗಲಾರದು. ಮುಸ್ಲಿಮರು ಮತ್ತು ಅವರ ಮಸ್‌ಜಿದ್‌ಗಳು ಪವಿತ್ರ ಕಅ್‌ಬದ ನಿರ್ಮಾಣದ ಉದ್ದೇಶಲಕ್ಷ್ಯಗಳನ್ನು ಪವಿತ್ರ ಖುರ್‌ಆನ್ ಅಧ್ಯಾಯ 3 ವಚನ 98ರಲ್ಲಿ ವಿವರಿಸಿದ ರೀತಿಯಲ್ಲಿ ಈಡೇರಿಸಬೇಕಾಗಿದೆ. ಅಲ್ಲಾಹನ ಪವಿತ್ರ ಭವನವನ್ನು ಪ್ರವೇಶಿಸಿದವನು ಶಾಂತಿಯನ್ನು ಪ್ರವೇಶಿಸುತ್ತಾನೆಂದು ಆ ವಚನದಲ್ಲಿ ಹೇಳಲಾಗಿದೆ. ಪವಿತ್ರ ಖುರ್‌ಆನಿನ ಈ ವಚನ ಹೀಗೆ ಸೂಚಿಸುತ್ತದೆ: ನೈಜ ಮುಸ್ಲಿಮನು ಮಸ್‌ಜಿದನ್ನು ಪ್ರವೇಶಿಸುವಾಗ ತನ್ನನ್ನು ಶಾಂತಿಗೆ ಪ್ರವೇಶಗೊಳಿಸಬೇಕು ಮತ್ತು ದೇವನ ಹಕ್ಕುಗಳನ್ನೂ ಆಜ್ಞೆಗಳನ್ನೂ ಈಡೇರಿಸಿ ಅನ್ಯರಿಗೆ ಶಾಂತಿಯ ಮತ್ತು ಭದ್ರತೆಯ ಮಾರ್ಗದರ್ಶಕ ಜ್ಯೋತಿಯಾಗಬೇಕು.

ನಮ್ಮ ಎಲ್ಲ ಮಸ್‌ಜಿದ್‌ಗಳು ಆಧ್ಯಾತ್ಮಿಕವಾಗಿ ಪವಿತ್ರ ಕಅ್‌ಬದ ಪ್ರತಿಬಿಂಬಗಳಾಗಿವೆ. ಅವು ಸರ್ವಶಕ್ತನಾದ ದೇವನನ್ನು ಆರಾಧನೆ ಮಾಡುವ ಧಾಮವಾಗಿದೆಯಲ್ಲದೆ ಮಾನವರ ಹಕ್ಕುಗಳನ್ನು ಈಡೇರಿಸುವ ಮತ್ತು ಲೋಕದಲ್ಲಿ ಶಾಂತಿ ಸ್ಥಾಪನೆ ಮಾಡುವ ಮಾರ್ಗಗಳೂ ಆಗಿವೆ.

ಮುಸ್ಲಿಮರಾದ ನಾವು ದಿನಂಪ್ರತಿ ಐದು ಹೊತ್ತು ನಮಾಝ್ ಮಾಡುತ್ತೇವೆ. ನಮ್ಮ ಈ ಪ್ರಾರ್ಥನೆಗಳಲ್ಲಿ ಪವಿತ್ರ ಖುರ್‌ಆನಿನ ಪ್ರಥಮ ಅಧ್ಯಾಯವನ್ನು ಪಠಿಸುವುದು ಕಡ್ಡಾಯವಾಗಿದೆ. ಈ ಅಧ್ಯಾಯದ ದ್ವಿತೀಯ ವಚನದಲ್ಲಿ ಸರ್ವಶಕ್ತನಾದ ಅಲ್ಲಾಹನು ಘೋಷಿಸುತ್ತಾನೆ ಅವನು ಸರ್ವಲೋಕಗಳ ಮತ್ತು ಎಲ್ಲ ಜನರ ಪರಿಪಾಲಕನೆಂದು. ಅವನು ಕೇವಲ ಮುಸ್ಲಿಮರ ಪಾಲನೆ ಪೋಷಣೆ ಮಾಡುವವನಲ್ಲ. ಅವನು ಕ್ರೈಸ್ತರ, ಯಹೂದಿಯರ, ಹಿಂದುಗಳ, ಸಿಖ್ಖರ ಮತ್ತು ಇತರ ಧರ್ಮಗಳ ಅನುಯಾಯಿಗಳ ಪಾಲನೆ ಪೋಷಣೆ ಮಾಡುವವನಾಗಿದ್ದಾನೆ. ಅವನು ಅವರೆಲ್ಲರಿಗೂ ಜೀವ ನೀಡಿ ಅವರೆಲ್ಲರ ಮೂಲಭೂತ ಆವಶ್ಯಕತೆಗಳನ್ನು ತನ್ನ ಕಾರುಣ್ಯದ ಮೂಲಕ ಈಡೇರಿಸುತ್ತಾನೆ. ಆದುದರಿಂದ ಮುಸ್ಲಿಮರಿಗೆ ಪವಿತ್ರ ಖುರ್‌ಆನ್ ಅದರ ಪ್ರಾರಂಭದ ವಚನಗಳಲ್ಲಿಯೇ ಹೀಗೆ ಕಲಿಸಿದೆ: ಮುಸ್ಲಿಮರು ಅನ್ಯಧರ್ಮಗಳ ಅಥವಾ ವಿಶ್ವಾಸಗಳ ಜನರನ್ನು ಎಂದೂ ಹಾನಿಗೀಡಾಗುವಂತೆ ಮಾಡಬಾರದು. ಯಾವುದೇ ರೀತಿಯ ದ್ವೇಷ ಅನ್ಯರ ವಿರುದ್ಧ ಹೊಂದಬಾರದು ಮತ್ತು ಯಾವುದೇ ರೀತಿ ಅನ್ಯರ ಬಗ್ಗೆ ಕೆಟ್ಟ ಮಾತು ಹೇಳಬಾರದು. ಏಕೆಂದರೆ ನಾವೆಲ್ಲರೂ ಸರ್ವಶಕ್ತನಾದ ಏಕ ದೇವನ ಸೃಷ್ಟಿಗಳಾಗಿದ್ದೇವೆ.

ನಮ್ಮ ದೃಢವಿಶ್ವಾಸವೇನೆಂದರೆ, ಸರ್ವಶಕ್ತನಾದ ಅಲ್ಲಾಹನು ತನ್ನ ಕಾರುಣ್ಯದ ಬಗ್ಗೆ ಮುಚ್ಚುಗೆ ಸೂಚಿಸದೆ ಇರುವವರಿಗೆ ಮತ್ತು ಅವನ ಅಸ್ತಿತ್ವವನ್ನೇ ನಿರಾಕರಿಸುವವರಿಗೆ ಸಹ ಅವರ ಆವಶ್ಯಕತೆಗಳನ್ನು ಈಡೇರಿಸಿಕೊಡುತ್ತಾನೆ ಮತ್ತು ಅವರ ದುಡಿಮೆಯ ಪ್ರತಿಫಲವನ್ನು ನೀಡುತ್ತಾನೆ. ಎಲ್ಲರೊಂದಿಗೂ ಕಾರುಣ್ಯದಿಂದ ವರ್ತಿಸುವ ದೇವನನ್ನು ನಾವು ನಂಬುತ್ತಿದ್ದೇವೆ. ಅಂತಹ ಕಾರುಣ್ಯಮಯನಾದ ದೇವನನ್ನು ನಂಬುವವರು ಅನ್ಯರ ಶಾಂತಿ ಮತ್ತು ಕ್ಷೇಮಕ್ಕೆ ಭಂಗವನ್ನುಂಟುಮಾಡಲಾರರು. ಅಂತಹ ದಯಾವಂತನಾದ ದೇವನ ಸಾಮೀಪ್ಯ ಮತ್ತು ಪ್ರೀತಿ ಗಳಿಸಲಿಕ್ಕೋಸ್ಕರ ಅಹ್ಮದಿಯಾ ಮುಸ್ಲಿಮ್ ಸಂಘಟನೆ ಶಾಂತಿ ಮತ್ತು ಸೌಹಾರ್ದವನ್ನು ಲೋಕದಾದ್ಯಂತ ಬೆಳೆಸಲು ಪರಿಶ್ರಮ ಮಾಡುತ್ತಿದೆ. ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಸ್ಥಾಪಿಸಲ್ಪಟ್ಟ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಸರ್ವಶಕ್ತನಾದ ಅಲ್ಲಾಹನ ಕಡೆಗೆ ಅನ್ಯರನ್ನು ಆಮಂತ್ರಿಸುವುದರೊಂದಿಗೆ ತನ್ನ ಸ್ಥಾಪನೆಯ ಕಾಲದಿಂದ ಮೊದಲುಗೊಂಡು ಪರಸ್ಪರ ಸೌಹಾರ್ದ ಮತ್ತು ಸಹನೆಯ ಸಂದೇಶವನ್ನು ಪಾಲನೆ ಮಾಡುತ್ತಾ ಲೋಕದಲ್ಲಿ ವಾಸ್ತವಿಕ ಶಾಂತಿಯನ್ನು ಸ್ಥಾಪಿಸಲು ಪ್ರಯತ್ನಿಸುತ್ತಿದೆ.

## ಶಾಂತಿ ಸ್ಥಾಪನೆ ಒಂದು ಸುವರ್ಣ ಕೀಲಿಗೈ

ನಾನು ಮುಂಚೆ ಹೇಳಿದ ಹಾಗೆ ಕೋವಿಡ್ ಮಹಾಮಾರಿಗೆ ಮೊದಲು ನಾವು ಪ್ರತಿ ವರ್ಷ ನ್ಯಾಶನಲ್ ಪೀಸ್ ಸಿಂಪೋಸಿಯಂ ಜರಗಿಸುತ್ತಿದ್ದೆವು. ನಮಗೆ ಈ ಸಮಾರಂಭವನ್ನು ಪುನರಾರಂಭಿಸಿ ಲೋಕದಲ್ಲಿ ಶಾಂತಿ ಸ್ಥಾಪನೆಗೋಸ್ಕರ ಪರಿಶ್ರಮಿಸಲು ಸಾಧ್ಯವಾದುದಕ್ಕೆ ನಾವು ಕೃತಜ್ಞರಾಗಿದ್ದೇವೆ. ಇಂತಹ ಸಮಾವೇಶಗಳನ್ನೂ ಕಾರ್ಯಕ್ರಮಗಳನ್ನೂ ಲೋಕದಾದ್ಯಂತ ನಾವು ಏರ್ಪಡಿಸುತ್ತಿದ್ದೇವೆ. ಮಾನವೀಯತೆಯ ಧ್ವಜದಡಿಯಲ್ಲಿ ಎಲ್ಲ ಜನರನ್ನು ಅವರ ಜಾತಿ, ಧರ್ಮ ಮತ್ತು ವರ್ಣವನ್ನು ಪರಿಗಣಿಸದೆ ಒಟ್ಟಿಗೆ ಸೇರಿಸಿ ಜಾಗತಿಕ ಶಾಂತಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಪರಿಹಾರವನ್ನು ಗುರುತಿಸಲು ಪ್ರಯತ್ನಿಸುತ್ತಿದ್ದೇವೆ. ವಾಸ್ತವಿಕ ಮತ್ತು ಶಾಶ್ವತ ಶಾಂತಿ ಸ್ಥಾಪಿಸಲ್ಪಟ್ಟು ಮಾನವರು ಸ್ವಯಂಕೃತ ವಿನಾಶದಿಂದ ರಕ್ಷಿಸಲ್ಪಡಬೇಕೆಂಬ ಅಭಿಲಾಷೆಯೇ ನಮ್ಮ ಪ್ರೇರಕ ಶಕ್ತಿಯಾಗಿದೆ. ಲೋಕವು ವಿನಾಶದ ಪ್ರಪಾತದ ಬಳಿ ನಿಂತಿರುವ ಬಗ್ಗೆ ಜನರಿಗೆ ಬೋಧಿಸುವುದು ಮತ್ತು ಮಾನವರು ತಮ್ಮ ಹೆಜ್ಜೆಯನ್ನು ಹಿಂದೆ ಸರಿಸಿ ತಮ್ಮ ಹೊಣೆಗಾರಿಕೆಗಳನ್ನು, ಇಂದಿನ ಕಾಲದ ಜನರಿಗೆ ಸಂಬಂಧಿಸಿದ ಹೊಣೆಗಾರಿಕೆಗಳನ್ನು ಮಾತ್ರವಲ್ಲ ಮುಂದಿನ ಪೀಳಿಗೆಗಳಿಗೆ ಸಂಬಂಧಿಸಿದ ಹೊಣೆಗಾರಿಕೆಗಳನ್ನೂ ಪರಿಗಣಿಸುವಂತೆ ಮಾಡುವುದೇ ನಮ್ಮ ಉದ್ದೇಶಲಕ್ಷ್ಯವಾಗಿದೆ.

ನಾವು ಇಂತಹ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದೇವೆ. ಆದುದರಿಂದ ನಾವು ಘೋಷಿಸುತ್ತೇವೆ, ಶಾಂತಿಯಲ್ಲಿ ಮಾತ್ರ ಲೋಕದ ಮೋಕ್ಷ ಸಾಧ್ಯವಾಗುವುದು. ಸಾಮಾಜಿಕ ಅಭಿವೃದ್ಧಿ ಮತ್ತು ಪ್ರಗತಿಗೆ ಮತ್ತು ಮುಂದಿನ ಪೀಳಿಗೆಗಳಿಗೆ ಏಳಿಗೆ ಮತ್ತು ಸಮೃದ್ಧಿಯ ಬಾಗಿಲು ತೆರೆಯುವಂತಹ ಸುವರ್ಣ ಕೀಲಿಗೈ ಶಾಂತಿ ಸ್ಥಾಪನೆಯಾಗಿದೆ. ನಾವು ದೀರ್ಘಕಾಲದಿಂದ ಈ ಸಂದೇಶ ಪ್ರಚಾರ ಮಾಡುತ್ತಿದ್ದರೂ ಅವುಗಳನ್ನು ಆಲಿಸುವ ಕಿವಿಗಳು ಕಿವುಡಾಗಿವೆ. ಇದಕ್ಕೆ ಮೂಲ ಕಾರಣ ಲೋಕದಲ್ಲಿರುವ ಬಹುತೇಕ ಜನರು ದೇವನಿಂದ ದೂರ ಸರಿದಿರುವುದಾಗಿದೆ ಎಂದು ನಾನು ನಂಬುತ್ತೇನೆ. ಭೌತಿಕ ಲಾಭಗಳ ಗಳಿಕೆ ಮತ್ತು ಲೌಕಿಕ ಹವ್ಯಾಸಗಳಲ್ಲಿ ತಲ್ಲೀನರಾಗುವುದೇ ತಮ್ಮ ಅಗ್ರಗಣ್ಯ ಉದ್ದೇಶ ಲಕ್ಷ್ಯವೆಂದು ಅವರು ಗಣಿಸುತ್ತಿದ್ದಾರೆ. ಇಂತಹ ನಿರರ್ಥಕ ಮತ್ತು ದುರಾಶೆಯ ಬೆನ್ನಟ್ಟುವಿಕೆಯ ಕಾರಣದಿಂದಲೇ ಮಾನವರು ಇಪ್ಪತ್ತನೆಯ ಶತಮಾನದಲ್ಲಿ ಎರಡು ಅತ್ಯಂತ ವಿನಾಶಕಾರಿ ಭೀಕರ ಯುದ್ಧಗಳಿಗೆ ಎಳೆಯಲ್ಪಟ್ಟರು. ಹಿಂದೆ ಸಂಭವಿಸಿದ ಭಯಾನಕ ಘಟನೆಗಳಿಂದ ಪಾಠವನ್ನು ಕಲಿಯುವುದಕ್ಕೆ ಬದಲಾಗಿ ಲೋಕವು ಪುನಃ ಯುದ್ಧ ಮತ್ತು ಸಂಘರ್ಷಗಳಲ್ಲಿ ತೊಡಗಿಸಿಕೊಳ್ಳುತ್ತಾ ಇದೆ.

ಇಲ್ಲಿ ಒಂದು ವಿಷಯವನ್ನು ಸ್ಪಷ್ಟಪಡಿಸಲು ಇಚ್ಛಿಸುತ್ತೇನೆ. ಮುಸ್ಲಿಮರು ಮಾತ್ರ ದೂಷಣೆಗೆ ಪಾತ್ರರು ಅಥವಾ ಮುಸ್ಲಿಮೇತರರು ಮಾತ್ರ ದೂಷಣೆಗೆ ಪಾತ್ರರು ಎಂದು ನಾನು ನಂಬುವುದಿಲ್ಲ. ಕ್ರೌರ್ಯ ಮತ್ತು ಅನ್ಯಾಯ ಒಂದು ಗುಂಪಿಗೆ ಮತ್ತು ಒಂದು ದೇಶಕ್ಕೆ ಮಾತ್ರ ಸೀಮಿತವಾಗಿದೆ ಎಂದು ನಾನು ನಂಬುವುದಿಲ್ಲ. ಯಾವುದೇ ಮುಸ್ಲಿಮ್ ಅಥವಾ ಇಸ್ಲಾಮಿಕ ಗುಂಪು ಕ್ರೂರ ಕೃತ್ಯಗಳನ್ನೂ ಬರ್ಬರ ಹಿಂಸೆಗಳನ್ನೂ ಮಾಡುತ್ತಾ ತಮ್ಮ ಧಾರ್ಮಿಕ ತತ್ವಗಳನ್ನು ಉಲ್ಲಂಘಿಸುವುದಾದರೆ ಅವರು ಅಪರಾಧಿಗಳಾಗಿದ್ದು ಕಠಿಣವಾಗಿ ಖಂಡನಾರ್ಹರಾಗಿದ್ದಾರೆ.

ಇಸ್ಲಾಮ್ ಧರ್ಮ ತತ್ವ ಪ್ರಕಾರ ಅನಿವಾರ್ಯ ಪರಿಸ್ಥಿತಿಯಲ್ಲಿ ಪ್ರತಿರೋಧಕ ಯುದ್ಧಗಳನ್ನು ಮಾಡಲು ಮಾತ್ರ ಅನುಮತಿಸಲಾಗಿದೆ. ಧರ್ಮವನ್ನು ನಾಶಮಾಡಲು ಮತ್ತು ಧಾರ್ಮಿಕ ವಿಶ್ವಾಸದ ಸ್ವಾತಂತ್ರ್ಯವನ್ನು ನಾಶಮಾಡಲು ಶತ್ರುಗಳು ಯುದ್ಧ ಮೂಲಕ ಪ್ರಯತ್ನಿಸುವಾಗ ಮಾತ್ರ ಪ್ರತಿರೋಧಾತ್ಮಕ ಯುದ್ಧ ಮಾಡಬಹುದಾಗಿದೆ. ಭೂಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳಲು ಮತ್ತು ಭೌಗೋಳಿಕ ಹಂಬಲಗಳನ್ನು ಈಡೇರಿಸಲು ಆಕ್ರಮಣಕಾರಿ ಯುದ್ಧಗಳನ್ನು ಮಾಡುವುದನ್ನು ಇಸ್ಲಾಮ್ ಎಂದೂ ಅನುಮತಿಸಿಲ್ಲ; ಮುಂದೆ ಎಂದೂ ಅನುಮತಿಸಲಾರದು.

## ಯುದ್ಧ ಕಾಲದಲ್ಲಿ ಸಂಘರ್ಷವನ್ನು ಪರಿಹರಿಸಲು ಪ್ರಾಯೋಗಿಕ ಮಾರ್ಗ

ಶಾಂತಿ ಸ್ಥಾಪನೆ ಮಾಡಲು ಪ್ರತಿಯೊಂದು ಸಂದರ್ಭವನ್ನು ಅವು ಫಲಕಾರಿಯಾಗುವುದು ಅಸಾಧ್ಯವೆಂದು ತೋರುವುದಾದರೂ ಬಳಸಿಕೊಳ್ಳಬೇಕೆಂದು ಪವಿತ್ರ ಖುರ್‌ಆನ್ ಉಪದೇಶಿಸುತ್ತಿದೆ. ಪವಿತ್ರ ಖುರ್‌ಆನ್ ಅಧ್ಯಾಯ 49 ವಚನ 10ರಲ್ಲಿ ಸರ್ವಶಕ್ತನಾದ ಅಲ್ಲಾಹನು ಹೀಗೆ ಹೇಳಿದ್ದಾನೆ: ಎರಡು ದೇಶಗಳು ಯುದ್ಧ ಮಾಡಲು ಪ್ರಾರಂಭಿಸಿದರೆ ಅವರ ಮಧ್ಯೆ ಸಂಧಾನವೇರ್ಪಡಿಸಿ ಶಾಂತಿ ಸ್ಥಾಪಿಸಬೇಕು. ಅನಂತರ ಒಂದು ದೇಶ ಆಕ್ರಮಣವನ್ನು ಪ್ರಾರಂಭಿಸಿದರೆ ಇತರ ದೇಶಗಳು ಆಕ್ರಮಣ ಮಾಡುವ ದೇಶವನ್ನು ತಡೆಗಟ್ಟಲು ಆವಶ್ಯಕವಾದ ಬಲಪ್ರಯೋಗ ಮಾಡಬೇಕು. ಆದರೆ ಆಕ್ರಮಣ ಕೊನೆಗೊಂಡರೆ ಪ್ರತೀಕಾರಾತ್ಮಕ ಕ್ರಮಗಳನ್ನು ಕೈಗೊಳ್ಳಬಾರದು.

ಪವಿತ್ರ ಖುರ್‌ಆನ್ ಅಧ್ಯಾಯ 5 ವಚನ 9ರಲ್ಲಿ ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಹೇಳುತ್ತದೆ: ಒಂದು ದೇಶದವರ ಅಥವಾ ಜನಾಂಗದವರ ಶತ್ರುತ್ವ ಅವರ ವಿರುದ್ಧ ಅನ್ಯಾಯದಿಂದ ವರ್ತಿಸಲು ನಿಮ್ಮನ್ನು ಪ್ರೇರೇಪಿಸಬಾರದು.

ಆದುದರಿಂದ ಯುದ್ಧ ಕೊನೆಗೊಂಡ ನಂತರ ಒಂದು ದೇಶದ ವಿರುದ್ಧ ದಂಡನಾತ್ಮಕ ಪ್ರತಿಬಂಧಗಳನ್ನು ಹೇರಿ ಅವರ ಸ್ವಾತಂತ್ರ್ಯವನ್ನೂ ಸಮೃದ್ಧಿಯನ್ನೂ ತಡೆಗಟ್ಟುವುದು ಸರಿಯಾದ ಕ್ರಮವಾಗಿರುವುದಿಲ್ಲ. ಕೆಲವು ದಿವಸಗಳ ಹಿಂದೆ ಉಕ್ರೈನ್ ಯುದ್ಧದ ಪ್ರಥಮ ವಾರ್ಷಿಕ ದಿನವಾಗಿತ್ತು. ಈ ಯುದ್ಧ ಹೇಗೆ ನಿಲ್ಲಿಸಲ್ಪಡುವುದು ಎಂಬುದರ ಬಗ್ಗೆ ಯಾವುದೇ ಚಿಹ್ನೆ ಕಾಣಿಸದಿರುವುದು ದುಃಖಕರವಾಗಿದೆ. ಹೀಗಿದ್ದರೂ ಕೆಲವು ರಾಜಕೀಯ ಧುರೀಣರು ಹೀಗೆ ಹೇಳುತ್ತಿದ್ದಾರೆ: ಯುದ್ಧ ಕೊನೆಗೊಂಡರೆ ರಶ್ಯ ದೇಶವನ್ನು ತೀವ್ರವಾದ ದಂಡನಾತ್ಮಕ ಪ್ರತಿಬಂಧಗಳಿಗೆ ಗುರಿಪಡಿಸಬೇಕು ಮತ್ತು ಅದರ ಕೃತ್ಯಗಳಿಗೆ ಪರಿಹಾರ ನೀಡಲು ನಿರ್ಬಂಧಿಸಬೇಕು.

ಇತ್ತೀಚೆಗೆ "ದಿ ಟೈಮ್ಸ್" ಪತ್ರಿಕೆಯಲ್ಲಿ ಜರ್ನಲಿಸ್ಟ್ ಮ್ಯಾಥ್ಯೂ ಪ್ಯಾರಿಸ್‌ರವರ ಅಂಕಣ ಪ್ರಕಟವಾಗಿದೆ. ಅದರಲ್ಲಿ ಅವರು ಹೇಳುತ್ತಾರೆ: ಯಾವುದೇ ಅರ್ಥವತ್ತಾದ ಶಾಂತಿ ಮಾತುಕತೆಗಳಿಗೆ ಮೊದಲು ಇಂತಹ ಹೇಳಿಕೆ ನೀಡುವುದು ತಪ್ಪು ತೀರ್ಮಾನದ ಫಲವಾಗಿದ್ದು ಅದು ಚಂಚಲವಾದ ಸ್ಥಿತಿಯನ್ನು ಕೆಡಿಸಿ ಶಾಂತಿಯುತ ಒಪ್ಪಂದದ ಸಾಧ್ಯತೆಗಳನ್ನು ತಗ್ಗಿಸುವಂತಹದು ಆಗಿದೆ. ಅಂಕಣಗಾರರು ಬರೆದಿದ್ದಾರೆ: ಮೀಡಿಯಾಗಳ ತಾತ್ಕಾಲಿಕ ಪ್ರಶಂಸೆಯನ್ನು ಆಶಿಸಬಾರದು. ಇಂದು ಹೇಳುವ ಮಾತುಗಳು ಮುಂದೆ ಸಂಭವಿಸಬಹುದಾದ, ಆದರೆ ನಮಗೆ ಅಜ್ಞಾತವಾಗಿರುವ ಸಂಭವಗಳ ಮೇಲೆ ನೀಳವಾದ ಕರಿ ನೆರಳನ್ನು ಹಾಯಿಸಬಹುದೆಂಬುದನ್ನು ಅರಿತುಕೊಳ್ಳಬೇಕು. ಸೋತ ರಶ್ಯದಿಂದ ಪರಿಹಾರ ಪಡೆಯುವ ಬಗ್ಗೆ ಮತ್ತು ನ್ಯೂರೆಂಬರ್ಗ್ ಮಾದರಿಯ ಯುದ್ಧಾಪರಾದ ಟ್ರೈಬ್ಯೂನಲ್‌ಗಳನ್ನು ಸ್ಥಾಪಿಸುವ ಬಗ್ಗೆ ಹೇಳಲು ಇದು ಸೂಕ್ತ ಸಮಯವಲ್ಲ.

ಅವರು ಮುನ್ನೆಚ್ಚರಿಕೆ ನೀಡಿದುದು ಸರಿಯಾಗಿದೆ ಎಂದು ನಾನು ನಂಬುತ್ತೇನೆ. ಯುದ್ಧದಿಂದ ಹಿಂದೆ ಸರಿದರೆ ಅದು ತಮ್ಮ ನಾಶಕ್ಕೆ ಕಾರಣವಾಗುವುದೆಂದು ತಿಳಿದುಕೊಂಡ ರಶ್ಯದ ನಾಯಕರಿಗೆ ಯುದ್ಧದಿಂದ ಹಿಂದೆ ಸರಿಯಲು ಪ್ರೋತ್ಸಾಹಕವಾದುದು ಏನಿದೆ?

ನಾನು ಹೇಳಿದ ಹಾಗೆ, ಸಂಘರ್ಷಕ್ಕೆ ಶಾಂತಿಯುತವಾದ ಪರಿಹಾರವನ್ನು ಕಂಡುಹಿಡಿಯಲು ಪ್ರತಿಯೊಂದು ರೀತಿಯ ಪರಿಶ್ರಮ ಮಾಡಬೇಕೆಂದು ಇಸ್ಲಾಮ್ ಧರ್ಮ ತತ್ವಗಳು ಆವಶ್ಯಪಡುತ್ತವೆ. ಆದುದರಿಂದ ಪರಸ್ಪರ ಸಂಪರ್ಕದ ಮಾರ್ಗಗಳನ್ನು ತೆರೆದಿಡುವುದು ಮತ್ತು ಪರಸ್ಪರ ಅಂಗೀಕಾರ ಪಡೆಯುವಂತಹ ಒಪ್ಪಂದವನ್ನು ಮಾಡಿಕೊಳ್ಳಲು ಪ್ರತಿಯೊಂದು ರೀತಿಯ ಪ್ರಯತ್ನ ಮಾಡುವುದು ಅತ್ಯಾವಶ್ಯಕವಾಗಿದೆ ಎಂದು ನಾನು ನಂಬುತ್ತೇನೆ. ಆದರೆ ಆಕ್ರಮಣಗಾರ ಇನ್ನಷ್ಟು ಸಂಕಷ್ಟಗಳನ್ನು ಮತ್ತು ವಿನಾಶಗಳನ್ನು ಮಾಡಲು ಮುಂದಾಗುತ್ತಿದ್ದರೆ ಮತ್ತು ಆಕ್ರಮಣದಿಂದ ಹಿಂದೆ ಸರಿಯಲು ನಿರಾಕರಿಸುವುದಾದರೆ ಇತರ ದೇಶಗಳು ಒಟ್ಟಿಗೆ ಸೇರಿ ಆವಶ್ಯಕವಾದ ಬಲಪ್ರಯೋಗವನ್ನು ಆಕ್ರಮಣಗಾರನ ವಿರುದ್ಧ ಮಾಡಬಹುದೆಂದೂ ಮತ್ತು ಆ ಮೂಲಕ ಕ್ರೌರ್ಯವನ್ನು ತಡೆಗಟ್ಟಬಹುದೆಂದೂ ಇಸ್ಲಾಮ್ ಉಪದೇಶಿಸುತ್ತದೆ.

ಮಧ್ಯ ಪ್ರವೇಶ ಮಾಡುವವರ ಉದ್ದೇಶಲಕ್ಷ್ಯ ಶಾಂತಿ ಸ್ಥಾಪನೆ ಮಾಡುವುದಾಗಿರಬೇಕು. ಅವರು ಪ್ರತೀಕಾರ ಮಾಡುವ ಮತ್ತು ಆಕ್ರಮಣಗಾರನನ್ನು ಹೀನೈಸುವ ಉದ್ದೇಶವಾಗಲಿ ತಮ್ಮ ಜೇಬನ್ನು ತುಂಬಿಸಿಕೊಳ್ಳುವ ಮತ್ತು ಸಂಘರ್ಷವನ್ನು ತಮ್ಮ ಸ್ವಾರ್ಥ ಲಾಭಕ್ಕೆ ಬಳಸಿಕೊಳ್ಳುವ ಉದ್ದೇಶವನ್ನು ಎಂದೂ ಹೊಂದಿರಬಾರದು. ಹೀಗೆ ವರ್ತಿಸದಿದ್ದರೆ ಹೀನೈಸಲ್ಪಟ್ಟವರು ತಮ್ಮೊಳಗೆ ತಮಗೆ ಅನ್ಯಾಯವಾಗಿದೆ ಎಂಬ ಭಾವನೆ ಹೊಂದಿರುವವರೂ ಕ್ರೋಧ ಭರಿತರೂ ಆಗುವರು. ಅಂತಹ ನಿರಾಶೆಯ ಭಾವನೆ ಕುದಿಯುತ್ತಾ ಮುಂದೆ ಸಂಘರ್ಷ ಪ್ರಾರಂಭವಾಗಬಹುದು. ಆ ಮೂಲಕ ನಿರಂತರ ಹಿಂಸಾಚಾರ ಹೆಚ್ಚು ರೌದ್ರ ರೂಪದಲ್ಲಿ ಮುಂದುವರಿಯುವುದು.

ಖೇದಕರವಾದುದೇನೆಂದರೆ, ಅಂಕಣಗಾರರು ಹೇಳಿದ ಹಾಗೆ ಕೆಲವು ರಾಜಕೀಯ ಧುರೀಣರು ಮತ್ತು ಅಧಿಕಾರಿಗಳು ಎಂತಹ ಹೇಳಿಕೆ ನೀಡುತ್ತಾರೆ ಮತ್ತು ಪ್ರತಿಜ್ಞೆ ಮಾಡುತ್ತಾರೆಂದರೆ ಅವು ಬೆಂಕಿಯ ಮೇಲೆ ಪೆಟ್ರೋಲನ್ನು ಸುರಿದಂತಾಗುತ್ತದೆ. ಯುದ್ಧ ವಿರಾಮಕ್ಕೆ ನೆರವಾಗುವ ಬದಲು ಶಾಂತಿಭಂಗಕ್ಕೆ ಹೇತುವಾಗುತ್ತದೆ.

ಉಕ್ರೈನ್ ಯುದ್ಧದ ಅತ್ಯಂತ ಅಪಾಯಕಾರಿ ಪರಿಣಾಮ, ಪರಸ್ಪರ ಹೋರಾಡುವ ರಾಜಕೀಯ ಗುಂಪುಗಳು ತಮ್ಮ ಸಹಾಯಕರೊಂದಿಗೆ ಒಗ್ಗಟ್ಟು ವರ್ಧಿಸಿದುದಾಗಿದೆ. ಅಂತರ್‌ರಾಷ್ಟ್ರೀಯ ಸಂಬಂಧದ ಬಗ್ಗೆ ಮಾಡುವ ವಾಗ್ದಾಳಿಗಳು ಎಲ್ಲ ಕಡೆಗಳಲ್ಲೂ ಅತ್ಯಂತ ಹಗೆತನ ಭರಿತವಾಗಿದೆ. ಉದಾಹರಣೆಗೆ, ಪಶ್ಚಿಮದ ವಿರುದ್ಧವಾಗಿರುವ ರಶ್ಯ ಮತ್ತು ಚೀನ ತಮ್ಮ ಪರಸ್ಪರ ಸಂಬಂಧವನ್ನು ಬಲಪಡಿಸಿದ ಬಗ್ಗೆ ಬಹಳ ಹೆಚ್ಚು ವಿಮರ್ಶಾತ್ಮಕವಾಗಿ ಬರೆಯಲಾಗುತ್ತಿದೆ.

## ರಕ್ತಪಾತದ ವಲಯವನ್ನು ಕೊನೆಗೊಳಿಸುವುದು

ಯುದ್ಧದಿಂದ ಯುದ್ಧ ಆಗಾಗ್ಗೆ ಹುಟ್ಟುತ್ತದೆ ಎಂಬುದು ಸತ್ಯವಾಗಿದೆ. ಉಕ್ರೈನ್ ಯುದ್ಧ ಹರಡಬಹುದೆಂಬ ವಾಸ್ತವಿಕ ಕಳವಳವಿದೆ. ಅಥವಾ ಬೇರೆ ದೇಶಗಳು ಸಹ ರಾಜತಾಂತ್ರಿಕ ಪ್ರಯತ್ನಗಳನ್ನು ಕೈಬಿಟ್ಟು

ವಿವಾದಗಳನ್ನು ಪರಿಹರಿಸಲು ಬಲಪ್ರಯೋಗ ಮಾಡಲು ಧೈರ್ಯ ಹೊಂದಬಹುದು. ಉದಾಹರಣೆಗೆ, ತೈವಾನ್‌ನ ಸ್ಥಿತಿ ಹೆಚ್ಚು ಹೆಚ್ಚಾಗಿ ಅಭದ್ರವಾಗುತ್ತಿದೆ. ಚೀನ ಅದನ್ನು ತನ್ನ ಹತೋಟಿಗೆ ತರಲು ಪ್ರಯತ್ನಿಸುತ್ತಿದೆ. ಉಕ್ರೈನ್ ಯುದ್ಧವನ್ನು ಸುಲಭವಾಗಿ ಹತೋಟಿಗೆ ತರಬಹುದೆಂಬ ಚಿಂತನೆಯ ಬೋನಿಗೆ ವಿಶ್ವ ನಾಯಕರು, ಮಾಧ್ಯಮಗಳು ಮತ್ತು ಇತರರು ಬೀಳಬಾರದು.

ಹಲವು ಪಾಶ್ಚಿಮಾತ್ಯ ದೇಶಗಳು ತಮ್ಮ ಟ್ಯಾಂಕ್‌ಗಳನ್ನು ಉಕ್ರೈನಿಗೆ ಕಳುಹಿಸಲು ಮಾಡಿದ ನಿರ್ಧಾರ ಬಗ್ಗೆ ಜರ್ನಲಿಸ್ಟ್ ಪೀಟರ್ ಹಿಚನ್ಸ್ ಒಂದು ರಾಷ್ಟ್ರೀಯ ಪತ್ರಿಕೆಯಲ್ಲಿ ಹೀಗೆ ಬರೆದಿದ್ದಾರೆ: "ಉಕ್ರೈನ್‌ಗೆ ನೀಡಲಾದ ಟ್ಯಾಂಕ್‌ಗಳು ರಶ್ಯ ತನ್ನದೆಂದು ಗಣಿಸುವ ಭೂಪ್ರದೇಶವನ್ನು ಪ್ರವೇಶಿಸಿದರೆ ಅದರಿಂದ ಸಂಭವಿಸಬಹುದಾದ ವಿಷಯದ ಬಗ್ಗೆ ಆಶ್ಚರ್ಯಪಡಬೇಡಿರಿ." ಅವರು ಮುಂದುವರಿಸಿ ಬರೆಯುತ್ತಾರೆ: "ಯುರೋಪಿನ ಬಹಳ ದೊಡ್ಡ ಭೂಪ್ರದೇಶ ರೇಡಿಯೋ ಆಕ್ಟಿವ್ (ವಿಕಿರಣಶೀಲ) ಸ್ಮಶಾನವಾಗುವುದು. ಇದಕ್ಕೆ ಸಂಬಂಧಿಸಿ (ಎಂದರೆ ಭೀಕರ ಮತ್ತು ಶಕ್ತಿಯುತ ಯುದ್ಧಕ್ಕೆ ಸಂಬಂಧಿಸಿ) ಅಮೇರಿಕದೊಂದಿಗಿರುವ ನಮ್ಮ ಸಾಂಪ್ರದಾಯಕ ಸಂಬಂಧ ನಮ್ಮನ್ನು ಭಯಾನಕ, ನಷ್ಟದಾಯಕ ಲೋಕಕ್ಕೆ, ಪಲಾಯನಕ್ಕೆ, ಸಾಂಕ್ರಮಿಕ ರೋಗ, ದಾರಿದ್ರ್ಯಗಳಿಗೆ ಒಯ್ಯುವುದು. ಯುದ್ಧವನ್ನು ಯಾವಾಗಲೂ ಇವುಗಳು ಹಿಂಬಾಲಿಸುತ್ತವೆ."

ರಶ್ಯ ಮತ್ತು ಉಕ್ರೈನಿಗೆ ಸಂಬಂಧಿಸಿ ಈ ಅಂಕಣಗಾರರು ಬರೆಯುತ್ತಾರೆ: "ಈ ಎರಡು ದೇಶಗಳು ಕೋಪಾವಿಷ್ಠ ಹೋರಾಡಲಿದ್ದಾರೆ. ಅದಕ್ಕೆ ಕಾರಣವಾದುದು ಅವರ ಆಳವಾದ, ಕಠಿಣವಾದ, ಬದಲಾವಣೆ ಹೊಂದದ ಹಿತಾಸಕ್ತಿಗಳ ಸಂಘರ್ಷವಾಗಿದೆ. ಬಾಹ್ಯ ಶಕ್ತಿಗಳು ಮಾಡಬಹುದಾದ ಜಾಣ್ಮೆಭರಿತ ವರ್ತನೆ ಏನೆಂದರೆ ಆ ಎರಡು ದೇಶಗಳನ್ನು ಸ್ಥಿರವಾದ ಒಪ್ಪಂದ ಮಾಡಿಕೊಳ್ಳಲು ನಿರ್ಬಂಧಿಸುವುದಾಗಿದೆ 1945ರಲ್ಲಿ ಫ್ರಾನ್ಸ್ ಮತ್ತು ಜರ್ಮನಿ ಮಧ್ಯೆ ಇಂತಹ ಒಪ್ಪಂದವನ್ನು ಲೋಕ ಏರ್ಪಡಿಸಿದ ಹಾಗೆ. ಆದರೆ ಅದಕ್ಕೆ ಬದಲಾಗಿ ಟ್ಯಾಂಕ್‌ಗಳನ್ನು ನಾವು ಕಳುಹಿಸುತ್ತಿದ್ದೇವೆ. ಇದು ಅಗ್ನಿಶಮನ ಸೇನೆಯವರು ಬೆಂಕಿ ಹೊತ್ತಿಸಲು ಹೋದಂತಾಗುತ್ತದೆ."

ಇತರ ವಿಶ್ಲೇಷಕರು ಇಂತಹದೇ ನಿಷ್ಕರ್ಷೆಗೆ ತಲಪಿದ್ದಾರೆ. ಇತ್ತೀಚೆಗೆ ಒಂದು ಸಂದರ್ಶನದಲ್ಲಿ ಪ್ರೊಫೆಸರ್ ಜೆಫ್ರೀ ಸಾಚ್ಸ್ ಹೇಳಿದರು: 2021ರ ಕೊನೆಯ ಭಾಗದಲ್ಲಿ ನಾನು ವೈಟ್ ಹೌಸನ್ನು ಸಂಪರ್ಕಿಸಿ ಹೇಳಿದೆ – ನ್ಯಾಟೋವನ್ನು ವಿಸ್ತರಿಸುವ ಬಗ್ಗೆ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕ, ಪ್ರೆಸಿಡೆಂಟ್ ಪುಟಿನ್‌ರೊಂದಿಗೆ ರಾಜತಾಂತ್ರಿಕ ಮಾತುಕತೆ ಪ್ರಾರಂಭಿಸದಿದ್ದರೆ ಯುದ್ಧವು ಸಂಭವಿಸುವುದು ಎಂದು. ಆದರೆ ಯುನೈಟೆಡ್ ಸ್ಟೇಟ್ಸ್ ಹಾಗೆ ಎಂದೂ ಮಾಡಲಾರದೆಂದು ನನ್ನೊಂದಿಗೆ ಹೇಳಲಾಯಿತು. ಅದು ಸಂಭವಿಸಲಾರದೆಂದು ಹೇಳಿದರು. ಈಗ ಅತ್ಯಂತ ಅಪಾಯಕರ ಯುದ್ಧ ಪ್ರಾರಂಭವಾಗಿದೆ.

ಈಗ ನಾವು ಪೂರ್ವ ಏಷ್ಯಾದಲ್ಲಿ ಉಕ್ರೈನ್‌ನಲ್ಲಿ ಯುದ್ಧಕ್ಕೆ ಹೇತುವಾದ ತಂತ್ರಗಳನ್ನು ಪ್ರಯೋಗಿಸುತ್ತಿದ್ದೇವೆ. ನಾವು ಯುದ್ಧ ಶಸ್ತ್ರಗಳನ್ನು ಜಮಾಯಿಸಿ ದೇಶಗಳೊಂದಿಗೆ ಒಪ್ಪಂದ ಮಾಡುತ್ತಿದ್ದೇವೆ.

ಅವರು ಮುಂದುವರಿಸಿ ಹೇಳುತ್ತಾರೆ: "ಚೈನಾ ಸರಕಾರ ಹೇಳುತ್ತಿದೆ: 'ತಾಪವನ್ನು ತಗ್ಗಿಸಿರಿ. ಸಂಘರ್ಷಗಳನ್ನು ತಗ್ಗಿಸಿರಿ.' ನಾವು ಹೇಳುತ್ತೇವೆ, 'ಹಾಗೆ ಆಗದು. ನಾವು ನಮಗೆ ಇಷ್ಟವಿರುವ ಹಾಗೆಮಾಡುವೆವು.' ಈಗ ನಾವು ಹೆಚ್ಚು ಆಯುಧಗಳನ್ನು ರವಾನಿಸುತ್ತಿದ್ದೇವೆ. ಇದು ಇನ್ನೊಂದು, ಯುದ್ಧ ಪ್ರಾರಂಭಿಸಲು ಸಹಾಯಕವಾದ ಸೂತ್ರವಾಗಿದೆ. ಆದರೆ ನನ್ನ ಅಭಿಪ್ರಾಯದಲ್ಲಿ ಇದು ದಿಗಿಲು ಹುಟ್ಟಿಸುವುದಾಗಿದೆ."

ಮಾನವರ ಚರಿತ್ರೆಯಲ್ಲಿ ಅತ್ಯಂತ ಭೀತಿದಾಯಕ ಕಾಲದಲ್ಲಿ ನಾವಿದ್ದೇವೆಂದು ವಿದ್ವಾಂಸರು, ರಾಜಕೀಯ ನಿಪುಣರು ಮತ್ತು ಗೌರವಾನ್ವಿತ ವಿಶ್ಲೇಷಕರು ಹೆಚ್ಚು ಹೆಚ್ಚಾಗಿ ಮುನ್ನೆಚ್ಚರಿಕೆ ನೀಡುತ್ತಿದ್ದಾರೆ. ಉದಾಹರಣೆಗೆ, ಸಾಂಕೇತಿಕ ಡೂಮ್ಸ್‌ಡೇಕ್ಲೋಕ್‌ನ್ನು ಅಂತರ್ರಾಷ್ಟ್ರೀಯ ವಿಜ್ಞಾನಿಗಳ ತಂಡದ ಮೇಲ್ವಿಚಾರಣೆಯಲ್ಲಿ ಏರ್ಪಡಿಸಲಾಗಿದ್ದು, ಅದು ಮಾನವ ನಿರ್ಮಿತ ಜಾಗತಿಕ ಮಹಾ ವಿಪತ್ತುಗಳ ಸಾಧ್ಯತೆಯ ಬಗ್ಗೆ ಭವಿಷ್ಯ ನುಡಿಯುತ್ತದೆ. ಇತ್ತೀಚೆಗೆ ಮಧ್ಯರಾತ್ರಿಗೆ ತೊಂಬತ್ತು ಸೆಕೆಂಡು ಬಾಕಿಯಾಗಿ ಇರುವಾಗ ಅದು ಮುನ್ನೆಚ್ಚರಿಕೆ ನೀಡಿತು. ವಿಜ್ಞಾನಿಗಳು ಹೀಗೆ ಹೇಳಿದರು: "ನಾವು ಅಭೂತಪೂರ್ವ ಅಪಾಯಕರವಾದ ಕಾಲದಲ್ಲಿದ್ದೇವೆ. ಆಕಸ್ಮಿಕವಾಗಿ, ತಪ್ಪಾಗಿ ಅಥವಾ ಪ್ರಜ್ಞಾಪೂರ್ವಕವಾಗಿ ಸ್ಫೋಟಿಸಬಹುದಾದ ಜಾಗತಿಕ ಯುದ್ಧದ ಗಂಭೀರವಾದ ಅಪಾಯವಿದೆ."

ಈ ಭೀಕರವಾದ ಮುನ್ನೆಚ್ಚರಿಕೆಗಳ ಬಗ್ಗೆ ಗಾಢವಾಗಿ ಚಿಂತಿಸುವುದಾದರೆ ಸಹಜವಾಗಿ ಉದ್ಭವಿಸುವ ಪ್ರಶ್ನೆ ಇದಾಗಿದೆ: ಯುದ್ಧ ಮತ್ತು ರಕ್ತಪಾತದ ವಲಯವನ್ನು ನಾವು ಕಾಣುತ್ತಿದ್ದು ಅವುಗಳನ್ನು ಲೋಕ ಹೇಗೆ ಕೊನೆಗೊಳಿಸಬಹುದು?

ಅನ್ಯಾಯದಿಂದ ಪೀಡಿತರಿಗೆ ಮತ್ತು ನೊಂದವರಿಗೆ ಸಹಾಯ ಮಾಡುವುದಕ್ಕೆ ಸಂಬಂಧಿಸಿ ಲೋಕವು ನೈಪುಣ್ಯತೆ ಹೊಂದಿದೆ. ಈಗ ಉಕ್ರೈನಿಗೆ ಸಂಬಂಧಿಸಿ ಅಂತಹ ನೆರವು ಸಂತ್ರಸ್ತರಿಗೆ ನೀಡಲಾಗುತ್ತಿದೆ. ಆದರೆ ಆಶ್ಚರ್ಯಕರವಾದುದೇನೆಂದರೆ, ಇಸ್ಲಾಮ್ ಧರ್ಮ ಮುಸ್ಲಿಮರೊಂದಿಗೆ ಸಂತ್ರಸ್ತರಿಗೆ ಸಹಾಯ ಮಾಡಲು ಉಪದೇಶಿಸುತ್ತಿದೆಯಲ್ಲದೆ ಅಪರಾಧಿಗಳಿಗೂ ದಬ್ಬಾಳಿಕೆಗಾರರಿಗೂ ಸಹಾಯ ಮಾಡಲು ಹೇಳುತ್ತಿದೆ. ಇದರ ಅರ್ಥ ದಬ್ಬಾಳಿಕೆಗಾರರಿಗೆ ಹೆಚ್ಚು ದಬ್ಬಾಳಿಕೆ ಮಾಡಲು ಸ್ವಾತಂತ್ರ್ಯ ಅಥವಾ ಸಹಾಯ ನೀಡಬೇಕು ಎಂದಲ್ಲ. ದಬ್ಬಾಳಿಕೆಗಾರರನ್ನು ಇನ್ನಷ್ಟು ಬರ್ಬರ ಕೃತ್ಯಗಳನ್ನೂ ಅನ್ಯಾಯಗಳನ್ನೂ ಮಾಡುವುದರಿಂದ ತಡೆಗಟ್ಟಬೇಕು ಎಂದು ಇದರ ಅರ್ಥವಾಗಿದೆ.

ರಶ್ಯ ದೇಶ ಯಾವ ಅಪರಾಧಗಳನ್ನು ಮಾಡಿದ್ದರೂ ನಾವು ಗಮನದಲ್ಲಿರಿಸಬೇಕಾದ ವಿಷಯವೇನೆಂದರೆ, ಯುದ್ಧವನ್ನು ಕೊನೆಗಾಣುವಂತೆ ಮಾಡದಿದ್ದರೆ ಜಾಗತಿಕ ವಿಷಮ ಪರಿಸ್ಥಿತಿ ಗಂಭೀರವಾಗಿ ವರ್ಧಿಸಿ ಅತ್ಯಂತ ವಿನಾಶಕರವಾದ ಪರಿಣಾಮಗಳು ಸಂಭವಿಸಲು ಸಾಧ್ಯತೆಗಳಿವೆ. ವಿರೋಧಿಸುವ ತಂಡಗಳು ಹೆಚ್ಚು ಬಲಿಷ್ಠವಾಗುವುವು. ದ್ವೇಷಗಳು ಹೆಚ್ಚು ಬೇರೂರುವುವು ಮತ್ತು ಜಾಗತಿಕ ಯುದ್ಧದ ಸಾಧ್ಯತೆಗಳು ತಲೆದೋರುವುವು. ಉಕ್ರೈನ್ ತನ್ನನ್ನು ಪ್ರತಿರೋಧಿಸಿಕೊಳ್ಳಲು ವಿಶ್ವದ ದೇಶಗಳು ಸಹಾಯ ಮಾಡುವ ಹಾಗೆಯೇ ಯುದ್ಧವನ್ನು ಶಾಂತಿ ಮಾತುಕತೆಗಳ ಮೂಲಕ ಮತ್ತು

ಪ್ರಾಮಾಣಿಕ ಸಮಾಲೋಚನೆಗಳ ಮೂಲಕ ಕೊನೆಗೊಳಿಸಲು ಪ್ರಯತ್ನ ಮಾಡಬೇಕು. ಹೀಗೆ ಮಾಡದಿದ್ದರೆ ಯುದ್ಧ ಯುರೋಪಿನಿಂದ ಪೂರ್ವದ ಕಡೆಗೆ ಮತ್ತು ಏಷ್ಯಾದ ಕಡೆಗೆ ಹರಡಬಹುದು ಎಂದು ನಾನು ಭಯಪಡುತ್ತಿದ್ದೇನೆ. ಅದು ಎಲ್ಲಿಗೆ ತಲಪಿ ಮುಕ್ತಾಯವಾಗುವುದೆಂದು ಯಾರಿಗೆ ತಾನೆ ಗೊತ್ತಿದೆ.

**ನಾನು ಹಲವು ವರ್ಷಗಳಿಂದ ಪೂರ್ಣ ಪ್ರಮಾಣದ ಯುದ್ಧದ ಬಗ್ಗೆ ಮತ್ತು ಅದರ ಭೀಕರ ವಿನಾಶಕರ ಪರಿಣಾಮಗಳು ನಾವು ಊಹಿಸಲಾರದಷ್ಟು ಘೋರವಾಗುವುದರ ಬಗ್ಗೆ ಎಚ್ಚರಿಕೆ ನೀಡುತ್ತಾ ಇದ್ದೆನು. ಅನ್ಯರು ಸಹ ಅದರ ಬಗ್ಗೆ ತಮ್ಮ ಹೆದರಿಕೆಗಳನ್ನು ಸೂಚಿಸುತ್ತಿದ್ದಾರೆ ಎಂಬುದರ ಬಗ್ಗೆ ನಾನು ತೃಪ್ತನಾಗಿಲ್ಲ. ಲೋಕವು ಭೀತಿದಾಯಕ ಯುದ್ಧದ ಕಡೆಗೆ ವೇಗವಾಗಿ ಧಾವಿಸುತ್ತಿರುವ ಬಗ್ಗೆ ನಾನು ಶೋಕ ಭರಿತನಾಗಿದ್ದೇನೆ. ಅಂತಹ ಯುದ್ಧದ ಮೂಲಕ ಮಿಲಿಯಗಟ್ಟಲೆ ನಿಷ್ಕಳಂಕ ಜೀವಗಳು ಹಾನಿಗೊಳಪಡುವುವು ಅಥವಾ ಶಾಶ್ವತವಾಗಿ ನಾಶವಾಗುವುವು.**

## ಮುಂದಿನ ಪೀಳಿಗೆಗಳಿಗೆ ಬಿಟ್ಟುಹೋಗುವ ಬಳುವಳಿ

ಮುಂದೆ ಹುಟ್ಟಲಿರುವವರಿಗೆ ನಾವು ಎಂತಹ ಭವಿಷ್ಯವನ್ನು ಬಿಟ್ಟು ಹೋಗುತ್ತಿದ್ದೇವೆ? ಶಾಂತಿ ಮತ್ತು ಸಮೃದ್ಧಿಯನ್ನು ನಮ್ಮ ಮುಂದಿನ ಪೀಳಿಗೆಗಳಿಗೆ ಬಿಟ್ಟು ಹೋಗುವುದಕ್ಕೆ ಬದಲಾಗಿ ನಮ್ಮ ಪಾರಿತೋಷಿಕ, ಮೃತ್ಯು, ವಿನಾಶ ಮತ್ತು ದಾರಿದ್ರ್ಯ ಹೊರತು ಬೇರೆ ಏನಾಗಲು ಸಾಧ್ಯ.

ಖಂಡಿತವಾಗಿ, ನನ್ನ ಗಂಭೀರವಾದ ಭಯವೇನೆಂದರೆ ಇಂದಿನ ಕಾಲದ ಭೌಗೋಳಿಕ ರಾಜಕೀಯ ಸಂಘರ್ಷಗಳು ಎಲ್ಲ ನಿಯಂತ್ರಣಗಳಿಂದ ಹೊರಹೊಮ್ಮಿ ಕೊನೆಗೆ ಅಣುಬಾಂಬ್ ವರ್ಷಿಸುವ ಯುದ್ಧಕ್ಕೆ ಒಯ್ಯುವ ಸಾಧ್ಯತೆಗಳಿವೆ. ಅಣು ಆಯುಧಗಳು ಎಂದಾದರೂ ಬಳಸಲ್ಪಟ್ಟರೆ (ದೇವನು ಅದನ್ನು ತಡೆಗಟ್ಟಲಿ) ಅವು ಭೂಮಿಯನ್ನು ಎಷ್ಟು ವೇಗವಾಗಿ ಮತ್ತು ಬಲಯುತವಾಗಿ ದಾಳಿ ಮಾಡುವುದೆಂದರೆ ಅದರ ದುಷ್ಪರಿಣಾಮಗಳು ಮುಂದಿನ ದಶಕಗಳಲ್ಲೂ ಅನುಭವಕ್ಕೆ ಬರುವುವು ಎಂಬುದರ ಬಗ್ಗೆ ನಾವು ಯಾವುದೇ ಭ್ರಮೆಗೆ ಈಡಾಗಬೇಕಾಗಿಲ್ಲ. ಲಕ್ಷಗಟ್ಟಲೆ ಜನರು ಅಥವಾ ಮಿಲಿಯಗಟ್ಟಲೆ ಜನರು ಖಂಡಿತವಾಗಿಯೂ ತಕ್ಷಣ ಅಥವಾ ಅನಂತರ ಸಾಯುವರು. ಬದುಕುಳಿಯುವವರು ಅತ್ಯಂತ ದಾರಿದ್ರ್ಯದ ಮತ್ತು ನೋವು ಭರಿತ ಜೀವನ ನಡೆಸುವರು. ಮುಂದಿನ ಪೀಳಿಗೆಗಳಲ್ಲಿ ಅಸಂಖ್ಯಾತ ಮಕ್ಕಳು ಅಣುವಿಕಿರಣ ಕಾರಣದಿಂದ ಆನುವಂಶೀಯ ದೋಷಗಳೊಂದಿಗೆ ಮತ್ತು ಅಂಗವಿಕಲತೆಯೊಂದಿಗೆ ಜನಿಸುವರು.

ನಾನು ಹೃತ್ಪೂರ್ವಕವಾಗಿ ಸರ್ವಶಕ್ತನಾದ ಅಲ್ಲಾಹನೊಂದಿಗೆ ಬೇಡಿಕೊಳ್ಳುತ್ತೇನೆ. ಅವನು ಮಾನವರೊಂದಿಗೆ ಕರುಣೆಯಿಂದ ವರ್ತಿಸುವವನಾಗಲಿ. ಅವನು ಲೋಕದ ಜನರಿಗೆ ಮತ್ತು ವಿಶಿಷ್ಟವಾಗಿ ಅವರ ನೇತಾರರಿಗೆ ಮತ್ತು ಧೋರಣೆ ರೂಪಿಸುವವರಿಗೆ ಬೇಗನೆ ವಿವೇಕ ದಯಪಾಲಿಸಲಿ. ಅವರು ಯುದ್ಧ ಪ್ರಚೋದನೆ ಮತ್ತು ಬಲ ಪ್ರದರ್ಶನದ ಅಟಾಟೋಪ ಮಾಡುವುದಕ್ಕೆ ಬದಲಾಗಿ ತಮ್ಮ ಸಾಧನ ಸಂಪತ್ತುಗಳನ್ನು ಎಲ್ಲ ದೇಶಗಳಿಗೂ ಜನರಿಗೂ ಶಾಂತಿ ಮತ್ತು ಭದ್ರತೆಯನ್ನು ನೀಡಲು ಬಳಸುವಂತಾಗಲಿ. ಯುದ್ಧವನ್ನು ಅವರು ತಮ್ಮ ಅಹಂಭಾವವನ್ನು ಪೋಷಿಸಲು ಮತ್ತು ಶಕ್ತಿಯ ಹಂಬಲಕ್ಕೆ ಬಳಸುವಂತಾಗದಿರಲಿ. ಅವರು ಇಂದಿನ ಜನರ ಮತ್ತು ಮುಂದಿನ ಪೀಳಿಗೆಗಳ ಬಗ್ಗೆ ತಮಗಿರುವ ಹೊಣೆಗಾರಿಕೆಗಳನ್ನು ಗುರುತಿಸಿಕೊಂಡು ಎಲ್ಲ ವಿಧಗಳ ಸಂಘರ್ಷಗಳನ್ನೂ ಯುದ್ಧಗಳನ್ನೂ ಕೊನೆಗೊಳಿಸುವ ಧೋರಣೆಗಳನ್ನು ರೂಪಿಸುವವರಾಗಲಿ. ಅವರು ಯುದ್ಧ ಮತ್ತು ರಕ್ತಪಾತದ ಕಾರ್ಯಕರ್ತರಾಗುವ ಬದಲು ಶಾಂತಿ ಮತ್ತು ಸಮೃದ್ಧಿಯ ರಕ್ಷಕರಾಗಲಿ.

ಮಾನವರು ತಮ್ಮ ಸ್ವಾರ್ಥ ಹಿತಾಸಕ್ತಿಗಳನ್ನೂ ಲೌಕಿಕ ದುರಾಶೆಗಳನ್ನೂ ತ್ಯಜಿಸಿ ಏಕದೇವನನ್ನು ಗುರುತಿಸಿ ಅವನ ಹಕ್ಕುಗಳನ್ನು ಈಡೇರಿಸಿ ಅವನ ಉಪದೇಶಗಳನ್ನು ಅನುಸರಿಸಿದರೆ ಮಾತ್ರ ಮೇಲೆ ಹೇಳಿದಂತೆ ಸಂಭವಿಸುವುದು ಎಂದು ಒಬ್ಬ ಧರ್ಮನಿಷ್ಠ ವ್ಯಕ್ತಿಯಾದ ನಾನು ದೃಢವಾಗಿ ನಂಬುತ್ತೇನೆ. ನಾನು ಪ್ರಾರ್ಥಿಸುತ್ತೇನೆ – ಸರ್ವಶಕ್ತನಾದ ಅಲ್ಲಾಹನು ಜನರಿಗೆ ಬುದ್ಧಿಯನ್ನು ದಯಪಾಲಿಸಲಿ. ಲೋಕ ಸೃಷ್ಟಿಕರ್ತನೂ ಪ್ರಭುವೂ ಆಗಿರುವ ಅಲ್ಲಾಹನು ನಮ್ಮಿಂದ ಆವಶ್ಯಪಡುವುದನ್ನು ಎಂದರೆ ಅವನ ಹಕ್ಕುಗಳನ್ನೂ ಅವನ ಸೃಷ್ಟಿಗಳ ಹಕ್ಕುಗಳನ್ನೂ ಈಡೇರಿಸಬೇಕೆಂಬುದನ್ನು ಎಲ್ಲ ಜನರು ಅಂಗೀಕರಿಸಿ ಕಾರ್ಯಪ್ರವೃತ್ತರಾಗುವಂತೆ ಅಲ್ಲಾಹನು ಮಾಡಲಿ – ಆಮೀನ್.

ಈ ಸಂಜೆ ಬಂದು ನಮ್ಮೊಂದಿಗೆ ಸೇರಿಕೊಂಡ ನಿಮಗೆಲ್ಲರಿಗೂ ನಾನು ಮತ್ತೊಮ್ಮೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನಿಮಗೆ ಬಹಳ ಧನ್ಯವಾದಗಳು.

**(Review of Religions 2023 ಎಪ್ರಿಲ್ ಸಂಚಿಕೆಯಿಂದ. ಕನ್ನಡಕ್ಕೆ: ಎಮ್. ಉಬೈದುಲ್ಲಾ).**

♦

==========

**7ನೇ ಪುಟದಿಂದ**

**ಇದು ಎಲ್ಲ ಕಾಲಕ್ಕೂ ಅನ್ವಯಿಸುತ್ತದೆ. ನೀವು ಅಲ್ಲಾಹನನ್ನು ಕಾಣುವ ದಿನದ ತನಕ ಈ ಆಜ್ಞೆ ಜಾರಿಯಲ್ಲಿರುವುದು.**

**"ನಾನು ಹೇಳುವ ಮಾತುಗಳನ್ನು ಲೋಕದಲ್ಲಿ ಎಲ್ಲ ಕಡೆಗಳಿಗೂ ತಲಪಿಸಿರಿ. ಪ್ರಾಯಶಃ ಈ ದಿನ ನನ್ನಿಂದ ಈ ಮಾತುಗಳನ್ನು ಆಲಿಸುವವರಿಗಿಂತ ನನ್ನಿಂದ ಈಗ ಆಲಿಸದವರು ಅವುಗಳನ್ನು ಹೆಚ್ಚು ಕೃತಿ ರೂಪಕ್ಕೆ ಇಳಿಸಬಹುದು."** (ಸಿಹಾಹ್‌ಸಿತ್ತ. ತಬರಿ, ಹಿಶಾಮ್ ಮತ್ತು ಬೈಹಖೀ).

ಈ ಪ್ರವಚನ ಅತ್ಯಂತ ಶಕ್ತಿಶಾಲಿಯಾಗಿ ಸ್ವಯಂಗೋಚರವಾಗುತ್ತಿದೆ. ಹಝ್ರತ್ ಪೈಗಂಬರರು(ಸ) ನಾವೆಲ್ಲರೂ ಒಬ್ಬನೇ ಪಿತನ ಮಕ್ಕಳೆಂದು ಹೇಳಿದುದು ವಿಶಿಷ್ಟವಾಗಿ ಗಮನಾರ್ಹವಾಗಿದೆ. ಮಾನವರ ಸಾರ್ವಲೌಕಿಕ ಭ್ರಾತೃತ್ವವನ್ನು ವಿವಿಧ ಧರ್ಮಗಳು ವಿಭಜಿಸಲು ಅನುಮತಿಸಬಾರದೆಂದೂ ಮಾನವರೆಲ್ಲರೂ ಏಕಪಿತನ ಸಂತಾನವೆಂದೂ ಈ ಪ್ರಸ್ತಾಪ ಸೂಚಿಸುತ್ತದೆ.

**(ಭಾಷಾಂತರ: ಎಮ್. ಉಬೈದುಲ್ಲಾ).**

# ಇಸ್ಲಾಮಿನ ವಿರುದ್ಧ ಸಾಮಾನ್ಯವಾಗಿ ಮಾಡಲಾಗುತ್ತಿರುವ ಆಕ್ಷೇಪಗಳಿಗೆ ಉತ್ತರ



**ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋನ್ನತ ನೇತಾರ, ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ (ಅಲ್ಲಾಹನು ಅವರಿಗೆ ಮಹತ್ತಾದ ನೆರವನ್ನು ನೀಡಲಿ) ಅವರು ಮಾಡಿದ ಭಾಷಣ.**

**ಸಾಮಾಜಿಕ ಜಾಲತಾಣಗಳ ಪ್ರಚಾರದಲ್ಲಿ ತಪ್ಪಾದ ಸಮಾಚಾರಗಳು ಮತ್ತು ಪ್ರತಿಪಾದನೆಗಳು ವ್ಯಾಪಕವಾಗಿ ಹರಡುತ್ತಿರುವ ಈ ಕಾಲಘಟ್ಟದಲ್ಲಿ ಸತ್ಯ ಮತ್ತು ಸುಳ್ಳುಗಳ ವ್ಯತ್ಯಾಸವನ್ನು ಅರಿತುಕೊಳ್ಳಲು ಹಿಂದಿನ ಕಾಲಕ್ಕಿಂತ ಈಗ ಹೆಚ್ಚು ಕಷ್ಟಕರವಾಗುತ್ತಿದೆ. ಇಸ್ಲಾಮ್ ಧರ್ಮದ ತತ್ವಗಳು ಸಾಮಾಜಿಕ ಜಾಲತಾಣಗಳಲ್ಲಿ ವಿಕೃತಗೊಳಿಸಿ ವ್ಯಾಖ್ಯಾನಿಸಲ್ಪಡುವುದರಿಂದ ಜನರಲ್ಲಿ ತಪ್ಪು ಗ್ರಹಿಕೆಗಳುಂಟಾಗುವಂತಾಗಿವೆ.**

**ಜರ್ಮನಿಯ ಸ್ಟಟ್‌ಗಾರ್ಟ್ ನಗರದಲ್ಲಿ ಜರಗಿದ ಜರ್ಮನಿಯ ಅಹ್ಮದಿಯಾ ಜಮಾಅತಿನ ವಾರ್ಷಿಕ ಸಮ್ಮೇಳನದಲ್ಲಿ 2023 ಸೆಪ್ಟಂಬರ್ ದಿನಾಂಕ 2ರಂದು ಅಹ್ಮದಿಯಾ ಜಮಾಅತಿನ ಜಾಗತಿಕ ಸರ್ವೋನ್ನತ ನೇತಾರ, ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ (ಅಲ್ಲಾಹನು ಅವರಿಗೆ ಮಹತ್ತಾದ ನೆರವನ್ನು ನೀಡಲಿ) ಅವರು ಇಸ್ಲಾಮ್ ವಿರುದ್ಧ ಮಾಡಲಾಗುವ ಅನೇಕ ಆಕ್ಷೇಪಗಳಿಗೆ ಉತ್ತರ ನೀಡಿದರು. ಇಸ್ಲಾಮ್ ಹಿಂಸಾಚಾರವನ್ನು ಪ್ರೋತ್ಸಾಹಿಸುತ್ತದೆ, ಮಹಿಳೆಯರಿಗೆ ಹಕ್ಕುಗಳನ್ನು ನಿರ್ಲಕ್ಷಿಸುತ್ತದೆ, ಜನರ ಮಧ್ಯೆ ಭಾವೈಕ್ಯತೆಯನ್ನು ತಡೆಗಟ್ಟುತ್ತದೆ ಎಂಬ ಆಕ್ಷೇಪಗಳಿಗೆ ಪವಿತ್ರ ಖುರ್‌ಆನಿನ ವಚನಗಳನ್ನು ಉಲ್ಲೇಖಿಸಿ ಉತ್ತರ ನೀಡಿದರು. ಎಲ್ಲ ಧರ್ಮಗಳ ಅನುಯಾಯಿಗಳಿಗೆ ಗೌರವ ನೀಡಬೇಕೆಂದು ಇಸ್ಲಾಮ್ ಆಜ್ಞಾಪಿಸುತ್ತಿದೆ ಎಂದೂ ಮಹಿಳೆಯರ ಹಕ್ಕುಗಳನ್ನು ಇಸ್ಲಾಮಿನಲ್ಲಿ ಸಂರಕ್ಷಿಸಲಾಗಿದೆ ಎಂದೂ ವಾಸ್ತವಿಕ ಸಾಮಾಜಿಕ ಭಾವೈಕ್ಯತೆಯ ಅರ್ಥ ಸ್ವಂತ ದೇಶಕ್ಕೆ ಸೇವೆ ಸಲ್ಲಿಸುವುದಾಗಿದೆ ಎಂದೂ ಅವರು ಪ್ರತಿಪಾದಿಸಿದರು.**

ಸಾಂಪ್ರದಾಯಿಕ ಪ್ರಾರ್ಥನೆಗಳನ್ನು ಪಠಿಸಿದ ನಂತರ ಹಝ್ರತ್ ಖಲೀಫರು ಹೀಗೆ ಹೇಳಿದರು:

ಎಲ್ಲ ಗಣ್ಯ ಅತಿಥಿಗಳಿಗೆ ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವಬರಕಾತುಹು – ನಿಮಗೆಲ್ಲರಿಗೂ ಅಲ್ಲಾಹನ ಶಾಂತಿ ಮತ್ತು ಅನುಗ್ರಹಗಳು.

ಮೊತ್ತಮೊದಲು, ನಮ್ಮ ಆಹ್ವಾನಗಳನ್ನು ಅಂಗೀಕರಿಸಿ ನಮ್ಮ ವಾರ್ಷಿಕ ಸಮ್ಮೇಳನದಲ್ಲಿ ಭಾಗವಹಿಸಲು ಸಂತೋಷದಿಂದ ಆಗಮಿಸಿದ ನಮ್ಮ ಜಮಾಅತಿನ ಸದಸ್ಯರಾಗಿರದ ಎಲ್ಲ ಗಣ್ಯ ಅತಿಥಿಗಳಿಗೆ ನಾನು ಪ್ರಾಮಾಣಿಕವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಇಸ್ಲಾಮ್ ಬಗ್ಗೆ ಅರಿತುಕೊಳ್ಳಲು ನಿಮಗಿರುವ ಆಸಕ್ತಿ ಮತ್ತು ಈ ಧಾರ್ಮಿಕ ಸಮಾರಂಭದಲ್ಲಿ ಭಾಗವಹಿಸಲು ನೀವು ಹೊಂದಿರುವ ಇಚ್ಛೆ ನಿಮ್ಮ ನಿಷ್ಕಳಂಕ ಹೃದಯದ ಬಗ್ಗೆ ಮತ್ತು ಸಹಿಷ್ಣು ಮನೋಭಾವದ ಬಗ್ಗೆ ಸಾಕ್ಷ್ಯ ನೀಡುತ್ತವೆ.

ಈ ದಿನ ನಾನು ಇಸ್ಲಾಮಿನ ವಿರುದ್ಧ ಸಾಮಾನ್ಯವಾಗಿ ಮಾಡಲ್ಪಡುವ ಕೆಲವು ಗುರುತರವಾದ ಆಕ್ಷೇಪಗಳಿಗೆ ಸಂಕ್ಷಿಪ್ತವಾಗಿ ಉತ್ತರ ನೀಡಲು ಇಚ್ಛಿಸುತ್ತೇನೆ.

ಉದಾಹರಣೆಗೆ, ಹೀಗೆ ಆಕ್ಷೇಪಿಸಲಾಗುತ್ತಿದೆ: ಇಸ್ಲಾಮ್ ಧರ್ಮ ತತ್ವಗಳು ತೀವ್ರವಾದವನ್ನು ಪ್ರತಿಪಾದಿಸುತ್ತವೆ. ಅದು ದೇಶಗಳನ್ನು ವಶಪಡಿಸಿಕೊಳ್ಳಲು ಅಥವಾ ಅನ್ಯ ಧರ್ಮಗಳನ್ನೂ ನಂಬಿಕೆಗಳನ್ನೂ ನಾಶಮಾಡಲು ಬಲಪ್ರಯೋಗ ಮತ್ತು ಹಿಂಸಾಚಾರ ಮಾಡಲು ಮುಸ್ಲಿಮರಿಗೆ ಪ್ರೋತ್ಸಾಹ ನೀಡುತ್ತದೆ.

ಹೀಗೆ ಸಹ ವಾದಿಸಲಾಗುತ್ತಿದೆ: ಮುಸ್ಲಿಮರು ಮುಸ್ಲಿಮೇತರರನ್ನು ಕೀಳು ಮಟ್ಟದವರೆಂದು ಗಣಿಸುತ್ತಾರೆ. ಇಸ್ಲಾಮ್ ಮಾನವೀಯ ಮೌಲ್ಯಗಳಿಗೆ ಆದ್ಯತೆ ನೀಡುವುದಿಲ್ಲ. ಸಮಾಜದ ಒಂದು ವಿಭಾಗದ ಜನರಿಗೆ ವಿಶಿಷ್ಟವಾಗಿ ಮಹಿಳೆಯರಿಗೆ ಇಸ್ಲಾಮ್ ಸಮಾನ ಹಕ್ಕುಗಳನ್ನು ನೀಡುವುದಿಲ್ಲ.

ನಾನು ಹಿಂದೆ ಹೇಳಿದ ಹಾಗೆ ಇಸ್ಲಾಮ್ ವಿರುದ್ಧ ಮಾಡಲಾಗುವ ಮುಖ್ಯ ಆಕ್ಷೇಪಗಳಲ್ಲಿ ಒಂದು ಹೀಗಿದೆ: ಇಸ್ಲಾಮ್ ಖಡ್ಗ ಬಲದಿಂದ ಹರಡಲಾಯಿತು. ಇಸ್ಲಾಮ್ ಧರ್ಮಕ್ಕೆ ಸೇರಿಸಿಕೊಳ್ಳಲು ಅನ್ಯರ ಮೇಲೆ ಬಲಾತ್ಕಾರ ಮಾಡಲು ಇಸ್ಲಾಮ್ ಮುಸ್ಲಿಮರಿಗೆ ಅನುಮತಿ ನೀಡುತ್ತದೆ.

ಈ ವಿಷಯಕ್ಕೆ ಸಂಬಂಧಿಸಿ ಇಸ್ಲಾಮ್ ಧರ್ಮದ ಮೂಲ ತತ್ವಗಳ ಆಧಾರ ಗ್ರಂಥವಾದ ಪವಿತ್ರ ಖುರ್‌ಆನ್ ಏನು ಪ್ರತಿಪಾದಿಸುತ್ತಿದೆ ಎಂದು ಅರಿತುಕೊಳ್ಳುವುದು ಅತ್ಯಂತ ಮುಖ್ಯವಾಗಿದೆ. ಇಸ್ಲಾಮ್ ಧರ್ಮದ ಪ್ರಚಾರಕ್ಕೆ ಸಂಬಂಧಿಸಿ ಪವಿತ್ರ ಖುರ್‌ಆನ್ ಅಧ್ಯಾಯ 10 ವಚನ 100ರಲ್ಲಿ ಸರ್ವಶಕ್ತನಾದ ಅಲ್ಲಾಹನು ಹೀಗೆ ಹೇಳುತ್ತಾನೆ:

**"ನಿನ್ನ ಪ್ರಭು ಇಚ್ಛಿಸಿದ್ದರೆ ಭೂಲೋಕದಲ್ಲಿರುವ ಎಲ್ಲರೂ ವಿಶ್ವಾಸ ಹೊಂದುತ್ತಿದ್ದರು. (ಆದರೆ ಅವನು ನಿರ್ಬಂಧಿಸುವುದಿಲ್ಲ) ಹಾಗಿರುವಾಗ ಜನರು ವಿಶ್ವಾಸಿಗಳಾಗುವಂತೆ ನೀನು ಬಲವಂತ ಪಡಿಸುವಿಯೋ?"**

ಪವಿತ್ರ ಖುರ್‌ಆನಿನ ಈ ವಚನದಲ್ಲಿ ಸರ್ವಶಕ್ತನಾದ ಅಲ್ಲಾಹನು ಹೀಗೆ ಘೋಷಿಸುತ್ತಾನೆ: ಅವನು ಇಚ್ಛಿಸುತ್ತಿದ್ದರೆ ಎಲ್ಲ ಜನರನ್ನು ಇಸ್ಲಾಮ್ ಧರ್ಮವನ್ನು ಅಂಗೀಕರಿಸಲು ನಿರ್ಬಂಧಿಸಬಲ್ಲವನಾಗಿದ್ದನು. ಆದರೆ ಮಾನವರೆಲ್ಲರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯವಿರಬೇಕೆಂದು ಅಲ್ಲಾಹನು ನಿರ್ಧರಿಸಿದನು. ಆದುದರಿಂದ ಜನರನ್ನು ಇಸ್ಲಾಮನ್ನು ಅಂಗೀಕರಿಸಲು ಅವನು ಬಲವಂತಪಡಿಸಲಿಲ್ಲ ಎಂದು ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ, ಆದುದರಿಂದ ಪವಿತ್ರ ಪೈಗಂಬರರಿಗೆ ಮತ್ತು ಅವರ

ಅನುಯಾಯಿಗಳಿಗೆ ಜನರಿಗೆ ನೀಡಲಾದ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಉಲ್ಲಂಘಿಸುವುದು ಅಸಾಧ್ಯವಾಗಿದೆ. ಇಸ್ಲಾಮ್ ಧರ್ಮ ಪ್ರಚಾರಕ್ಕೋಸ್ಕರ ಬಲಪ್ರಯೋಗ ಮಾಡುವುದನ್ನು ಅನುಮತಿಸುವುದಿಲ್ಲ ಮತ್ತು ಪ್ರತಿಯೊಬ್ಬ ವ್ಯಕ್ತಿಗೆ ತನಗಿಷ್ಟವಿರುವ ವಿಶ್ವಾಸವನ್ನು ಆಯ್ಕೆ ಮಾಡುವ ಅಧಿಕಾರವಿದೆ ಎಂದು ಪವಿತ್ರ ಖುರ್‌ಆನಿನ ಈ ವಚನ ಅಸಂಧಿಗ್ಧವಾಗಿ ಸಾಕ್ಷ್ಯ ನೀಡುತ್ತದೆ. ಇದೇ ರೀತಿ ಪವಿತ್ರ ಖುರ್‌ಆನ್ ಅಧ್ಯಾಯ 18 ವಚನ 30ರಲ್ಲಿ ಹೀಗೆ ಹೇಳಲಾಗಿದೆ:

**"ಹೇಳು; ಇದು ನಿಮ್ಮ ಪ್ರಭುವಿನ ಕಡೆಯಿಂದಿರುವ ಸತ್ಯವಾಗಿದೆ. ಆದ್ದರಿಂದ ಯಾರು ಇಚ್ಛಿಸುತ್ತಾನೋ ಅವನು ನಂಬಲಿ. ಯಾರು ಇಚ್ಛಿಸುತ್ತಾನೋ ಅವನು ನಿರಾಕರಿಸಲಿ."**

ಇಸ್ಲಾಮ್ ಸರ್ವಶಕ್ತನಾದ ಅಲ್ಲಾಹನಿಂದ ಆಗಮಿಸಿದ ಧರ್ಮವೆಂದೂ ಅದು ಮಾನವರನ್ನು ಮೋಕ್ಷ ಗಳಿಸಲಿಕ್ಕೋಸ್ಕರ ಒಯ್ಯುವ ಸತ್ಯದ ಶಿಖರವೆಂದು ದೃಢವಾಗಿ ಪ್ರತಿಪಾದಿಸುತ್ತಿರುವಾಗಲೂ ಪವಿತ್ರ ಖುರ್‌ಆನಿನ ವಚನ ಹೀಗೆ ಪುನರಾವರ್ತಿಸುತ್ತಿದೆ: ಪ್ರತಿಯೊಬ್ಬನಿಗೆ ಇಸ್ಲಾಮ್ ಧರ್ಮ ತತ್ವಗಳನ್ನು ಅಂಗೀಕರಿಸುವ ಮತ್ತು ನಿರಾಕರಿಸುವ ಸ್ವಾತಂತ್ರ್ಯ ಇದೆ. ಹೇಯವಾದ ಮತ್ತು ವಿನಾಶಕಾರಿಯಾದ ಖಡ್ಗಗಳ, ಬಾಂಬುಗಳ, ಅಥವಾ ಕೋವಿಗಳ ಬಲದಿಂದ ಬಲವಂತವಾಗಿ ಇಸ್ಲಾಮ್ ಧರ್ಮವನ್ನು ಪ್ರಚಾರಮಾಡಲು ಮುಸ್ಲಿಮರಿಗೆ ಅನುಮತಿಸುವುದಿಲ್ಲ. ಅದಕ್ಕೆ ಬದಲಾಗಿ ವೈಚಾರಿಕ ಸಾಕ್ಷ್ಯಗಳನ್ನು ನೀಡಲು ಮತ್ತು ಪ್ರೀತಿ ವಿಶ್ವಾಸಗಳಿಂದ ಜನರ ಹೃದಯಗಳನ್ನೂ ಮನಸ್ಸುಗಳನ್ನೂ ಗೆಲ್ಲಲು ಮುಸ್ಲಿಮರಿಗೆ ಇಸ್ಲಾಮ್ ಉಪದೇಶಿಸುತ್ತಿದೆ.

ಇಷ್ಟು ಮಾತ್ರವಲ್ಲ, ಇಸ್ಲಾಮ್ ಹೀಗೆ ಉಪದೇಶಿಸುತ್ತದೆ: ಎಲ್ಲ ಜನಾಂಗಗಳ ಜನರು ಸಮಾಜದಲ್ಲಿ ಸೌಹಾರ್ದದಿಂದ ಜೀವಿಸಬೇಕೆಂದೂ ಅದಕ್ಕೆ ಆವಶ್ಯಕವಾದುದು ಪರಸ್ಪರ ಗೌರವ ನೀಡುವಿಕೆ, ಸಹಿಷ್ಣು ಮನೋಭಾವ ವಿವಿಧ ವಿಶ್ವಾಸಾದರ್ಶಗಳನ್ನು ಹೊಂದಿದ ಜನರ ಮಧ್ಯೆ ಇರಬೇಕೆಂದೂ. ಸರ್ವಶಕ್ತನಾದ ಅಲ್ಲಾಹನು ಮುಸ್ಲಿಮರಿಗೆ ಆಜ್ಞಾಪಿಸಿದ್ದಾನೆ – ಅವರೆಲ್ಲರೂ ಅತ್ಯುತ್ತಮ ಮಟ್ಟದ ನೈತಿಕ ಗುಣಗಳನ್ನು ಹೊಂದಿದವರಾಗಬೇಕೆಂದು. ಚಿಕ್ಕ ಪುಟ್ಟ ವಿಷಯಗಳು ಗಮನಾರ್ಹವಾಗಿರದಿದ್ದರೂ ಅವುಗಳಿಗೆ ಸಂಬಂಧಿಸಿ ಸಹ ಅತ್ಯುತ್ತಮವಾಗಿ ವರ್ತಿಸುವ ಬಗ್ಗೆ ಕಾಳಜಿ ವಹಿಸಬೇಕೆಂದು ಇಸ್ಲಾಮ್ ಆಜ್ಞಾಪಿಸುತ್ತದೆ.

ಕಾರುಣ್ಯ ಭಾವದಿಂದ ವರ್ತಿಸುವುದನ್ನು ಸಂಬಂಧಿಕರಿಗೆ ಮತ್ತು ಮುಸ್ಲಿಮ್ ಸಹಜೀವಿಗಳಿಗೆ ಸೀಮಿತಗೊಳಿಸಬೇಕೆಂದು ಇಸ್ಲಾಮ್ ಉಪದೇಶಿಸುವುದಿಲ್ಲ. ಮುಸ್ಲಿಮರು ಎಲ್ಲ ಜನರೊಂದಿಗೆ ನ್ಯಾಯಪೂರ್ಣವಾಗಿಯೂ ಔದಾರ್ಯದಿಂದಲೂ ಕಾರುಣ್ಯ ಭಾವದಿಂದಲೂ ವರ್ತಿಸಬೇಕೆಂದು ಪವಿತ್ರ ಖುರ್‌ಆನ್ ಆಜ್ಞಾಪಿಸುತ್ತದೆ.

ಉದಾಹರಣೆಗೆ, ಪವಿತ್ರ ಖುರ್‌ಆನ್ ಅಧ್ಯಾಯ 5 ವಚನ 9ರಲ್ಲಿ ಶಾಶ್ವತವೂ ಅಮೋಘವೂ ಆಗಿರುವ ಸತ್ಯ ಮತ್ತು ಪ್ರಾಮಾಣಿಕತೆಯ ತತ್ವವನ್ನು ಸರ್ವಶಕ್ತನಾದ ಅಲ್ಲಾಹನು ಹೀಗೆ ಪ್ರತಿಪಾದಿಸುತ್ತಾನೆ:

**"ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯದಿಂದ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ"**

ಈ ವಚನ ಹೀಗೆ ಮುಂದುವರಿಯುತ್ತದೆ: **"(ಸದಾ) ನೀವು ನ್ಯಾಯುತವಾಗಿ ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾದುದು"**

ಪವಿತ್ರ ಖುರ್‌ಆನಿನ ಈ ವಚನ ಇಸ್ಲಾಮ್ ಪ್ರತಿಪಾದಿಸುವ ನ್ಯಾಯದ ಮಾನದಂಡ ಏನೆಂದು ವಿವರಿಸುತ್ತದೆ. ಅದು ಹೀಗೆ ಆವಶ್ಯಪಡುತ್ತದೆ – ಯಾರಾದರೂ ನಿಮ್ಮೊಂದಿಗೆ ಕೆಟ್ಟದಾಗಿ ವರ್ತಿಸಿದರೂ ಅಥವಾ ನಿಮ್ಮನ್ನು ಹಿಂಸಾಚಾರಕ್ಕೆ ಗುರಿಪಡಿಸಿದರೂ ನೀವು ಎಂದೂ ಪ್ರತೀಕಾರ ಭಾವನೆಯಿಂದ ವರ್ತಿಸಬಾರದು ಮತ್ತು ನಿಮ್ಮ ಮೇಲೆ ನಡೆಸಲಾದ ಆಕ್ರಮಣಕ್ಕೆ ಅದರ ಪ್ರಮಾಣಕ್ಕೆ ಅನುಸಾರವಾಗಿ ಹೊರತು ಮಿತಿಮೀರಿ ಪ್ರತ್ಯಾಕ್ರಮಣ ಮಾಡಬಾರದು. ಚರಿತ್ರೆಯಲ್ಲಿ ಯುದ್ಧಗಳ ಮತ್ತು ವಿವಾದಗಳ ಹಾವಳಿ ಸಮಾಜವನ್ನು ಬಾಧಿಸಿದುದಾಗಿ ನಾವು ಕಾಣುತ್ತೇವೆ. ಈಗ ಸಹ ದುಃಖದಾಯಕವಾದ ಈ ಸ್ಥಿತಿ ಮುಂದುವರಿಯುತ್ತಿದೆ. ಅಂತರ್‌ರಾಷ್ಟ್ರೀಯ ಸಂಬಂಧಗಳಲ್ಲಿಯೂ ಯುದ್ಧ ನಿರತ ದೇಶಗಳ ಮಧ್ಯೆಯೂ ಆ ದೇಶಗಳ ಸರಕಾರಗಳು ಧಾರ್ಮಿಕವಾಗಿ ಆಡಳಿತೆ ನಡೆಸುತ್ತಿದ್ದರೂ ಜಾತ್ಯತೀತವಾಗಿದ್ದರೂ ಇಸ್ಲಾಮ್ ಪ್ರತಿಪಾದಿಸುತ್ತಿರುವ ಗೌರವಾನ್ವಿತ ನ್ಯಾಯಪಾಲನೆಯ ಮಾನದಂಡವನ್ನು ಪಾಲಿಸುತ್ತಿವೆ ಎಂದು ಹೇಳಲು ಸಾಧ್ಯವೇ? ಇದಕ್ಕಿರುವ ಸರಳ ಉತ್ತರ ಇಲ್ಲ ಎಂದೇ ಆಗಿದೆ. ಇಸ್ಲಾಮ್‌ನಲ್ಲಿ ಮಾತ್ರ ಇಂತಹ ಅಸಂದಿಗ್ಧ ಮತ್ತು ಅಪ್ರತಿಮ ಪರಿಪೂರ್ಣ ನ್ಯಾಯದ ತತ್ವವನ್ನು ನಾವು ಕಾಣಬಹುದಾಗಿದೆ. ಆದರೆ ಆಧುನಿಕ ಕಾಲದಲ್ಲಿ ಮುಸ್ಲಿಮ್ ದೇಶಗಳ ಸರಕಾರಗಳು ಸಹ ಇಸ್ಲಾಮ್ ಧರ್ಮದ ಮಾನದಂಡಗಳಿಗೆ ಅನುಸಾರವಾಗಿ ಆಡಳಿತೆ ನಡೆಸುತ್ತಾ ಇಲ್ಲ ಎನ್ನುವುದು ದುಃಖಕರವಾಗಿದೆ.

ಪದೇ ಪದೇ ಪುನರಾವರ್ತಿಸಲ್ಪಡುವ ಇನ್ನೊಂದು ಆಕ್ಷೇಪ ಇಸ್ಲಾಮ್ ಯುದ್ಧ ಮತ್ತು ರಕ್ತಪಾತದ ಧರ್ಮವಾಗಿದೆ ಎಂದು. ಈ ವಿಷಯಕ್ಕೆ ಸಂಬಂಧಿಸಿ ಸ್ಪಷ್ಟವಾಗಿರುವುದು ಹೀಗೆ: ಸರ್ವಶಕ್ತನಾದ ಅಲ್ಲಾಹನು ಯುದ್ಧ ಮಾಡಲು ಮತ್ತು ಆಯುಧ ಧಾರಿಗಳಾಗಿ ಹೋರಾಡಲು ಮುಸ್ಲಿಮರಿಗೆ ಹತೋಟಿ ರಹಿತವಾದ ಅನುಮತಿ ಎಂದೂ ನೀಡಿಲ್ಲ. ಅತ್ಯಂತ ತೀವ್ರ ಪರಿಸ್ಥಿತಿಗಳಲ್ಲಿ ಕಠಿಣ ನಿಬಂಧನೆಗಳಿಗೆ ಅನುಸಾರವಾಗಿ ಪ್ರತಿರೋಧಾತ್ಮಕವಾಗಿ ಹೋರಾಡಲು ಪವಿತ್ರ ಖುರ್‌ಆನ್ ಮುಸ್ಲಿಮರಿಗೆ ಅನುಮತಿ ನೀಡಿದೆ.

ಇಸ್ಲಾಮಿನ ಪ್ರಾರಂಭದ ಕಾಲದ ಬಗ್ಗೆ ವಸ್ತುನಿಷ್ಠವಾಗಿ ಮತ್ತು ನಿಷ್ಪಕ್ಷ ದೃಷ್ಟಿಕೋನದಿಂದ ವೀಕ್ಷಿಸುವುದಾದರೆ ಹೀಗೆ ಕಾಣಿಸುವುದು, ಪವಿತ್ರ ಪೈಗಂಬರ್ ಮುಹಮ್ಮದ್(ಸ) ಪ್ರತಿರೋಧಾತ್ಮಕವಾದ ಯುದ್ಧಗಳನ್ನು ಮಾತ್ರ ಮಾಡಿದ್ದರು. ತಮ್ಮ ಸ್ವಂತ ನಗರವಾದ ಮಕ್ಕದಲ್ಲಿ ಮುಸ್ಲಿಮೇತರ ಅವಿಶ್ವಾಸಿಗಳಿಂದ ಅನೇಕ ವರ್ಷಗಳ ಕಾಲ ಕ್ರೂರ ಹಿಂಸಾಚಾರಗಳಿಗೆ ಗುರಿಯಾದ ನಂತರ ಪವಿತ್ರ ಪೈಗಂಬರ್ ಮುಹಮ್ಮದ್(ಸ) ಮತ್ತು ಅವರ ಅನುಯಾಯಿಗಳು ಮದೀನ ನಗರಕ್ಕೆ ವಲಸೆ ಹೋದರು. ಆದರೆ ಮದೀನದಲ್ಲಿ ಅವರಿಗೆ ನೆಮ್ಮದಿಯಿಂದ ಜೀವಿಸಲಾಗಲಿಲ್ಲ. ಏಕೆಂದರೆ ಮಕ್ಕದ ಅವಿಶ್ವಾಸಿಗಳು ಪವಿತ್ರ ಪ್ರವಾದಿ ಮುಹಮ್ಮದ್‌ರನ್ನು(ಸ) ಕೊಲ್ಲಲು ಮತ್ತು ಇಸ್ಲಾಮನ್ನು ನಾಶಮಾಡಲು

ಅವರನ್ನು ಬೆನ್ನಟ್ಟಿದ್ದರು.

ಇಂತಹ ಕಠಿಣ ಪರಿಸ್ಥಿಯಲ್ಲಿ ಸರ್ವಶಕ್ತನಾದ ಅಲ್ಲಾಹನು ಪ್ರತಿರೋಧಾತ್ಮಕ ಯುದ್ಧ ಮಾಡಲು ಮುಸ್ಲಿಮರಿಗೆ ಅನುಮತಿ ನೀಡಿದನು. ಈ ಅನುಮತಿಯ ವಿವರಣೆ ಪವಿತ್ರ ಖುರ್‌ಆನ್ ಅಧ್ಯಾಯ 22 ವಚನ 40–41ರಲ್ಲಿ ಹೀಗೆ ನೀಡಲಾಗಿದೆ:

**"ಯಾರ ವಿರುದ್ಧ ಯುದ್ಧ ಹೂಡಲಾಗಿದೆಯೋ ಅವರಿಗೆ ಪ್ರತಿ ಯುದ್ಧ ಮಾಡುವ ಅನುಮತಿ ಇದೆ. ಏಕೆಂದರೆ ಅವರು ಆಕ್ರಮಣಕ್ಕೊಳಗಾಗಿದ್ದಾರೆ. ನಿಶ್ಚಯವಾಗಿಯೂ ಅವರಿಗೆ ಸಹಾಯ ನೀಡಲು ಅಲ್ಲಾಹನಿಗೆ ಸಾಮರ್ಥ್ಯವಿದೆ.**

**" 'ಅಲ್ಲಾಹನೇ ನಮ್ಮ ಪ್ರಭು' ಎಂದು ಹೇಳಿದ ಮಾತ್ರಕ್ಕೆ ಅವರನ್ನು ಅನ್ಯಾಯದಿಂದ ಅವರ ಮನೆಗಳಿಂದ ಹೊರಗೆ ಅಟ್ಟಲಾಯಿತು. ಅಲ್ಲಾಹನು ಜನರಲ್ಲಿ ಕೆಲವರನ್ನು (ಅವರು ಮಾಡುವ ದೌರ್ಜನ್ಯಗಳನ್ನು) ಬೇರೆ ಕೆಲವರ ಮೂಲಕ ತಡೆಯದಿರುತ್ತಿದ್ದರೆ ಸನ್ಯಾಸಿ ಮಠಗಳೂ ಇಗರ್ಜಿಗಳೂ ಯಹೂದಿ ಮಂದಿರಗಳೂ ಮಸ್‌ಜಿದ್‌ಗಳೂ ನಿರ್ನಾಮವಾಗುತ್ತಿದ್ದುವು. ಅವುಗಳಲ್ಲಿ ಅಲ್ಲಾಹನ ನಾಮ ಹೆಚ್ಚು ಹೆಚ್ಚಾಗಿ ಸ್ಮರಿಸಲ್ಪಡುತ್ತದೆ."**

ಈ ವಚನಗಳು ಹೀಗೆ ಸೂಚಿಸುತ್ತವೆ: ಸರ್ವಶಕ್ತನಾದ ಅಲ್ಲಾಹನು ಪವಿತ್ರ ಪೈಗಂಬರ್ ಮುಹಮ್ಮದ್‌ರಿಗೆ[ಸ] ಯುದ್ಧ ಮಾಡಲು ಆಜ್ಞಾಪಿಸಿದುದು ಕೇವಲ ಇಸ್ಲಾಮ್ ಧರ್ಮವನ್ನು ಮಾತ್ರ ರಕ್ಷಿಸಲಿಕ್ಕೋಸ್ಕರವಾಗಿರಲಿಲ್ಲ. ಪವಿತ್ರ ಖುರ್‌ಆನ್ ಹೀಗೆ ಸಾಕ್ಷ್ಯ ನೀಡುತ್ತದೆ – ಮಕ್ಕದ ಅವಿಶ್ವಾಸಿಗಳು ಉದ್ದೇಶಿಸಿದುದು ಎಲ್ಲ ಧರ್ಮಗಳನ್ನು ಮತ್ತು ಆರಾಧನಾಲಯಗಳನ್ನು ನಾಶ ಮಾಡುವುದಾಗಿತ್ತು. ಇದೇ ಕಾರಣದಿಂದ ಸರ್ವಶಕ್ತನಾದ ಅಲ್ಲಾಹನು ಮುಸ್ಲಿಮರಿಗೆ ಪ್ರತಿರೋಧಾತ್ಮಕ ಯುದ್ಧ ಮಾಡಲು ಆಜ್ಞಾಪಿಸಿದನು. ಅದು ಮನಸ್ಸಾಕ್ಷಿಯ ಸ್ವಾತಂತ್ರ್ಯ ಮತ್ತು ವಿಶ್ವಾಸದ ಸ್ವಾತಂತ್ರ್ಯವೆಂಬ ಸಾರ್ವತ್ರಿಕ ತತ್ವಗಳನ್ನು ಸ್ಥಾಪಿಸಲಿಕ್ಕೋಸ್ಕರವಾಗಿತ್ತು. ಇಸ್ಲಾಮ್ ಧರ್ಮದ ತತ್ವಗಳು ಹೇಗಿವೆ ಎಂದರೆ ಅನ್ಯ ಧರ್ಮದ ಜನರು ತಮ್ಮ ಧರ್ಮವನ್ನು ಮತ್ತು ಧಾರ್ಮಿಕ ಸ್ವಾತಂತ್ರ್ಯವನ್ನು ರಕ್ಷಿಸಲು ಮುಸ್ಲಿಮರ ಸಹಾಯವನ್ನು ಬೇಡಿಕೊಂಡರೆ ಮುಸ್ಲಿಮರು ಖಂಡಿತವಾಗಿಯೂ ಅವರಿಗೆ ಸಹಾಯ ಮಾಡಬೇಕು.

ಇಸ್ಲಾಮ್ ಧರ್ಮದ ತತ್ವಗಳು ನಾನು ವಿವರಿಸಿದ ಪ್ರಕಾರವೇ ವಾಸ್ತವಿಕವಾಗಿಯೂ ಆಗಿದ್ದರೆ ಭಯೋತ್ಪಾದಕರು ಇಸ್ಲಾಮಿನ ಹೆಸರಿನಲ್ಲಿ ಘೋರ ಕೃತ್ಯಗಳನ್ನು ಏಕೆ ಮಾಡುತ್ತಿದ್ದಾರೆ ಎಂದು ನೀವು ಪ್ರಶ್ನಿಸಬಹುದು. ಇದಕ್ಕೆ ಉತ್ತರವೇನೆಂದರೆ, ದ್ವೇಷಭರಿತ ತೀವ್ರವಾದಿಗಳು ಅಥವಾ ರಾಜಕೀಯ ಉದ್ದೇಶ ಹೊಂದಿದವರು ಪವಿತ್ರ ಖುರ್‌ಆನಿನ ಕೆಲವು ವಚನಗಳಿಗೆ ಊಹಾತ್ಮಕ ವ್ಯಾಖ್ಯಾನಗಳನ್ನು ತಮ್ಮ ದುರುದ್ದೇಶಗಳನ್ನು ಈಡೇರಿಸಲು ನೀಡಿರುವರು. ಹೀಗಿದ್ದರೂ ಪವಿತ್ರ ಖುರ್‌ಆನಿನ ಆ ವಚನಗಳು ಅವತೀರ್ಣವಾದ ಸಂದರ್ಭವನ್ನು ಪರಿಗಣಿಸುವುದಾದರೆ ಮತ್ತು ನಿಷ್ಪಕ್ಷವಾಗಿ ನಿಷ್ಕರ್ಷೆ ಮಾಡುವುದಾದರೆ ಅವರಿಗೆ ಮನವರಿಕೆ ಆಗುವುದು – ಇಸ್ಲಾಮ್ ಯಾವುದೇ ಕ್ರೌರ್ಯ ಕೃತ್ಯಗಳನ್ನು ಪ್ರತಿಪಾದಿಸುವುದಿಲ್ಲ ಮತ್ತು ಪವಿತ್ರ ಖುರ್‌ಆನ್‌ನಲ್ಲಾಗಲಿ ಇಸ್ಲಾಮಿನಲ್ಲಾಗಲಿ ಯಾವುದೇ ವೈರುದ್ಧ್ಯಗಳಿಲ್ಲ ಎಂದು. ನಿಸ್ಸಂದೇಹವಾಗಿ ಪವಿತ್ರ ಖುರ್‌ಆನಿನ ವಚನಗಳು ಪರಸ್ಪರ ಸಾಮರಸ್ಯವನ್ನು ಹೊಂದಿವೆ.

ಸಮಾಜದಲ್ಲಿ ಶಾಂತಿಯನ್ನು ಸ್ಥಾಪಿಸಲು ಇನ್ನೊಂದು ಸುವರ್ಣ ತತ್ವವನ್ನು ಪವಿತ್ರ ಖುರ್‌ಆನ್ ಅಧ್ಯಾಯ 16 ವಚನ 91ರಲ್ಲಿ ನೀಡಲಾಗಿದೆ. ಸರ್ವಶಕ್ತನಾದ ಅಲ್ಲಾಹನು ಹೀಗೆ ಹೇಳುತ್ತಾನೆ:

**"ನ್ಯಾಯ ನಿಷ್ಠೆಗೆ ಬದ್ಧರಾಗಲಿಕ್ಕೂ ಔದಾರ್ಯ ತೋರಿಸಲಿಕ್ಕೂ ನಿಕಟ ಬಂಧುಗಳಿಗೆ ಎಂಬಂತೆ (ಪರರಿಗೂ) ಸಹಾಯ ಮಾಡಲಿಕ್ಕೂ ಅಲ್ಲಾಹನು ಆಜ್ಞಾಪಿಸುತ್ತಾನೆ. ಅಸಭ್ಯತೆಯನ್ನೂ, ದುಷ್ಕೃತ್ಯವನ್ನೂ ನಿಯಮೋಲ್ಲಂಘನೆಯನ್ನೂ ಅವನು ನಿಷಿದ್ಧಗೊಳಿಸಿದ್ದಾನೆ. ಈ ಬಗ್ಗೆ ಲಕ್ಷ್ಯಗೊಡಲಿಕ್ಕೆ ಅವನು ನಿಮಗೆ ಉಪದೇಶ ನೀಡುತ್ತಾನೆ."**

ಪವಿತ್ರ ಖುರ್‌ಆನಿನ ಈ ವಚನದಲ್ಲಿ ಸರ್ವಶಕ್ತನಾದ ಅಲ್ಲಾಹನು ಮುಸ್ಲಿಮರಿಗೆ ಆಜ್ಞಾಪಿಸುತ್ತಾನೆ – ಅವರು ನ್ಯಾಯನಿಷ್ಠರಾಗಿ ವರ್ತಿಸುವುದರೊಂದಿಗೆ ಎಲ್ಲ ಜನರೊಂದಿಗೆ ಅವರು ಯಾವ ಧರ್ಮದವರಾಗಿದ್ದರೂ ಔದಾರ್ಯದಿಂದ ವರ್ತಿಸಬೇಕೆಂದೂ ಅವರಿಗೆ ಪ್ರೀತಿ ಮತ್ತು ಕಾರುಣ್ಯದೋರಬೇಕೆಂದೂ ಮುಸ್ಲಿಮರು ನಿಸ್ವಾರ್ಥಭಾವನೆಯಿಂದ ಯಾವುದೇ ಪ್ರತಿಫಲವನ್ನು ಆಶಿಸದೆ ಅನ್ಯರಿಗೆ ಸಹಾಯ ಮಾಡಬೇಕೆಂದೂ ಆಜ್ಞಾಪಿಸಲಾಗಿದೆ.

ಮುಸ್ಲಿಮರು ವಿದ್ರೋಹದಿಂದ ವರ್ತಿಸಿ ದೇಶದ ನಿಯಮಗಳನ್ನು ಉಲ್ಲಂಘಿಸಬಾರದೆಂದು ಇಸ್ಲಾಮ್ ಆಜ್ಞಾಪಿಸುತ್ತದೆ. ಆದುದರಿಂದ ಒಬ್ಬ ನೈಜ ಮುಸ್ಲಿಮ್ ತನ್ನ ದೇಶಕ್ಕಾಗಲೀ ಜನರಿಗಾಗಲೀ ಅಪಾಯಕಾರಿಯಾಗಲಾರ.

ಮುಂದಿನ ವಚನದಲ್ಲಿ ಎಂದರೆ ಪವಿತ್ರ ಖುರ್‌ಆನ್ ಅಧ್ಯಾಯ 16 ವಚನ 92ರಲ್ಲಿ ಸರ್ವಶಕ್ತನಾದ ಅಲ್ಲಾಹನು ಹೀಗೆ ಹೇಳುತ್ತಾನೆ:

**"ನೀವು ಅಲ್ಲಾಹನೊಡನೆ ಮಾಡಿದ ಕರಾರನ್ನು ಪಾಲಿಸಿರಿ. ಅಲ್ಲಾಹನನ್ನು ನೀವು ಜಾಮೀನುದಾರನನ್ನಾಗಿ ಮಾಡಿ ದೃಢ ಪ್ರತಿಜ್ಞೆಗೈದ ನಂತರ ಅದನ್ನು ಉಲ್ಲಂಘಿಸಬೇಡಿರಿ. ನಿಶ್ಚಯವಾಗಿಯೂ ನಿಮ್ಮ ಕೃತ್ಯಗಳ ಬಗ್ಗೆ ಅಲ್ಲಾಹನು ತಿಳಿಯುತ್ತಾನೆ."**

ಪವಿತ್ರ ಖುರ್‌ಆನಿನ ಈ ವಚನದಲ್ಲಿ ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ – ಮುಸ್ಲಿಮರು ಎಂದೂ ಕೊಟ್ಟಮಾತಿಗೆ ತಪ್ಪಬಾರದೆಂದೂ ಅವರು ತಮ್ಮ ವಾಗ್ದಾನಗಳನ್ನು ಈಡೇರಿಸಬೇಕೆಂದೂ ಯಾರು ತಮ್ಮ ಪ್ರತಿಜ್ಞೆಗಳನ್ನು ಉಲ್ಲಂಘಿಸುತ್ತಾರೋ ಅವರನ್ನು ಸರ್ವಶಕ್ತನಾದ ಅಲ್ಲಾಹನು ಅದಕ್ಕೆ ಹೊಣೆಗಾರರನ್ನಾಗಿ ಮಾಡಿ ವಿಚಾರಣೆ ಮಾಡುವನೆಂದೂ.

ಪಶ್ಚಿಮ ದೇಶಗಳಿಗೆ ವಲಸೆಗಾರರಾಗಿ ಆಗಮಿಸುವ ಮುಸ್ಲಿಮರ ನಿಷ್ಠೆ ಮತ್ತು ವಿಶ್ವಾಸಾರ್ಹತೆ ಬಗ್ಗೆ ಪದೇ ಪದೇ ಪ್ರಶ್ನಿಸಲಾಗುತ್ತಿದೆ. ಇಲ್ಲಿ ಜರ್ಮನಿಯಲ್ಲಿ ಮತ್ತು ಇತರ ದೇಶಗಳಲ್ಲಿ ನಾಗರಿಕರಾಗಿ ವಾಸಿಸುವ ಮುಸ್ಲಿಮರು ತಾವು ವಾಸಿಸುವ ದೇಶಕ್ಕೆ ನಿಷ್ಠೆಯನ್ನು ಪ್ರಾಮಾಣಿಕತೆಯಿಂದ ಹೊಂದಿದ್ದು ತಾವು ವಾಸಿಸುವ ದೇಶದ ನಿಯಮಗಳನ್ನು ಪಾಲಿಸುವುದಾಗಿ ಪ್ರತಿಜ್ಞೆ ಮಾಡುತ್ತಾರೆ. ತಮ್ಮ

ಪ್ರತಿಜ್ಞೆಗಳನ್ನು ಪಾಲಿಸುವುದು ಅವರ ಧಾರ್ಮಿಕ ಹೊಣೆಗಾರಿಕೆಯಾಗಿದೆ. ಅವರು ನಿಷ್ಠೆಯಿಂದ ತಮ್ಮ ದೇಶಗಳಿಗೆ ಸೇವೆ ಸಲ್ಲಿಸುತ್ತಿದ್ದಾರೆ ಮತ್ತು ಅವುಗಳ ಸಮೃದ್ಧಿಗೋಸ್ಕರ ಪರಿಶ್ರಮಿಸುತ್ತಿದ್ದಾರೆ.

ಪವಿತ್ರ ಪ್ರವಾದಿ ಮುಹಮ್ಮದ್[ಸ] ಹೇಳಿದ ಒಂದು ಪ್ರಸಿದ್ಧವಾದ ನುಡಿ ಹೀಗೆ ವರದಿಯಾಗಿದೆ: **"ದೇಶ ಪ್ರೇಮವು ವಿಶ್ವಾಸದ ಒಂದು ಭಾಗವಾಗಿದೆ."**

ಹೀಗಿರುವಾಗ ನೈಜ ಮುಸ್ಲಿಮರು ದೇಶಕ್ಕೆ ನಿಷ್ಠಾವಂತರಾಗಿಲ್ಲ ಮತ್ತು ಸಮಾಜದಲ್ಲಿ ಅವರು ಒಡಕನ್ನುಂಟುಮಾಡುವವರಾಗಿದ್ದಾರೆ ಎಂದು ಸೂಚಿಸಲು ಹೇಗೆ ತಾನೆ ಸಾಧ್ಯ? ಮುಸ್ಲಿಮರು ತಮ್ಮ ಪ್ರತಿಜ್ಞೆಗಳನ್ನು ಈಡೇರಿಸುವವರೂ ತಮ್ಮ ದೇಶಕ್ಕೋಸ್ಕರ ಸಾಧ್ಯವಿರುವ ಎಲ್ಲ ಬಲಿದಾನಗಳನ್ನು ಅರ್ಪಿಸಲು ಸದಾ ಸಿದ್ಧರಾಗಿರುವವರೂ ಆಗಿದ್ದಾರೆ.

ಇದಕ್ಕಿಂತ ಮಿಗಿಲಾದ ಭಾವೈಕ್ಯತೆ ಏನಿದೆ. ಮುಸ್ಲಿಮ್ ವಲಸೆಗಾರರು ಹೃತ್ಪೂರ್ವಕವಾಗಿ ಹೀಗೆ ದೃಢವಾಗಿ ನಂಬುತ್ತಾರೆ – ಅವರು ಅನ್ಯ ದೇಶದಲ್ಲಿ ಜನಿಸಿದವರಾಗಿದ್ದರೂ ಅವರು ಈಗ ಅವರು ವಾಸಿಸುವ ದೇಶದ ಭಾಗವಾಗಿದ್ದಾರೆ ಮತ್ತು ತಮ್ಮ ಈ ದೇಶದ ಏಳಿಗೆಗೋಸ್ಕರ ಮಹತ್ತಾದ ತ್ಯಾಗಗಳನ್ನು ಮಾಡಲು ಸಿದ್ಧರಾಗಿದ್ದಾರೆ. ಎಲ್ಲ ವಿಧಗಳ ವಿದ್ರೋಹ ಕೃತ್ಯಗಳನ್ನು ಅವರು ತಿರಸ್ಕರಿಸಲು ಮತ್ತು ಎಲ್ಲ ವಿಧಗಳ ನಿಯಮ ವಿರುದ್ಧ ಚಟುವಟಿಕೆಗಳಿಂದ ದೂರ ಸರಿಯಲು ಪ್ರತಿಜ್ಞಾಬದ್ಧರಾಗಿದ್ದಾರೆ. ಆದ್ದರಿಂದ ಮುಸ್ಲಿಮರು ಮುಸ್ಲಿಮೇತರ ದೇಶಗಳಲ್ಲಿ ಭಾವೈಕ್ಯತೆಯಿಂದ ಜೀವಿಸಲು ಸಾಮರ್ಥ್ಯ ರಹಿತರಾಗಿದ್ದಾರೆ ಎಂದು ಪ್ರತಿಪಾದಿಸಲ್ಪಟ್ಟದು ಸಂಪೂರ್ಣ ತಪ್ಪಾಗಿದೆ.

ಮುಸ್ಲಿಮರು ತಮ್ಮ ಧಾರ್ಮಿಕ ನಂಬಿಕೆಗಳ ಕಾರಣದಿಂದ ಮದ್ಯಪಾನ ಮಾಡುವುದಿಲ್ಲವಾದರೆ, ನೈಟ್ ಕ್ಲಬ್‌ಗಳಿಗೆ ಹೋಗುವುದಿಲ್ಲವಾದರೆ, ಸರಳವಾಗಿ ಬಟ್ಟೆಗಳನ್ನು ಧರಿಸುತ್ತಿರುವುದಾದರೆ, ತಮ್ಮ ನೈತಿಕ ಮೌಲ್ಯಗಳಿಗೆ ವಿರುದ್ಧವಾದ ನಡೆವಳಿಕೆಗಳನ್ನು ತಿರಸ್ಕರಿಸುವುದಾದರೆ, ಅದರ ಅರ್ಥ ಅವರು ದೇಶದ ಜನರೊಂದಿಗೆ ಭಾವೈಕ್ಯತೆ ಹೊಂದಿದವರಲ್ಲ ಎಂದಲ್ಲ.

ನನ್ನ ಅಭಿಪ್ರಾಯ ಪ್ರಕಾರ ದೇಶದ ನಿವಾಸಿಗಳೊಂದಿಗೆ ಭಾವೈಕ್ಯತೆ ಹೊಂದುವುದು ಹೀಗೆ – ವಲಸೆಗಾರನು ಯಾವಾಗಲೂ ತಾನು ವಾಸಿಸುವ ದೇಶದ ಏಳಿಗೆಗೋಸ್ಕರ ತ್ಯಾಗಗಳನ್ನು ಮಾಡಲು ಸಿದ್ಧನಾಗಿರಬೇಕು ಮತ್ತು ದೇಶದ ಜನರಿಗೆ ಪ್ರಾಮಾಣಿಕತೆಯಿಂದ ಸೇವೆ ಮಾಡಬೇಕು.

ಇಂತಹ ಭಾವೈಕ್ಯತೆಯಿಂದ ಸಮಾಜದಲ್ಲಿ ವೈವಿಧ್ಯತೆ ಸ್ಥಾಪಿತವಾಗುವುದು ಮತ್ತು ಅದರಿಂದ ಸಮಾಜದಲ್ಲಿ ಒಡಕು ಮತ್ತು ಸಂಘರ್ಷ ತಲೆದೋರಲಾರದು. ಅದು ಸಮಾಜದಲ್ಲಿ ಐಕ್ಯತೆಯನ್ನು ಸೃಷ್ಟಿಸುವುದು.

ಸಮಾಜಕ್ಕೆ ಸೇವೆ ಸಲ್ಲಿಸುವುದರ ಬಗ್ಗೆ ಹೇಳುವುದಾದರೆ, ಸಮಾಜದಲ್ಲಿರುವ ಬಲಹೀನರಿಗೆ ಮತ್ತು ಕಷ್ಟವನ್ನು ಅನುಭವಿಸುವವರಿಗೆ ನೆರವು ನೀಡಬೇಕಾದುದು ಮುಸ್ಲಿಮರ ಹೊಣೆಗಾರಿಕೆಯಾಗಿದೆ. ಉದಾಹರಣೆಗೆ, ಪವಿತ್ರ ಖುರ್‌ಆನ್ ಅಧ್ಯಾಯ 51 ವಚನ 20ರಲ್ಲಿ ಸರ್ವಶಕ್ತನಾದ ಅಲ್ಲಾಹನು ಹೀಗೆ ಹೇಳುತ್ತಾನೆ: **"ಅವರ ಸಂಪತ್ತಿನಲ್ಲಿ ಯಾಚಿಸುವವರಿಗೂ (ಯಾಚಿಸದ) ದರಿದ್ರರಿಗೂ ಪಾಲು ಇದೆ."**

ಪವಿತ್ರ ಖುರ್‌ಆನಿನ ಈ ವಚನದಲ್ಲಿ ಒಬ್ಬ ನೈಜ ಮುಸ್ಲಿಮನ ಹೆಗ್ಗುರುತು ಹೀಗೆಂದು ಹೇಳಿದೆ – ನೈಜ ಮುಸ್ಲಿಮರು ದೇವನ ಎಲ್ಲ ಸೃಷ್ಟಿಗಳ ಬಗ್ಗೆ ಕಾಳಜಿ ಹೊಂದಿದವರಾಗಬೇಕು. ನೆರವಿನ ಆವಶ್ಯಕತೆ ಇರುವವರಿಗೆ ನೆರವು ನೀಡಬೇಕು. ನೆರವು ಬೇಡಿಕೊಂಡವರಿಗೂ ಬೇಡಿಕೊಳ್ಳದ ದರಿದ್ರರಿಗೂ ನೆರವು ನೀಡಬೇಕು. ಮುಸ್ಲಿಮನು ತನ್ನೊಂದಿಗೆ ನೆರವನ್ನು ಯಾಚಿಸುವ ತನಕ ಕಾಯಬಾರದು. ಅವನು ಸಮಾಜದಲ್ಲಿ ನೆರವಿನ ಆವಶ್ಯಕತೆ ಇರುವವರನ್ನು ಗುರುತಿಸಿ ಅವರ ಕಷ್ಟಗಳನ್ನು ನಿವಾರಿಸುವವನಾಗಬೇಕು.

ಪವಿತ್ರ ಖುರ್‌ಆನ್ ಈ ವಚನದಲ್ಲಿ ಹೀಗೆ ಸಹ ಸೂಚಿಸುತ್ತದೆ: ಕೆಲವು ಜೀವಿಗಳಿಗೆ ಎಂದರೆ ಪ್ರಾಣಿಗಳಿಗೆ ತಮ್ಮ ಆವಶ್ಯಕತೆಯ ಬಗ್ಗೆ ಹೇಳಲು ಸಾಧ್ಯವಿಲ್ಲ. ಅವುಗಳಿಗೂ ನೆರವು ನೀಡಬೇಕು. ಕೆಲವು ಜನರು ಹೀಗೆ ಯೋಚಿಸುತ್ತಾರೆ, ಇಸ್ಲಾಮ್ ಮೃಗಗಳನ್ನು ಸಾಕುವುದನ್ನು ಮತ್ತು ಅವುಗಳ ಬಗ್ಗೆ ಪ್ರೀತಿ ಸೂಚಿಸುವುದನ್ನು ನಿರುತ್ಸಾಹಪಡಿಸುತ್ತದೆ ಎಂದು. ಆದರೆ ಪವಿತ್ರ ಖುರ್‌ಆನಿನ ಈ ವಚನ ಮುಸ್ಲಿಮರು ತಮ್ಮ ಸಾಕು ಮೃಗಗಳ ಬಗ್ಗೆ ಕಾಳಜಿ ವಹಿಸುವ ಬಗ್ಗೆ ಸೂಚಿಸುತ್ತದೆ. ಈ ವಚನ ವನ್ಯ ಮೃಗಗಳ ಸಂರಕ್ಷಣೆಯ ಬಗ್ಗೆ ಮತ್ತು ಪರಿಸರ ಸಂರಕ್ಷಣೆ ಬಗ್ಗೆ ಸಹ ಸೂಚಿಸುತ್ತದೆ.

ಪವಿತ್ರ ಖುರ್‌ಆನ್ ಅಧ್ಯಾಯ 90 ವಚನ 14–17ರಲ್ಲಿ ಸರ್ವಶಕ್ತನಾದ ಅಲ್ಲಾಹನು ಮುಸ್ಲಿಮರಿಗೆ ಉಪದೇಶಿಸುತ್ತಾನೆ – ಸಮಾಜದ ಅತ್ಯಂತ ದುರ್ಬಲರಾದ ಜನರಿಗೆ ನೆರವು ನೀಡಲು, ಹಸಿದವರಿಗೆ ಆಹಾರ ನೀಡಲು ಮತ್ತು ದಾರಿದ್ರ್ಯದಿಂದ ಬಳಲುವವರಿಗೆ ನೆರವು ನೀಡಲು. ಕುಟುಂಬದ ಸಹಾಯವಾಗಲಿ, ಸ್ನೇಹಿತರ ಸಹಾಯವಾಗಲಿ ದೊರಕದ ಒಬ್ಬಂಟಿಗರಾದ ಜನರಿಗೆ ನೆರವು ನೀಡಲು ಮುಸ್ಲಿಮರಿಗೆ ಉಪದೇಶಿಸಲಾಗಿದೆ. ಗುಲಾಮರಾಗಿ ಬಂಧಿತರಾದವರಿಗೂ ದೌರ್ಜನ್ಯಗಳಿಗೆ ಗುರಿಯಾದವರಿಗೂ ವಿಮೋಚನೆ ನೀಡಬೇಕೆಂದು ಸಹ ಪವಿತ್ರ ಖುರ್‌ಆನಿನ ಈ ವಚನ ಸೂಚಿಸುತ್ತದೆ. ಅನಾಥರನ್ನು ಪ್ರೀತಿಸಬೇಕೆಂದು, ಅವರ ಹಕ್ಕುಗಳನ್ನು ಸಂರಕ್ಷಿಸಬೇಕೆಂದು ಮತ್ತು ಕಷ್ಟಪಡುವವರಿಗೆ ಸಾಂತ್ವನ ನೀಡಬೇಕೆಂದು ಮುಸ್ಲಿಮರಿಗೆ ಉಪದೇಶಿಸಲಾಗಿದೆ.

ಪವಿತ್ರ ಖುರ್‌ಆನಿನ ಪ್ರಕಾಶಭರಿತವಾದ ಈ ವಚನಗಳು ಸಮಾಜದ ಅತ್ಯಂತ ದುರ್ಬಲರ ಹಕ್ಕುಗಳನ್ನು ಈಡೇರಿಸಿಕೊಡುವ ಬಗ್ಗೆ ಮತ್ತು ಅವರನ್ನು ಬಲಶಾಲಿಗಳನ್ನಾಗಿ ಮಾಡಲು ಮಾನವರಿಗೆ ಕರೆ ನೀಡುತ್ತವೆ. ಲೋಕದಿಂದ ಎಲ್ಲ ವಿಧಗಳ ಗುಲಾಮಗಿರಿಯನ್ನೂ ದಾರಿದ್ರ್ಯವನ್ನೂ ನಿರ್ಗತಿಕ ಸ್ಥಿತಿಯನ್ನೂ ನೀಗಿಸಲು ಮುಸ್ಲಿಮರು ಮುಖ್ಯ ಪಾತ್ರವಹಿಸಬೇಕೆಂದು ಉಪದೇಶಿಸುತ್ತಿವೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಆಧ್ಯಾತ್ಮಿಕ ಅಭಿವೃದ್ಧಿ ಗಳಿಸಲು ಮಾನವರ ಸೇವೆ ಮಾಡುವುದು ಮೂಲಭೂತವಾದ ಮಾರ್ಗವಾಗಿದೆ ಎಂದು ಪವಿತ್ರ ಖುರ್‌ಆನ್ ನಮಗೆ ಉಪದೇಶಿಸುತ್ತದೆ.

ಜನರ ಹಕ್ಕುಗಳನ್ನು ಈಡೇರಿಸಿ ಕೊಡುವ ಬಗ್ಗೆ ಒತ್ತಿ ಹೇಳುವ ಬೇರೆ ಅನೇಕ ವಚನಗಳು ಪವಿತ್ರ ಖುರ್‌ಆನ್‌ನಲ್ಲಿವೆ. ಪವಿತ್ರ ಖುರ್‌ಆನ್ ಅಧ್ಯಾಯ 2 ವಚನ 149ರಲ್ಲಿ ಸರ್ವಶಕ್ತನಾದ ಅಲ್ಲಾಹನು ಪ್ರತಿಯೊಬ್ಬ ವ್ಯಕ್ತಿಗೆ ಅವನದೇ ಆದ ಉದ್ದೇಶ ಲಕ್ಷ್ಯಗಳಿರುವ ಬಗ್ಗೆ ಹೇಳುತ್ತಾನೆ. ಆದರೆ ಮುಸ್ಲಿಮನ ಉದ್ದೇಶಲಕ್ಷ್ಯ ಭಯಭಕ್ತಿಯಲ್ಲಿ ಮೇಲ್ಗೈ ಹೊಂದುವುದರಲ್ಲಿರಬೇಕೆಂದೂ ಉಪದೇಶಿಸಲಾಗಿದೆ. ಅನ್ಯರ ಬಗ್ಗೆ ಕಾರುಣ್ಯ ಮತ್ತು ಪ್ರೀತಿಯನ್ನು ಹೊಂದುವುದು, ಭಯಭಕ್ತಿಯನ್ನು ಹೊಂದುವುದಕ್ಕಿರುವ ಮೂಲಭೂತ ಆವಶ್ಯಕತೆ ಆಗಿದೆ.

ಪವಿತ್ರ ಖುರ್‌ಆನ್ ಅಧ್ಯಾಯ 4 ವಚನ 37ರಲ್ಲಿ ಅನ್ಯರೊಂದಿಗೆ ಪ್ರೀತಿಯಿಂದ ವರ್ತಿಸುವುದರ ಪ್ರಾಮುಖ್ಯತೆಯನ್ನು ಪುನರಾವರ್ತಿಸಿ ಹೇಳಲಾಗಿದೆ. ಉದಾಹರಣೆಗೆ, ಅದು ತಂದೆ ತಾಯಂದಿರರೊಂದಿಗೆ ವಾತ್ಸಲ್ಯದಿಂದಲೂ ಸಹನೆಯಿಂದಲೂ ವರ್ತಿಸಬೇಕೆಂದು ಉಪದೇಶಿಸುತ್ತದೆ. ಅದು ಸಂಬಂಧಿಕರ, ಪ್ರೀತಿಗೆ ಪಾತ್ರರಾದವರ ಮತ್ತು ಅನಾಥರ ಹಕ್ಕುಗಳ ಬಗ್ಗೆ ಉಪದೇಶಿಸುತ್ತದೆ. ಅದು ನೆರೆಹೊರೆಯವರ ಹಕ್ಕುಗಳ ಬಗ್ಗೆ ಸಹ ಹೇಳುತ್ತದೆ. ನೆರೆಹೊರೆಯವರು ಎಂಬ ಪದದ ಅರ್ಥ ಇಸ್ಲಾಮ್‌ನಲ್ಲಿ ಬಹಳ ವಿಸ್ತಾರವಾದುದಾಗಿದೆ. ಸುತ್ತುಮುತ್ತಲಿರುವ ಕನಿಷ್ಠ ನಲ್ವತ್ತು ಮನೆಗಳನ್ನು ನೆರೆಹೊರೆಯವರ ಮನೆಗಳೆಂದು ಗಣಿಸಲಾಗಿದೆ. ಸಹ ಪ್ರಯಾಣಿಕರು, ಸಹೋದ್ಯೋಗಿಗಳು ಮತ್ತು ಅಧೀನದಲ್ಲಿರುವವರು ಇವರಲ್ಲಿ ಸೇರಿದ್ದಾರೆ. ಪ್ರತಿಯೊಬ್ಬ ಮನುಷ್ಯರು ತನ್ನ ಸುತ್ತುಮುತ್ತಲು ಇರುವ ನಲ್ವತ್ತು ಮನೆಗಳ, ತಮ್ಮ ಸಹೋದ್ಯೋಗಿಗಳ, ಸಂಗಡಿಗರ ಹಕ್ಕುಗಳನ್ನು ಈಡೇರಿಸಿ ಕೊಡುವುದಾದರೆ ಸಮಾಜದಲ್ಲಿ ಸೌಹಾರ್ದ ಸ್ಥಾಪಿತವಾಗುವುದು ಮತ್ತು ಅದು ಸಂಘರ್ಷ ರಹಿತವಾಗುವುದು.

ಸಮಾಜದಲ್ಲಿ ಶಾಂತಿಯನ್ನು ಸ್ಥಾಪಿಸುವ ಇನ್ನೊಂದು ಸುವರ್ಣ ತತ್ವವನ್ನು ಪವಿತ್ರ ಖುರ್‌ಆನ್ ಅಧ್ಯಾಯ 49 ವಚನ 12ರಲ್ಲಿ ಪ್ರಸ್ತಾಪಿಸಲಾಗಿದೆ. ಸರ್ವಶಕ್ತನಾದ ಅಲ್ಲಾಹನು ಹೀಗೆ ಹೇಳುತ್ತಾನೆ– ಅನ್ಯ ಸಮುದಾಯದವರನ್ನೂ ಕೋಮುಗಳನ್ನೂ ಪರಿಹಾಸ ಮಾಡುವುದು ತಪ್ಪೆಂದು. ಅನ್ಯರನ್ನು ನಿಂದಿಸುವುದರಿಂದ ಮತ್ತು ಪರಿಹಾಸ ಮಾಡುವುದರಿಂದ ಖಂಡಿತವಾಗಿ ಸಮಾಜದ ಶಾಂತಿ ಕೆಟ್ಟುಹೋಗುತ್ತದೆ.

ಇತ್ತೀಚೆಗೆ ಸ್ವೀಡನ್‌ನಲ್ಲಿ ಕೆಲವು ವ್ಯಕ್ತಿಗಳು ಪವಿತ್ರ ಖುರ್‌ಆನ್ ಪ್ರತಿಗಳನ್ನು ಸುಟ್ಟು ಹಾಕಿ ನಾಶಮಾಡಿದರು ಮತ್ತು ತಮ್ಮ ಹೇಯ ಕೃತ್ಯವನ್ನು ಸೋಶಿಯಲ್ ಮೀಡಿಯಾದಲ್ಲಿ ಹೆಮ್ಮೆಯಿಂದ ಪ್ರದರ್ಶಿಸಿದರು. ಇದೇ ರೀತಿ ಅನೇಕ ವರ್ಷಗಳ ಕಾಲ ಅತ್ಯಂತ ನೋವನ್ನುಂಟುಮಾಡುವ ವ್ಯಂಗ್ಯ ಚಿತ್ರಗಳಿಂದ ಪವಿತ್ರ ಪೈಗಂಬರ್ ಮುಹಮ್ಮದ್‌ರನ್ನು(ಸ) ಚಿತ್ರಿಸಿ ಪ್ರಕಟಿಸಲಾಗಿದೆ. ನಮ್ಮ ಆಕ್ಷೇಪ, ಕೇವಲ ಮುಸ್ಲಿಮರ ಮತ್ತು ಇಸ್ಲಾಮಿನ ವಿರುದ್ಧ ಮಾಡಲಾದ ಹೀನ ಕೃತ್ಯಗಳ ಬಗ್ಗೆ ಮಾತ್ರವಲ್ಲ. ಪ್ರತಿಯೊಂದು ಧರ್ಮದ ಅನುಯಾಯಿಗಳಿಗೆ ಪವಿತ್ರವಾದುದನ್ನು ಹೀನೈಸುವುದು ಅಸಹ್ಯ ಕೃತ್ಯವಾಗಿದೆ ಮತ್ತು ಆ ಕೃತ್ಯವನ್ನು ಕಠಿಣವಾಗಿ ಖಂಡಿಸುವುದು ಆವಶ್ಯಕವಾಗಿದೆ. ಇಂತಹ ಹೇಯ ಕೃತ್ಯಗಳು ನಿಷ್ಕಳಂಕ ಜನರಿಗೆ ನೋವುಂಟುಮಾಡುತ್ತವೆ ಮತ್ತು ಅವರಲ್ಲಿ ಕ್ರೋಧದ ತೀವ್ರ ಭಾವನೆಗಳನ್ನು ಉತ್ತೇಜಿಸುತ್ತದೆ. ಈ ಕಾರಣದಿಂದ ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದಕ್ಕೆ ಭಂಗವುಂಟಾಗುತ್ತದೆ.

ಜನರು ಪರಸ್ಪರ ಭಾವನೆಗಳ ಬಗ್ಗೆ ಗಮನ ಹರಿಸುವುದು ಆವಶ್ಯಕವಾಗಿದೆ ಎಂದು ಇಸ್ಲಾಮ್ ಉಪದೇಶಿಸುತ್ತದೆ. ಜನರು ಪರಸ್ಪರ ಸಂವೇದನಶೀಲರಾಗಿ ವರ್ತಿಸಬೇಕೆಂದು ಅದು ಹೇಳುತ್ತದೆ.

ಕೊನೆಯದಾಗಿ, ನಾನು ಇಸ್ಲಾಮ್‌ನಲ್ಲಿ ಮಹಿಳೆಯರ ಹಕ್ಕುಗಳ ಬಗ್ಗೆ ವಿವರಿಸಲು ಇಚ್ಛಿಸುತ್ತೇನೆ. ನಿಶ್ಚಯವಾಗಿಯೂ ಮಹಿಳೆಯರ ಹಕ್ಕುಗಳಿಗೆ ಸಂಬಂಧಿಸಿ ಇಸ್ಲಾಮ್ ಬಗ್ಗೆ ಬಹಳ ತಪ್ಪು ಕಲ್ಪನೆಗಳು ಪದೇ ಪದೇ ಪ್ರಚಾರಗೊಳ್ಳುತ್ತಿವೆ. ವಾಸ್ತವಿಕವಾಗಿ ಇಸ್ಲಾಮ್ ಮಹಿಳೆಯರಿಗೆ ಹಕ್ಕುಗಳನ್ನು ಈಗ ಪ್ರಗತಿಶೀಲವೆಂದು ಕರೆಯಲ್ಪಡುವ ದೇಶಗಳು ಮಹಿಳೆಯರಿಗೆ ಹಕ್ಕುಗಳನ್ನು ನೀಡಿದ ಕಾಲಕ್ಕಿಂತ ಎಷ್ಟೋ ಶತಮಾನಗಳ ಹಿಂದೆ ನೀಡಿದೆ. ಮಹಿಳೆಯರ ಹಕ್ಕುಗಳ ಬಗ್ಗೆ ಯಾವುದೇ ಗಮನ ಹರಿಸದಿರುವ ಕಾಲಘಟ್ಟದಲ್ಲಿ ಪವಿತ್ರ ಖುರ್‌ಆನ್ ಮತ್ತು ಇಸ್ಲಾಮಿನ ಪವಿತ್ರ ಪೈಗಂಬರರು(ಸ) ಮಹಿಳೆಯರಿಗೆ ಅಸಂಖ್ಯಾತ ಹಕ್ಕುಗಳನ್ನು ನೀಡಿದರು. ವಿದ್ಯಾಭ್ಯಾಸ ಗಳಿಸುವ ಹಕ್ಕು, ವಿವಾಹ ವಿಚ್ಛೇದನೆ ಪಡೆಯುವ ಹಕ್ಕು ಮತ್ತು ವಾರಸುದಾರಿಕೆಯ ಹಕ್ಕು ಅವುಗಳಲ್ಲಿ ಸೇರಿದೆ.

ಒಂದು ಸಂದರ್ಭದಲ್ಲಿ ಇಸ್ಲಾಮಿನ ಪವಿತ್ರ ಪೈಗಂಬರರು(ಸ) ಮಹಿಳೆಯನ್ನು ಒಂದು ಪಕ್ಕೆಲುಬಿಗೆ ಹೋಲಿಸಿ ಹೇಳಿದರು: ಮಹಿಳೆಯರು ಸೂಕ್ಷ್ಮ ಪ್ರಕೃತಿಯವರೆಂದೂ ಅವರೊಂದಿಗೆ ಪ್ರೀತಿ ಮತ್ತು ಮೃದುತ್ವದಿಂದ ವರ್ತಿಸಬೇಕೆಂದೂ ಈ ಮೂಲಕ ಸೂಚಿಸಲಾಗಿದೆ. ಈ ವಾಕ್ಯವನ್ನು ಗಾಢವಾಗಿ ಪರಿಶೀಲಿಸುವುದಾದರೆ ಇಸ್ಲಾಮಿನಲ್ಲಿ ಮಹಿಳೆಯ ಸ್ಥಾನ ಎಷ್ಟು ಗೌರವಾನ್ವಿತವಾಗಿದೆ ಎಂದು ತಿಳಿಯುವುದು.

ಮನುಷ್ಯನ ಪಕ್ಕೆಲುಬು ಅವನ ಜೀವನಾಧಾರವಾಗಿರುವ ಅಂಗಗಳನ್ನು ರಕ್ಷಿಸುತ್ತದೆ. ಮಹಿಳೆಯನ್ನು ಮನುಷ್ಯನ ಪಕ್ಕೆಲುಬಿಗೆ ಹೋಲಿಸಿ ಹೇಳಿ ಪವಿತ್ರ ಪೈಗಂಬರರು(ಸ) ಹೀಗೆ ಸೂಚಿಸಿದ್ದಾರೆ: ಮಾನವರು ಬದುಕಿ ಬಾಳಲು ಮಹಿಳೆಯರು ಮೂಲಾಧಾರವಾಗಿದ್ದಾರೆ.

ಪವಿತ್ರ ಪೈಗಂಬರ್ ಮುಹಮ್ಮದ್‌ರವರ(ಸ) ಇನ್ನೊಂದು ಪ್ರಸಿದ್ಧವಾದ ನುಡಿ ಹೀಗಿದೆ: "ಸ್ವರ್ಗವು ಮಾತೆಯ ಪಾದದಡಿಯಲ್ಲಿದೆ." ಮಹಿಳೆಯರಿಗೆ ಈ ಅಪ್ರತಿಮ ಉನ್ನತ ಸ್ಥಾನವನ್ನು ನೀಡಲಾಗಿದೆ. ಏಕೆಂದರೆ ಸಮಾಜದ ಮುಂದಿನ ಪೀಳಿಗೆಯನ್ನು ಪೋಷಿಸಲು ಅವರು ಪ್ರಮುಖ ಪಾತ್ರ ವಹಿಸುತ್ತಾರೆ ಮತ್ತು ಅವರು ತಮ್ಮ ಮಕ್ಕಳಿಗೋಸ್ಕರ ಬೃಹತ್ತಾದ ತ್ಯಾಗಗಳನ್ನು ಮಾಡುತ್ತಾರೆ. ಒಬ್ಬ ತಾಯಿ ತನ್ನ ಮಕ್ಕಳಿಗೆ ಸಂಬಂಧಿಸಿದ ತನ್ನ ಹೊಣೆಗಾರಿಕೆಗಳನ್ನು ಈಡೇರಿಸುವುದಾದರೆ ಮಕ್ಕಳು ನೈತಿಕ ಗುಣಗಳನ್ನೂ ಭಯಭಕ್ತಿಯನ್ನೂ ಹೊಂದಿದ ವ್ಯಕ್ತಿಗಳಾಗಿ ಬೆಳೆಯುತ್ತಾರೆ ಮತ್ತು ಅವರು ಸಮಾಜಕ್ಕೆ ಗುಣಾತ್ಮಕ ಸೇವೆಯನ್ನು ಸಲ್ಲಿಸುವವರಾಗುತ್ತಾರೆ. ಈ ರೀತಿ ತಾಯಂದಿರು ತಮ್ಮ ಮಕ್ಕಳ ಇಹಲೋಕದ ಯಶಸ್ಸುಗಳಿಗೂ ಸಮೃದ್ಧಿಗಳಿಗೂ ಕಾರಣೀಭೂತರಾಗಿ ಅವರನ್ನು ಸ್ವರ್ಗಕ್ಕೆ ಒಯ್ಯುವ

ಮಾರ್ಗದಲ್ಲಿ ನಡೆಸುವವರಾಗುತ್ತಾರೆ.

ಪವಿತ್ರ ಖುರ್‌ಆನ್ ಅಧ್ಯಾಯ 4 ವಚನ 20ರಲ್ಲಿ ಮಹಿಳೆಯರ ಗಾರ್ಹಿಕ ಹಕ್ಕುಗಳ ಬಗ್ಗೆ ವಿವರಿಸಲಾಗಿದೆ. ಪತ್ನಿಯರೊಂದಿಗೆ ಪ್ರೀತಿಯಿಂದ ವರ್ತಿಸಬೇಕೆಂದೂ ಅವರ ಆವಶ್ಯಕತೆಗಳನ್ನು ಈಡೇರಿಸುವ ಬಗ್ಗೆ ಗಮನ ಹರಿಸಬೇಕೆಂದೂ ಉಪದೇಶಿಸಲಾಗಿದೆ. ಮಹಿಳೆಯರು ಸ್ವತಂತ್ರರೆಂದೂ ಅವರನ್ನು ಬಲವತ್ತಾಗಿ ಸ್ವಾಧೀನಪಡಿಸಲು ಪ್ರಯತ್ನಿಸಬಾರದು ಎಂದೂ ಉಪದೇಶಿಸಲಾಗಿದೆ. ಸಂಪತ್ತಿಗೆ ಸಂಬಂಧಿಸಿ ಮಹಿಳೆ ಸಂಪಾದಿಸಿದುದು ಆಕೆಗೆ ಸೇರಿದುದಾಗಿದೆ. ಅದರ ಒಂದು ಪಾಲನ್ನು ಆವಶ್ಯಪಡುವ ಹಕ್ಕು ಪತಿಗಿಲ್ಲ. ವಿವಾಹ ವಿಚ್ಛೇದನೆ ಸಂಭವಿಸಿದರೆ ವಿವಾಹದ ಸಂದರ್ಭದಲ್ಲಿ ಮಹಿಳೆಗೆ ನೀಡಿದುದನ್ನು ಆಕೆ ಇಟ್ಟುಕೊಳ್ಳಬಹುದು. ಇಂದಿನ ಕಾಲದಲ್ಲಿ ವಿವಾಹ ವಿಚ್ಛೇದನೆ ಸಂಭವಿಸಿದಾಗ ಪತಿ ಪತ್ನಿಗೆ ವಿವಾಹ ಸಂದರ್ಭದಲ್ಲಿ ನೀಡಿದವುಗಳನ್ನು ಮರಳಿ ಪಡೆಯಲು ದೀರ್ಘಕಾಲ ವ್ಯಾಜ್ಯಗಳು ನಡೆಯುತ್ತವೆ. ಆದರೆ ಇಸ್ಲಾಮ್ ಇದಕ್ಕೆ ಅನುಮತಿ ನೀಡುವುದಿಲ್ಲ.

ಪವಿತ್ರ ಖುರ್‌ಆನ್ ಅಧ್ಯಾಯ 16 ವಚನ 73ರಲ್ಲಿ ಮಹಿಳೆಯರೊಂದಿಗೆ ಹೇಗೆ ವರ್ತಿಸಬೇಕೆಂದು ಪುನಃ ಉಪದೇಶಿಸಲಾಗಿದೆ. ಪತಿಯಂದಿರು ತಮ್ಮ ಪತ್ನಿಯರೊಂದಿಗೆ ಮೃದುವಾಗಿ ವರ್ತಿಸಬೇಕೆಂದೂ ಅವರ ಮಕ್ಕಳನ್ನು ಹೆತ್ತು ನೀಡಿದ ಅವರನ್ನು ಮಮತೆಯಿಂದ ಕಾಣಬೇಕೆಂದೂ ಉಪದೇಶಿಸಲಾಗಿದೆ.

ಪವಿತ್ರ ಖುರ್‌ಆನ್ ಅಧ್ಯಾಯ 2 ವಚನ 188ರಲ್ಲಿ ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ – ಪತ್ನಿ ಆಕೆಯ ಪತಿಗೆ ಉಡಿಗೆ ಆಗಿದ್ದಾಳೆ. ಮತ್ತು ಪತಿ ಅವನ ಪತ್ನಿಗೆ ಉಡಿಗೆ ಅಗಿದ್ದಾನೆ. ಇದರ ಅರ್ಥ ಹೀಗೆ – ಪತಿ ಮತ್ತು ಪತ್ನಿ ಸಮಾನ ಸ್ಥಾನದಲ್ಲಿದ್ದಾರೆ. ಒಬ್ಬರು ಇನ್ನೊಬ್ಬರಿಗೆ ಸಂರಕ್ಷಣೆ ನೀಡುವ ಮಾರ್ಗವಾಗಿದ್ದಾರೆ. ಅವರು ಪರಸ್ಪರ ಪ್ರೀತಿ ಹೊಂದಬೇಕು ಮತ್ತು ಪರಸ್ಪರ ಸಂರಕ್ಷಣೆ ನೀಡುವವರಾಗಬೇಕು. ಪರಸ್ಪರ ನೋವನ್ನೂ ದುಃಖವನ್ನೂ ನೀಡುವವರಾಗಬಾರದು.

ಸೀಮಿತವಾಗಿ ಲಭ್ಯವಾಗಿರುವ ಸಮಯದಲ್ಲಿ, ಮಹಿಳೆಯರಿಗೆ ಇಸ್ಲಾಮ್ ನೀಡಿದ ಹಕ್ಕುಗಳ ಬಗ್ಗೆ ವಿವರಿಸಿದ್ದೇನೆ. ಇಸ್ಲಾಮ್ ಮಹಿಳೆಯರಿಗೆ ಹಕ್ಕುಗಳನ್ನು ನಿರಾಕರಿಸುತ್ತದೆ ಎಂದು ಆಕ್ಷೇಪಿಸುವುದು ನಿರಾಧಾರವಾಗಿದೆ ಮತ್ತು ವಾಸ್ತವಿಕಾಂಶಗಳಿಗೆ ವಿರುದ್ಧವಾಗಿದೆ.

ಇಸ್ಲಾಮ್ ಮಹಿಳೆಯರ ಹಕ್ಕುಗಳ ಬಗ್ಗೆ ಪ್ರಸ್ತಾಪಿಸುವ ತತ್ವಗಳು ನಿಜವಾಗಿಯೂ ಕ್ರಾಂತಿಕಾರಿಯಾಗಿವೆ ಎಂದು ಹೇಳುವುದು ಅತಿಶಯೋಕ್ತಿಯಾಗಲಾರದು. ನಾನು ಹಿಂದೆ ವಿವರಿಸಿದ ಹಾಗೆ ಅನೇಕ ಆಕ್ಷೇಪಗಳನ್ನು ಇಸ್ಲಾಮ್ ವಿರುದ್ಧ ಮಾಡಲಾಗಿದೆ. ಅವುಗಳೆಲ್ಲ ನಿರಾಧಾರ ಆಕ್ಷೇಪಗಳಾಗಿವೆ.

ಇಸ್ಲಾಮ್ ಹಿಂಸಾಚಾರ ಮತ್ತು ತೀವ್ರವಾದದ ಧರ್ಮವೆಂದು ಘೋಷಿಸುವುದು ಮತ್ತು ಅದರ ನೈತಿಕ ಮೌಲ್ಯಗಳು ಯಾವುದಾದರೂ ರೀತಿಯಲ್ಲಿ ನ್ಯೂನತೆ ಭರಿತವಾಗಿವೆ ಎಂದು ಹೇಳುವುದು ಸಂಪೂರ್ಣವಾಗಿ ತಪ್ಪಾಗಿದೆ. ಇಸ್ಲಾಮ್ ಸಮಾಜದಲ್ಲಿ ಒಡಕನ್ನು ಸೃಷ್ಟಿಸುತ್ತದೆ ಎಂದು ಆಕ್ಷೇಪಿಸುವುದು ಅನ್ಯಾಯಕರವಾಗಿದೆ. ವಾಸ್ತವಿಕವಾಗಿ ಧರ್ಮವು ವಿವಿಧ ವಿಶ್ವಾಸಗಳನ್ನು ಹೊಂದಿರುವ ಜನರ ಮಧ್ಯೆ ಸೇತುವೆಗಳನ್ನು ನಿರ್ಮಿಸುತ್ತವೆ. ಇಸ್ಲಾಮ್ ಶಾಂತಿ, ಪ್ರೀತಿ ಮತ್ತು ಸೌಹಾರ್ದ ಪ್ರೋತ್ಸಾಹಿಸುವ ಧರ್ಮವಾಗಿದೆ.

ಇಸ್ಲಾಮ್ ಎಂಬ ಪದದ ಅರ್ಥ ಶಾಂತಿ ಮತ್ತು ಸುರಕ್ಷೆ ಎಂದಾಗಿದೆ. ಯಾವನಾದರೊಬ್ಬ ಮುಸ್ಲಿಮನು ಅನ್ಯರ ಹಕ್ಕುಗಳನ್ನು ಈಡೇರಿಸುವುದಿಲ್ಲವಾದರೆ ಅದು ಅವನ ವೈಯಕ್ತಿಕ ನ್ಯೂನತೆಯಾಗಿದೆ. ಅದು ಇಸ್ಲಾಮಿನ ಅಥವಾ ಅದರ ತತ್ವಗಳ ನ್ಯೂನತೆಯಲ್ಲ. ಅಂತಹ ಜನರು ತಮ್ಮ ಧರ್ಮದ ತತ್ವಗಳನ್ನು ಉಲ್ಲಂಘಿಸುವವರಾಗಿದ್ದಾರೆ.

ಇಸ್ಲಾಮಿನ ಬಗ್ಗೆ ನೀವು ಕೇಳಲು ಇಚ್ಛಿಸಿರಬಹುದಾದ ಪ್ರಶ್ನೆಗಳಿಗೆ ಉತ್ತರ ಲಭಿಸಿರಬಹುದೆಂದು ನಾನು ಭಾವಿಸುತ್ತೇನೆ. ನಿಮಗೆ ಹೆಚ್ಚಿನ ಮಾಹಿತಿ ಆವಶ್ಯಕವಾಗಿದ್ದರೆ ನೀವು ಇಲ್ಲಿರುವ ನಮ್ಮ ಧರ್ಮ ಪ್ರಚಾರಕರೊಂದಿಗೆ ಮತ್ತು ವಿದ್ವಾಂಸರೊಂದಿಗೆ ಅನಂತರ ವಿಚಾರಿಸಬಹುದು.

ಕೊನೆಯದಾಗಿ ನಾನು ಪ್ರಾರ್ಥಿಸುತ್ತೇನೆ: ವಿಶ್ವದಾದ್ಯಂತ ಇರುವ ಜನರು ತಮ್ಮ ಸೃಷ್ಟಿಕರ್ತನನ್ನು ಗುರುತಿಸುವವರಾಗಲಿ ಮತ್ತು ವಿವಿಧ ಧರ್ಮಗಳಿಗೆ ಸೇರಿದ ಎಲ್ಲ ಜನರು ಶಾಂತಿಯಿಂದಲೂ ಕಾರುಣ್ಯಭಾವನೆ ಹೊಂದಿಯೂ ಪರಸ್ಪರ ಗೌರವಿಸುವವರಾಗಿಯೂ ಜೀವಿಸುವವರಾಗಲಿ – ಆಮೀನ್.

ಅಂತಿಮವಾಗಿ, ಇಲ್ಲಿಗೆ ಆಗಮಿಸಿದ ನಿಮಗೆಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ. ನಿಮಗೆ ಬಹಳ ಧನ್ಯವಾಗಳು. ♦

**LOVE FOR HONESTY AND HATRED FOR DISHONESTY**

**ಪ್ರಾಮಾಣಿಕತೆಯೊಂದಿಗೆ ಪ್ರೀತಿ ಮತ್ತು ಅಪ್ರಾಮಾಣಿಕತೆಯೊಂದಿಗೆ ದ್ವೇಷ**

# ನೀನು ಮಾಡು – ಮಾಡಬೇಡ

♦ಹಝ್ರತ್ ಡಾ॥ ಮೀರ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್(ರ)

## 7 – ಧರ್ಮಕ್ಕೆ ಸಂಬಂಧಿಸಿದ ವಿಷಯಗಳು

140. ಅಲ್ಲಾಹನು ರಹ್ಮಾನ್ ಆಗಿರುವನೆಂದು ನೀನು ನಂಬು. ಎಂದರೆ ನಮ್ಮ ಯಾವುದೇ ಕರ್ಮವಿಲ್ಲದೆಯೂ ದಯೆದೋರುವವನು.

141. ಅಲ್ಲಾಹನು ರಹೀಮ್ ಎಂದು ನೀನು ನಂಬು. ಎಂದರೆ ಮಾಡಿದ ಕೆಲಸಕ್ಕೆ ಬಹಳ ಪ್ರತಿಫಲ ನೀಡುವವನು.

142. ಅಲ್ಲಾಹನು ರಬ್ಬುಲ್ ಆಲಮೀನ್ ಎಂದು ನೀನು ನಂಬು. ಎಂದರೆ ಸಕಲ ಲೋಕಗಳ ಪಾಲನೆ ಪೋಷಣೆ ಮಾಡುವವನು.

143. ಅಲ್ಲಾಹನು ಮಾಲಿಕಿ ಯೌಮಿದ್ದೀನ್ ಎಂದು ನೀನು ನಂಬು. ಎಂದರೆ ಅವನು ಶಿಕ್ಷೆ ರಕ್ಷೆ ನೀಡುವ ದಿನದ ಒಡೆಯ.

144. ಅಲ್ಲಾಹನು ಅಲ್ ಮಲಿಕ್ ಆಗಿದ್ದಾನೆಂದು ನೀನು ನಂಬು. ಎಂದರೆ ಎಲ್ಲರ ದೊರೆ ಎಂದು ಅರ್ಥ.

145. ಅಲ್ಲಾಹನು ಅಲ್ ಖುದ್ದೂಸ್ ಎಂದು ನೀನು ನಂಬು. ಎಂದರೆ ಅತ್ಯಂತ ಪರಿಶುದ್ಧನಾಗಿರುವವನು.

146. ಅಲ್ಲಾಹನು ಅಸ್ಸಲಾಮ್ ಆಗಿರುವನೆಂದು ನೀನು ನಂಬು. ಎಂದರೆ ರಕ್ಷಣೆ ನೀಡುವವನು.

147. ಅಲ್ಲಾಹನು ಅಲ್ ಮೂಮಿನ್ ಎಂದು ನೀನು ನಂಬು. ಎಂದರೆ ಎಲ್ಲ ರೀತಿಯ ನೆಮ್ಮದಿ ನೀಡುವವನು.

148. ಅಲ್ಲಾಹನು ಅಲ್ ಮುಹೈಮೀನ್ ಎಂದು ನೀನು ನಂಬು. ಎಂದರೆ ಆಶ್ರಯ ನೀಡುವವನು.

149. ಅಲ್ಲಾಹನು ಅಲ್ ಅಝೀಝ್ ಎಂದು ನೀನು ನಂಬು. ಎಂದರೆ ಎಲ್ಲರ ಮೇಲೆ ಜಯಶಾಲಿ.

150. ಅಲ್ಲಾಹನು ಅಲ್ ಜಬ್ಬಾರ್ ಎಂದು ನೀನು ನಂಬು. ಎಂದರೆ ಒಡೆದು ಹೋದುದನ್ನು ಸರಿಪಡಿಸುವವನು.

151. ಅಲ್ಲಾಹನು ಅಲ್ ಮುತಕಬ್ಬಿರ್ ಎಂದು ನೀನು ನಂಬು. ಎಂದರೆ ಎಲ್ಲ ರೀತಿಯ ಹಿರಿಮೆಯ ಮತ್ತು ಉನ್ನತಿಯ ಒಡೆಯ.

152. ಅಲ್ಲಾಹನು ಅಲ್ ಖಾಲಿಖ್ ಎಂದು ನೀನು ನಂಬು. ಎಂದರೆ ಇಲ್ಲದುದನ್ನು ಅಸ್ತಿತ್ವಕ್ಕೆ ತರುವವ – ಸೃಷ್ಟಿಕರ್ತ.

153. ಅಲ್ಲಾಹನು ಅಲ್‌ಬಾರೀ ಆಗಿದ್ದಾನೆಂದು ನೀನು ನಂಬು. ಎಂದರೆ ನಿರ್ಮಾಪಕ.

154. ಅಲ್ಲಾಹನು ಮುಸವ್ವಿರ್ ಎಂದು ನೀನು ನಂಬು. ಎಂದರೆ ಎಲ್ಲ ರೀತಿಯ ರೂಪ ನೀಡುವವನು.

155. ಅಲ್ಲಾಹನು ಗಫ್ಫಾರ್ ಎಂದು ನೀನು ನಂಬು. ಎಂದರೆ ಬಹಳ ಕ್ಷಮಿಸುವವನು.

156. ಅಲ್ಲಾಹನು ಖಹ್ಹಾರ್ ಎಂದು ನೀನು ನಂಬು. ಎಂದರೆ ಗಂಭೀರ ಪ್ರಕೃತಿಯವನು.

157. ಅಲ್ಲಾಹನು ವಹ್ಹಾಬ್ ಎಂದು ನೀನು ನಂಬು. ಎಂದರೆ ಬಹಳ ಅನುಗ್ರಹ ನೀಡುವವನು.

158. ಅಲ್ಲಾಹನು ರಝ್ಝಾಖ್ ಎಂದು ನೀನು ನಂಬು. ಎಂದರೆ ಅಪರಿಮಿತ ಆಹಾರ ನೀಡುವವನು.

159. ಅಲ್ಲಾಹನು ಫತ್ತಾಹ್ ಎಂದು ನೀನು ನಂಬು. ಎಂದರೆ ಬಹಳ ವಿಶಾಲವಾಗಿ ತೆರೆದುಕೊಡುವವನು.

160. ಅಲ್ಲಾಹನು ಅಲೀಮ್ ಎಂದು ನೀನು ನಂಬು. ಎಂದರೆ ಬಹಳ ಜ್ಞಾನವುಳ್ಳವನು.

161. ಅಲ್ಲಾಹನು ಖಾಬಿಝ್ ಎಂದು ನೀನು ನಂಬು. ಎಂದರೆ ಬಂಧಿಸುವವನು.

162. ಅಲ್ಲಾಹನು ಬಾಸಿತ್ ಎಂದು ನೀನು ನಂಬು. ಎಂದರೆ ಎಂದರೆ ತೆರೆಯುವವನು.

163. ಅಲ್ಲಾಹನು ಖಾಫಿಝ್ ಎಂದು ನೀನು ನಂಬು. ಎಂದರೆ ತಗ್ಗಿಸುವವನು.

164. ಅಲ್ಲಾಹನು ರಾಫಿಅ್ ಎಂದು ನೀನು ನಂಬು. ಎಂದರೆ ಉನ್ನತಿಗೇರಿಸುವವನು.

165. ಅಲ್ಲಾಹನು ಮುಇಝ್ಝ್ ಎಂದು ನೀನು ನಂಬು. ಎಂದರೆ ಅವನು ಬಯಸುವವರಿಗೆ ಗೌರವ ನೀಡುವವನು.

166. ಅಲ್ಲಾಹನು ಮುಝಿಲ್ಲ್ ಎಂದು ನೀನು ನಂಬು. ಎಂದರೆ ಅವನು ಇಚ್ಛಿಸುವವನನ್ನು ಹೀನೈಸುತ್ತಾನೆ.

167. ಅಲ್ಲಾಹನು ಸಮೀಅ್ ಎಂದು ನೀನು ನಂಬು. ಎಂದರೆ ಎಲ್ಲ ಧ್ವನಿಗಳನ್ನು ಆಲಿಸುವವನು.

168. ಅಲ್ಲಾಹನು ಬಸೀರ್ ಎಂದು ನೀನು ನಂಬು. ಎಂದರೆ ಎಲ್ಲವನ್ನೂ ನೋಡುವವನು.

169. ಅಲ್ಲಾಹನು ಹಕಮ್ ಎಂದು ನೀನು ನಂಬು. ಎಂದರೆ ತೀರ್ಪು ನೀಡುವವನು.

170. ಅಲ್ಲಾಹನು ಅಲ್ ಅದ್‌ಲ್ ಎಂದು ನೀನು ನಂಬು. ಎಂದರೆ ನ್ಯಾಯ ಪಾಲಿಸುವವನು.

171. ಅಲ್ಲಾಹನು ಲತೀಫ್ ಎಂದು ನೀನು ನಂಬು. ಎಂದರೆ ಸಹಾನುಭೂತಿಯುಳ್ಳವನು ಮತ್ತು ಸೂಕ್ಷ್ಮವಾಗಿ ನೋಡುವವನು.

172. ಅಲ್ಲಾಹನು ಖಬೀರ್ ಎಂದು ನೀನು ನಂಬು. ಎಂದರೆ ಎಲ್ಲ ಸಮಾಚಾರ ತಿಳಿದವನು.

173. ಅಲ್ಲಾಹನು ಹಲೀಮ್ ಎಂದು ನೀನು ನಂಬು. ಎಂದರೆ ಸಹಿಸುವವನು.

174. ಅಲ್ಲಾಹನು ಅಝೀಮ್ ಎಂದು ನೀನು ನಂಬು. ಎಂದರೆ ಬಹಳ ವೈಭವಶಾಲಿ.

175. ಅಲ್ಲಾಹನು ಗಫೂರ್ ಎಂದು ನೀನು ನಂಬು. ಎಂದರೆ ಅತ್ಯಂತ ಕ್ಷಮಿಸುವವನು.

176. ಅಲ್ಲಾಹನು ಶಕೂರ್ ಎಂದು ನೀನು ನಂಬು. ಎಂದರೆ ಅತ್ಯಂತ ಮೆಚ್ಚುಗೆ ನೀಡುವವನು.

177. ಅಲ್ಲಾಹನು ಅಲೀ ಎಂದು ನೀನು ನಂಬು. ಎಂದರೆ ಉನ್ನತ ಅಂತಸ್ತು ಉಳ್ಳವನು.

178. ಅಲ್ಲಾಹನು ಕಬೀರ್ ಎಂದು ನೀನು ನಂಬು. ಎಂದರೆ ಬಹಳ ದೊಡ್ಡವನು.

179. ಅಲ್ಲಾಹನು ಹಫೀಝ್ ಎಂದು ನೀನು ನಂಬು. ಎಂದರೆ ರಕ್ಷಿಸುವವನು.

180. ಅಲ್ಲಾಹನು ಮುಖೀತ್ ಎಂದು ನೀನು ನಂಬು. ಎಂದರೆ ಜೀವನಾಧಾರ ನೀಡುವವನು.

181. ಅಲ್ಲಾಹನು ಹಸೀಬ್ ಎಂದು ನೀನು ನಂಬು. ಎಂದರೆ ಲೆಕ್ಕ ತೆಗೆದುಕೊಳ್ಳುವವನು.

182. ಅಲ್ಲಾಹನು ಜಲೀಲ್ ಎಂದು ನೀನು ನಂಬು. ಎಂದರೆ ಹಿರಿಮೆವುಳ್ಳವನು.

183. ಅಲ್ಲಾಹನು ಕರೀಮ್ ಎಂದು ನೀನು ನಂಬು. ಎಂದರೆ ಎಂದರೆ ಗೌರವಾನ್ವಿತನು.

184. ಅಲ್ಲಾಹನು ರಖೀಬ್ ಎಂದು ನೀನು ನಂಬು. ಎಂದರೆ ಮೇಲ್ವಿಚಾರಕನು.

185. ಅಲ್ಲಾಹನು ಮುಜೀಬ್ ಎಂದು ನೀನು ನಂಬು. ಎಂದರೆ ಪ್ರಾರ್ಥನೆ ಸ್ವೀಕರಿಸುವವನು.

186. ಅಲ್ಲಾಹನು ವಾಸಿಅ್ ಎಂದು ನೀನು ನಂಬು. ಎಂದರೆ ವಿಶಾಲತೆ ನೀಡುವವನು.

187. ಅಲ್ಲಾಹನು ಹಕೀಮ್ ಎಂದು ನೀನು ನಂಬು. ಎಂದರೆ ಜಾಣ್ಮೆಯುಳ್ಳವನು.

188. ಅಲ್ಲಾಹನು ವದೂದ್ ಎಂದು ನೀನು ನಂಬು. ಎಂದರೆ ಪ್ರೀತಿಸುವವನು.

189. ಅಲ್ಲಾಹನು ಮಜೀದ್ ಎಂದು ನೀನು ನಂಬು. ಎಂದರೆ ಮಹತ್ವಶಾಲಿ.

190. ಅಲ್ಲಾಹನು ಬಾಇಸ್ ಎಂದು ನೀನು ನಂಬು. ಎಂದರೆ ಮರಣದ ನಂತರ ಎದ್ದೇಳಿಸುವವನು.

191. ಅಲ್ಲಾಹನು ಶಹೀದ್ ಎಂದು ನೀನು ನಂಬು. ಎಂದರೆ ಎಲ್ಲ ಕಡೆ ಇದ್ದು ನೋಡುವವನು.

192. ಅಲ್ಲಾಹನು ಹಖ್ ಎಂದು ನೀನು ನಂಬು. ಎಂದರೆ ಸತ್ಯವಂತ

193. ಅಲ್ಲಾಹನು ವಕೀಲ್ ಎಂದು ನೀನು ನಂಬು. ಎಂದರೆ ಕಾರ್ಯನಿರ್ವಾಹಕ.

194. ಅಲ್ಲಾಹನು ಖವೀ ಎಂದು ನೀನು ನಂಬು. ಎಂದರೆ ಬಲಿಷ್ಠ.

195. ಅಲ್ಲಾಹನು ಮತೀನ್ ಎಂದು ನೀನು ನಂಬು. ಎಂದರೆ ಶಕ್ತಿಶಾಲಿ.

196. ಅಲ್ಲಾಹನು ವಲೀ ಎಂದು ನೀನು ನಂಬು. ಎಂದರೆ ಬೆಂಬಲ ನೀಡುವವ, ಸಹಾಯಕ.

197. ಅಲ್ಲಾಹನು ಹಮೀದ್ ಎಂದು ನೀನು ನಂಬು. ಎಂದರೆ ಎಲ್ಲ ಒಳಿತುಗಳುಳ್ಳವನು.

198. ಅಲ್ಲಾಹನು ಮುಹ್‌ಸೀ ಎಂದು ನೀನು ನಂಬು. ಎಂದರೆ ಎಲ್ಲವನ್ನು ಸುತ್ತುವರಿಯುವವನು.

199. ಅಲ್ಲಾಹನು ಬದೀಅ್ ಎಂದು ನೀನು ನಂಬು. ಎಂದರೆ ಪ್ರಥಮ ಬಾರಿ ಸೃಷ್ಟಿಸಿದವನು.

200. ಅಲ್ಲಾಹನು ಮುಈದ್ ಎಂದು ನೀನು ನಂಬು. ಎಂದರೆ ಸೃಷ್ಟಿಯನ್ನು ಪುನರಾವರ್ತಿಸುವವನು.

201. ಅಲ್ಲಾಹನು ಮುಹ್‌ಯೀ ಎಂದು ನೀನು ನಂಬು. ಎಂದರೆ ಜೀವ ನೀಡುವವನು.

202. ಅಲ್ಲಾಹನು ಮುಮೀತ್ ಎಂದು ನೀನು ನಂಬು. ಎಂದರೆ ಮೃತಪಡಿಸುವವನು.

203. ಅಲ್ಲಾಹನು ಹಯ್ಯ್ ಎಂದು ನೀನು ನಂಬು. ಎಂದರೆ ಜೀವಂತನು.

204. ಅಲ್ಲಾಹನು ಖಯ್ಯೂಮ್ ಎಂದು ನೀನು ನಂಬು. ಎಂದರೆ ನೆಲೆ ನಿಲ್ಲಿಸುವವನು.

205. ಅಲ್ಲಾಹನು ವಾಜಿದ್ ಎಂದು ನೀನು ನಂಬು. ಎಂದರೆ ಪ್ರಭಾವ ಬೀರುವವನು.

206. ಅಲ್ಲಾಹನು ಮಾಜಿದ್ ಎಂದು ನೀನು ನಂಬು. ಎಂದರೆ ವೈಭವಶಾಲಿ.

207. ಅಲ್ಲಾಹನು ವಾಹಿದ್ ಎಂದು ನೀನು ನಂಬು. ಎಂದರೆ ಒಬ್ಬನು.

208. ಅಲ್ಲಾಹನು ಅಹದ್ ಎಂದು ನೀನು ನಂಬು. ಎಂದರೆ ಎಂದರೆ ಏಕನು.

209. ಅಲ್ಲಾಹನು ಸಮದ್ ಎಂದು ನೀನು ನಂಬು. ಎಂದರೆ ಸರ್ವರಿಗೂ ಆಶ್ರಯದಾತನು.

210. ಅಲ್ಲಾಹನು ಖಾದಿರ್ ಎಂದು ನೀನು ನಂಬು. ಎಂದರೆ ಸರ್ವ ಸಾಮರ್ಥ್ಯವುಳ್ಳವನು.

211. ಅಲ್ಲಾಹನು ಮುಖ್ತದಿರ್ ಎಂದು ನೀನು ನಂಬು. ಎಂದರೆ ಎಲ್ಲ ಅಧಿಕಾರವುಳ್ಳವನು.

212. ಅಲ್ಲಾಹನು ಮುಖದ್ದಿಮ್ ಎಂದು ನೀನು ನಂಬು. ಎಂದರೆ ಮುಂದೆ ಸಾಗಿಸುವವನು.

213. ಅಲ್ಲಾಹನು ಮುಅಖ್ಖಿರ್ ಎಂದು ನೀನು ನಂಬು. ಎಂದರೆ ಹಿಂದೆ ತಳ್ಳುವವನು.

214. ಅಲ್ಲಾಹನು ಅವ್ವಲ್ ಎಂದು ನೀನು ನಂಬು. ಎಂದರೆ ಪ್ರಥಮನು.

215. ಅಲ್ಲಾಹನು ಆಖಿರ್ ಎಂದು ನೀನು ನಂಬು. ಎಂದರೆ ಎಲ್ಲರ ನಂತರ ಸಹ ಇರುವವನು.

216. ಅಲ್ಲಾಹನು ಝಾಹಿರ್ ಎಂದು ನೀನು ನಂಬು. ಎಂದರೆ ಎಲ್ಲರಿಗಿಂತಲೂ ಹೆಚ್ಚು ಪ್ರಕಟಗೊಳ್ಳುವವನು.

217. ಅಲ್ಲಾಹನು ಬಾತಿನ್ ಎಂದು ನೀನು ನಂಬು. ಎಂದರೆ ಎಲ್ಲರಿಗಿಂತಲೂ ರಹಸ್ಯವಾಗಿರುವವನು.

218. ಅಲ್ಲಾಹನು ವಾಲಿ ಎಂದು ನೀನು ನಂಬು. ಎಂದರೆ ಮಾಲಿಕ.

219. ಅಲ್ಲಾಹನು ಮುತಆಲಿ ಎಂದು ನೀನು ನಂಬು. ಎಂದರೆ ಪರಿಶುದ್ಧ ಗುಣವುಳ್ಳವನು.

220. ಅಲ್ಲಾಹನು ಬರ್ರ್ ಎಂದು ನೀನು ನಂಬು. ಎಂದರೆ ಉಪಕಾರ ಮಾಡುವವನು.

221. ಅಲ್ಲಾಹನು ತವ್ವಾಬ್ ಎಂದು ನೀನು ನಂಬು. ಎಂದರೆ ಪಶ್ಚಾತ್ತಾಪ ಸ್ವೀಕರಿಸುವವನು.

222. ಅಲ್ಲಾಹನು ಮುನ್‌ತಖಿಮ್ ಎಂದು ನೀನು ನಂಬು. ಎಂದರೆ ಪ್ರತೀಕಾರ ಮಾಡುವವನು.

223. ಅಲ್ಲಾಹನು ಮುನ್‌ಇಮ್ ಎಂದು ನೀನು ನಂಬು. ಎಂದರೆ ಅನುಗ್ರಹ ನೀಡುವವನು.

224. ಅಲ್ಲಾಹನು ಅಫುವ್ವ್ ಎಂದು ನೀನು ನಂಬು. ಎಂದರೆ ಕ್ಷಮಿಸುವವನು.

225. ಅಲ್ಲಾಹನು ರವೂಫ್ ಎಂದು ನೀನು ನಂಬು. ಎಂದರೆ ಮೃದುವಾಗಿ ವರ್ತಿಸುವವನು.

226. ಅಲ್ಲಾಹನು ಮಾಲಿಕುಲ್ ಮುಲ್ಕ್ ಎಂದು ನೀನು ನಂಬು. ಎಂದರೆ ಎಂದರೆ ಸರಕಾರಗಳ ಒಡೆಯ.

227. ಅಲ್ಲಾಹನು ಝುಲ್‌ಜಲಾಲ್ ವಲ್ ಇಕ್ರಾಮ್ ಎಂದು ನೀನು ನಂಬು. ಎಂದರೆ ಬಹಳ ವೈಭವಶಾಲಿ ಮತ್ತು ಪ್ರತಾಪಶಾಲಿ.

228. ಅಲ್ಲಾಹನು ಮುಖ್‌ಸಿತ್ ಎಂದು ನೀನು ನಂಬು. ಎಂದರೆ ಸರಿಯಾದ ತೀರ್ಪು ನೀಡುವವನು.

229. ಅಲ್ಲಾಹನು ಜಾಮಿಅ್ ಎಂದು ನೀನು ನಂಬು. ಎಂದರೆ ಎಂದರೆ ಜಮಾಯಿಸುವವನು.

230. ಅಲ್ಲಾಹನು ಘನೀ ಎಂದು ನೀನು ನಂಬು. ಎಂದರೆ ಯಾವ ಆವಶ್ಯಕತೆಯೂ ಇಲ್ಲದವನು.

231. ಅಲ್ಲಾಹನು ಮುಗ್‌ನೀ ಎಂದು ನೀನು ನಂಬು. ಎಂದರೆ ನಿರ್ಲಕ್ಷಿಸುವವನು.

232. ಅಲ್ಲಾಹನು ಮಾನಿಅ್ ಎಂದು ನೀನು ನಂಬು. ಎಂದರೆ ತಡೆಯುವವನು.

233. ಅಲ್ಲಾಹನು ಅಝ್ಝಾರ್ರ್ ಎಂದು ನೀನು ನಂಬು. ಎಂದರೆ ಹಾನಿ ಉಂಟುಮಾಡುವವನು.

234. ಅಲ್ಲಾಹನು ನಾಫಿಅ್ ಎಂದು ನೀನು ನಂಬು. ಎಂದರೆ ಲಾಭ ನೀಡುವವನು.

235. ಅಲ್ಲಾಹನು ನೂರ್ ಎಂದು ನೀನು ನಂಬು. ಎಂದರೆ ಪ್ರಕಾಶ.

236. ಅಲ್ಲಾಹನು ಹಾದೀ ಎಂದು ನೀನು ನಂಬು. ಎಂದರೆ ಮಾರ್ಗದರ್ಶಕನು.

237. ಅಲ್ಲಾಹನು ಬದೀಅ್ ಎಂದು ನೀನು ನಂಬು. ಎಂದರೆ ಹೊಸ ರೀತಿ ಸೃಷ್ಟಿಸುವವನು.

238. ಅಲ್ಲಾಹನು ಬಾಖೀ ಎಂದು ನೀನು ನಂಬು. ಎಂದರೆ ಬಾಕಿಯಾಗಿ ಉಳಿಯುವವನು.

239. ಅಲ್ಲಾಹನು ವಾರಿಸ್ ಎಂದು ನೀನು ನಂಬು. ಎಂದರೆ ಎಲ್ಲರ ವಾರಸುದಾರ.

240. ಅಲ್ಲಾಹನು ರಶೀದ್ ಎಂದು ನೀನು ನಂಬು. ಎಂದರೆ ಒಳಿತನ್ನು ಕಲಿಸುವವನು.

241. ಅಲ್ಲಾಹನು ಸಬೂರ್ ಎಂದು ನೀನು ನಂಬು. ಎಂದರೆ ಸಹನೆದೋರುವವನು.

242. ಅಲ್ಲಾಹನು ಮುತಕಲ್ಲಿಮ್ ಎಂದು ನೀನು ನಂಬು. ಎಂದರೆ ಸಂದೇಶವಾಣಿ ಅವತೀರ್ಣಗೊಳಿಸುವವನು ಮತ್ತು ಸಂಭಾಷಣೆ ನಡೆಸುವವನು.

* * * * *

**LOVE FOR ALL - HATRED FOR NONE**

**ಎಲ್ಲರೊಂದಿಗೆ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ**

## ಇಸ್ರೇಲ್ – ಪ್ಯಾಲೆಸ್ತೀನ್ ಸಂಘರ್ಷದ ಕುರಿತು ಅಹ್ಮದಿಯಾ ಮುಸ್ಲಿಂ ಜಮಾಅತಿನ ಜಾಗತಿಕ ನೇತಾರರ ಕರೆ.

2023 ಅಕ್ಟೋಬರ್ 13ರ ಜುಮಾ ಖುತ್ಬದಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅಯ್ಯದಹುಲ್ಲಾಹ್) ಹೀಗೆ ಹೇಳಿದರು: ಈಗ ನಾನು ಲೋಕದ ಇಂದಿನ ಪರಿಸ್ಥಿತಿಗಳಿಗೆ ಸಂಬಂಧಿಸಿದಂತೆ ದುಆ (ಪ್ರಾರ್ಥನೆ)ಗಾಗಿ ಮನವಿ ಮಾಡಲು ಬಯಸುತ್ತೇನೆ. ಕಳೆದ ಕೆಲವು ದಿನಗಳಿಂದ, ಹಮಾಸ್ ಮತ್ತು ಇಸ್ರೇಲ್ ನಡುವಿನ ಯುದ್ಧವು ನಡೆಯುತ್ತಿದೆ, ಇದರಿಂದಾಗಿ ಮಹಿಳೆಯರು, ಮಕ್ಕಳು ಮತ್ತು ವೃದ್ಧರು ಸೇರಿದಂತೆ ಎರಡೂ ಕಡೆಯ ನಾಗರಿಕರು ಕೊಲ್ಲಲ್ಪಡುತ್ತಿದ್ದಾರೆ ಮತ್ತು ಕೊಲ್ಲಲ್ಪಟ್ಟಿದ್ದಾರೆ.

ಯುದ್ಧದ ಸಮಯದಲ್ಲಿಯೂ ಮಹಿಳೆಯರು, ಮಕ್ಕಳು ಅಥವಾ ಯಾವುದೇ ರೀತಿಯಲ್ಲಿ ಯುದ್ಧದಲ್ಲಿ ಭಾಗವಹಿಸದ ಯಾರನ್ನೂ ಕೊಲ್ಲಲು ಇಸ್ಲಾಂ ಅನುಮತಿಸುವುದಿಲ್ಲ. ಈ ಸಂಗತಿಯನ್ನು ಹಝ್ರತ್ ಪೈಗಂಬರ್(ಸ) ಬಹಳ ಒತ್ತುನೀಡಿ ನಿರ್ದೇಶಿಸಿದ್ದಾರೆ.

ಇಸ್ರೇಲಿ ಸೇನೆಯು ಎಷ್ಟೆಲ್ಲ ಮುಗ್ಧ ಪ್ಯಾಲೆಸ್ಟೀನಿಯರನ್ನು ಕೊಂದಿದೆ ಎಂಬ ವಾಸ್ತವವನ್ನು ಲೆಕ್ಕಿಸದೇ ಈ ಯುದ್ಧವನ್ನು ಹಮಾಸ್ ಸಂಘ ಪ್ರಾರಂಭಿಸಿತು ಮತ್ತು ಇಸ್ರೇಲಿ ನಾಗರಿಕರನ್ನು ನಿರ್ದಾಕ್ಷಿಣ್ಯವಾಗಿ ಹಮಾಸ್ ಕೊಂದಿತು ಎಂದು ಜಗತ್ತು ಹೇಳುತ್ತಿದೆ ಮತ್ತು ಕೆಲವು ಪುರಾವೆಗಳು ಅದನ್ನೇ ತಿಳಿಸುತ್ತಿದೆ. ಹೇಗಿದ್ದರೂ ಮುಸ್ಲಿಮರು ಯಾವಾಗಲೂ ಇಸ್ಲಾಮಿನ ಬೋಧನೆಗಳ ಪ್ರಕಾರ ಕಾರ್ಯನಿರ್ವಹಿಸಬೇಕು. ಇಸ್ರೇಲ್ ಸೈನ್ಯವು ಮಾಡಿದ್ದು ಅದರ ರೀತಿಯಾಗಿದೆ. ಈ ಸಮಸ್ಯೆಯನ್ನು ಬಗೆಹರಿಸುವ ರೀತಿಯೇ ಬೇರೆಯಿತ್ತು. ಯುದ್ಧ ಮಾಡುವುದು ಸರಿಯೆಂದಾದರೆ, ಅದು ಸೈನ್ಯಗಳ ನಡುವೆ ಆಗಬಹುದು. ಮಹಿಳೆಯರು, ಮಕ್ಕಳು ಮತ್ತು ಮುಗ್ಧರೊಂದಿಗೆ ಅಲ್ಲ. ಈ ರೀತಿಯಾಗಿ, ಹಮಾಸ್ ತಪ್ಪಾದ ಹೆಜ್ಜೆಯನ್ನು ಹಾಕಿತು. ಇದರಿಂದ ಲಾಭಕ್ಕಿಂತ ಹೆಚ್ಚು ನಷ್ಟ ಉಂಟಾಗಿದೆ. ಹಮಾಸಿನ ದಾಳಿಗೆ ಪ್ರತ್ಯುತ್ತರವಾಗಿ ನೀಡಲಾಗುವ ಶಿಕ್ಷೆ ಅಥವಾ ಯುದ್ಧ ಹಮಾಸಿನ ಮೇಲೆ ಮಾತ್ರವಾಗಿರಬೇಕಿತ್ತು. ಹಾಗಾಗಿದ್ದರೆ ಅದು ನಿಜವಾದ ಶೌರ್ಯ ಮತ್ತು ಪರಾಕ್ರಮ ಹಾಗೂ ಪ್ರತಿಕ್ರಿಯೆ ಆಗಿರುತ್ತಿತ್ತು. ಆದರೆ ಈಗ ಇಸ್ರೇಲ್ ಸರಕಾರ ಕೈಗೊಳ್ಳುತ್ತಿರುವ ಕ್ರಮಗಳು ಕೂಡ ತುಂಬಾ ಅಪಾಯಕಾರಿಯಾಗಿವೆ. ಈ ಪರಿಸ್ಥಿತಿಗೆ ಅಂತ್ಯವಿಲ್ಲ ಮತ್ತು ಇದು ನಿಲ್ಲದು ಎಂದು ತೋರುತ್ತಿದೆ. ಎಷ್ಟೆಲ್ಲ ಮುಗ್ಧ ಜನರು, ಮಹಿಳೆಯರು ಮತ್ತು ಮಕ್ಕಳು ಜೀವ ಕಳೆದುಕೊಳ್ಳುವರು ಎಂದು ಊಹಿಸಲು ಕೂಡ ಸಾಧ್ಯವಿಲ್ಲ. ಗಾಝಾವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವುದಾಗಿ ಇಸ್ರೇಲಿ ಸರ್ಕಾರವು ಹೇಳಿಕೊಂಡಿತ್ತು. ಅದಕ್ಕಾಗಿ ಅವರು ಅನೇಕ ಬಾಂಬ್ ದಾಳಿಗಳನ್ನು ನಡೆಸಿದರು ಮತ್ತು ನಗರವನ್ನು ಬೂದಿ ಮಾಡಿರುವರು. ಒಂದು ಮಿಲಿಯನ್‌ಗಿಂತಲೂ ಹೆಚ್ಚು ಜನರು ಗಾಝಾವನ್ನು ತೊರೆಯಬೇಕೆಂದು ಅವರು ಹೇಳಿರುವರು. ಕೆಲವರು ನಗರವನ್ನು ಬಿಟ್ಟು ಹೋಗಲು ಪ್ರಾರಂಭಿಸಿದ್ದಾರೆ.

ಅದೃಷ್ಟವಶಾತ್ ಯುಎನ್ ಸಂಸ್ಥೆ ಸ್ವಲ್ಪ ಮಟ್ಟಿಗೆ ಮತ್ತು ಬಹಳ ದುರ್ಬಲವಾದ ರೀತಿಯಲ್ಲಿಯಾದರೂ ಸರಿ, ತನ್ನ ಧ್ವನಿಯನ್ನು ಎತ್ತಿದೆ. ಇದು ತಪ್ಪು ಎಂದೂ ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ ಎಂದೂ ಇದರಿಂದ ಅನೇಕ ತೊಂದರೆಗಳು ಉಂಟಾಗುವುದು ಎಂದೂ ಅದು ಹೇಳಿದೆ. ಹಾಗಾಗಿ, ಇಸ್ರೇಲ್ ಈ ಆದೇಶವನ್ನು ಮರುಪರಿಶೀಲಿಸಬೇಕು ಎಂದು ಯುಎನ್ ಹೇಳಿದೆ. ಆದರೆ ಈಗಲೂ ಶಕ್ತವಾದ ರೀತಿಯಲ್ಲಿ ಹೇಳುವ ಬದಲಿಗೆ ಕೇವಲ ವಿನಂತಿಯನ್ನು ಯುಎನ್ ಸಂಸ್ಥೆ ಮಾಡುತ್ತಿದೆ. ಅದೇನೇ ಇರಲಿ, ಇದರಲ್ಲಿ ಯುದ್ಧದಲ್ಲಿ ಪಾಲ್ಗೊಳ್ಳದ ಅಮಾಯಕರ ತಪ್ಪೇನೂ ಇಲ್ಲ. ಇಸ್ರೇಲಿ ಮಹಿಳೆಯರು, ಮಕ್ಕಳು ಮತ್ತು ಸಾಮಾನ್ಯ ನಾಗರಿಕರನ್ನು ಮುಗ್ಧರು ಎಂದು ಜಗತ್ತು ಪರಿಗಣಿಸುವುದಾದರೆ ಪ್ಯಾಲೆಸ್ತೀನಿಯನ್ನರು ಕೂಡ ಅಷ್ಟೇ ಮುಗ್ಧರು. ಇಂತಹ ಹತ್ಯೆಗಳನ್ನು ಮಾಡಬಾರದು ಎಂದು ಆ ಗ್ರಂಥಾನುಸಾರಿಗಳ ಯಹೂದಿ – ಕ್ರೈಸ್ತರ ಅಧ್ಯಾಪನೆಗಳಲ್ಲೂ ಇದೆ. ಮುಸಲ್ಮಾನರದ್ದು ಮಾಡಿದ್ದು ತಪ್ಪು ಎಂದು ಆರೋಪಿಸುವುದಾದರೆ ಇಸ್ರೇಲ್ ಮಾಡಿದ್ದು ಸರಿಯೇ ಎಂದು ಅವರು ಸ್ವತಃ ನೋಡಬೇಕಾಗಿದೆ. ಹೇಗಿದ್ದರೂ ನಾವು ಬಹಳಷ್ಟು ದುಆ ಮಾಡಬೇಕಾಗಿದೆ. ಇತ್ತೀಚಿಗೆ ಪ್ಯಾಲೇಸ್ತೀನಿನ ರಾಯಭಾರಿ ಬಿಬಿಸಿಗೆ ಇಂಟರ್‌ವ್ಯೂ ನೀಡಿದ್ದರು. ಹಮಾಸ್ ಉಗ್ರಗಾಮಿ ಗುಂಪಾಗಿದೆ, ಅದು ಸರ್ಕಾರವಲ್ಲ ಮತ್ತು ಪ್ಯಾಲೆಸ್ತೀನ್ ಸರ್ಕಾರಕ್ಕೆ ಅದರೊಂದಿಗೆ ಯಾವುದೇ ಸಂಬಂಧವಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರವಾಗಿ ಅವರು ಹೇಳಿದರು. ಅದೇ ಸಮಯದಲ್ಲಿ, ಅವರು ಒಂದು ಪ್ರಶ್ನೆಯನ್ನು ಕೂಡ ಎತ್ತಿದರು. ಅವರ ಆ ಮಾತು ಸರಿಯೂ ಆಗಿದೆ. ಅದೇನೆಂದರೆ, ನಿಜವಾದ ನ್ಯಾಯವನ್ನು ಸ್ಥಾಪಿಸಿದರೆ, ಅಂತಹ ಘಟನೆಗಳು ಸಂಭವಿಸುತ್ತಿರಲಿಲ್ಲ; ಪ್ರಮುಖ ಶಕ್ತಿಗಳು ದ್ವಿಮುಖ ಮಾನದಂಡಗಳನ್ನು ಹೊಂದಿಲ್ಲದಿದ್ದರೆ, ಜಗತ್ತಿನಲ್ಲಿ ಇಂತಹ ಅಶಾಂತಿ ಮತ್ತು ಯುದ್ಧ ಎಂದಿಗೂ ಸಂಭವಿಸುತ್ತಿರಲಿಲ್ಲ. ಆದ್ದರಿಂದ, ಈ ದ್ವಿಮುಖ ಮಾನದಂಡಗಳನ್ನು ಕೊನೆಗೊಳಿಸಿದರೆ, ಅಂತಹ ಯುದ್ಧಗಳು ಸ್ವತಃ ಕೊನೆಗೊಳ್ಳುವುವು.

ಈ ಸಂಗತಿಗಳನ್ನೇ ನಾನು ಇಸ್ಲಾಮಿನ ಬೋಧನೆಗಳ ಬೆಳಕಿನಲ್ಲಿ ದೀರ್ಘ ಕಾಲದಿಂದ ಹೇಳುತ್ತಿದ್ದೇನೆ. ಸರಿ ಸರಿ ಎಂದು ಅವರು ನಮ್ಮ ಮುಂದೆ ಹೇಳುತ್ತಾರೆ. ಆದರೆ, ಅದಕ್ಕೆ ತಕ್ಕಂತೆ ವರ್ತಿಸಲು ಸಿದ್ಧರಲ್ಲ. ಈಗ, ಎಲ್ಲ ಪ್ರಮುಖ ಶಕ್ತಿಗಳು ಅಥವಾ ಪಾಶ್ಚಿಮಾತ್ಯ ಶಕ್ತಿಗಳು, ನ್ಯಾಯವನ್ನು ಬದಿಗಿಟ್ಟು ಪ್ಯಾಲೆಸ್ತೀನಿಯರ ಮೇಲೆ ಕ್ರೌರ್ಯವನ್ನು ಮಾಡಲು ಒಟ್ಟಾಗುತ್ತಿವೆ ಮತ್ತು ಎಲ್ಲ ಕಡೆಯಿಂದಲೂ ಸೈನ್ಯವನ್ನು ಕಳುಹಿಸುವ ಚರ್ಚೆ ನಡೆಯುತ್ತಿದೆ. ದೌರ್ಜನ್ಯಕ್ಕೊಳಗಾದವರ ಚಿತ್ರಗಳನ್ನು ಪ್ರದರ್ಶಿಸಿ ಹೀಗೆಲ್ಲ ಅನ್ಯಾಯಗಳು ನಡೆಯುತ್ತಿವೆ ಎಂದು ತೋರಿಸಲಾಗುತ್ತಿದೆ ಮತ್ತು ಮಾಧ್ಯಮಗಳಲ್ಲಿ ಸುಳ್ಳು ವರದಿಗಳು ಪ್ರಸಾರವಾಗುತ್ತಿವೆ. ಇಸ್ರೇಲಿ ಮಹಿಳೆಯರ ಮತ್ತು ಮಕ್ಕಳ ಭಯಾನಕ ಪರಿಸ್ಥಿತಿಗಳ ಬಗ್ಗೆ ಒಂದು ದಿನ ಸುದ್ದಿ ಬರುತ್ತದೆ. ಮರುದಿನ, ಅವರು ಇಸ್ರೇಲಿಗಳಲ್ಲ, ಬದಲಾಗಿ ಪ್ಯಾಲೆಸ್ತೀನಿಯರು ಎಂದು ಗೊತ್ತಾಗುತ್ತದೆ.

ಆದರೆ ಅದಕ್ಕಾಗಿ ಯಾವುದೇ ಕ್ಷಮಾಪಣೆ ಮಾಡುವುದಿಲ್ಲ. ಫ್ಯಾಲೆಸ್ತೀನಿಯರ ಬಗ್ಗೆ ಯಾವುದೇ ಸಹಾನುಭೂತಿಯನ್ನು ವ್ಯಕ್ತಪಡಿಸುವುದಿಲ್ಲ.

ಯುದ್ಧವನ್ನು ಕೊನೆಗೊಳಿಸಲು ಪ್ರಯತ್ನಿಸುವುದಕ್ಕೆ ಬದಲಾಗಿ ಪ್ರಮುಖ ಶಕ್ತಿಗಳು ಯುದ್ಧದ ಕಿಡಿಯನ್ನು ಹೊತ್ತಿಸಲು ತಯಾರಾಗಿ ನಿಂತಿವೆ ಎಂದು ವಿಶ್ಲೇಷಣೆ ನಡೆಸಿದರೆ ತೋರುತ್ತಿದೆ. ಯುದ್ಧವನ್ನು ಕೊನೆಗೊಳಿಸಲು ಅವರು ಬಯಸುವುದಿಲ್ಲ. ಮೊದಲನೆಯ ಮಹಾಯುದ್ಧದ ನಂತರ, ಪ್ರಮುಖ ಶಕ್ತಿಗಳು ಯುದ್ಧಗಳನ್ನು ಅಂತ್ಯಗೊಳಿಸಲು ಲೀಗ್ ಆಫ್ ನೇಷನ್ಸ್ ಸಂಘಟನೆಯನ್ನು ಸ್ಥಾಪಿಸಲಾಯಿತು. ಆದಾಗ್ಯೂ, ನ್ಯಾಯದ ಬೇಡಿಕೆಗಳನ್ನು ಈಡೇರಿಸದ ಕಾರಣದಿಂದ ಅದು ವಿಫಲಗೊಂಡಿತು ಮತ್ತು ಎರಡನೇ ಮಹಾಯುದ್ಧ ನಡೆಯಿತು. ಇದರಿಂದ 7 ಕೋಟಿಗೂ ಹೆಚ್ಚು ಜನರು ಅಸುನೀಗಿದರು ಎಂದು ಹೇಳಲಾಗುತ್ತದೆ. ಈಗ ವಿಶ್ವಸಂಸ್ಥೆಯ ವಿಷಯದಲ್ಲೂ ಅದೇ ಆಗುತ್ತಿದೆ. ಜಗತ್ತಿನಲ್ಲಿ ನ್ಯಾಯವನ್ನು ಸ್ಥಾಪಿಸಲು, ದೌರ್ಜನ್ಯಕ್ಕೊಳಗಾದವರನ್ನು ಬೆಂಬಲಿಸಲು ಮತ್ತು ಯುದ್ಧಗಳನ್ನು ಕೊನೆಗೊಳಿಸಲು ಪ್ರಯತ್ನಿಸಲು ಇದನ್ನು ರಚಿಸಲಾಗಿತ್ತು. ಆದರೆ ಈ ಸಂಗತಿಗಳೊಂದಿಗೆ ಅದಕ್ಕೆ ದೂರದ ಸಂಬಂಧವೂ ಇಲ್ಲದಂತೆ ತೋರುತ್ತಿದೆ. ಪ್ರತಿಯೊಬ್ಬರೂ ತಮ್ಮ ಸ್ವಂತ ಹಿತಾಸಕ್ತಿಗಳ ಬಗ್ಗೆ ಗಮನಹರಿಸುತ್ತಿದ್ದಾರೆ. ಈ ಅನ್ಯಾಯಗಳಿಂದ ಉಂಟಾಗುವ ಯುದ್ಧದ ಹಾನಿಕಾರಕ ಪರಿಣಾಮಗಳನ್ನು ಜನಸಾಮಾನ್ಯರಿಗೆ ಅಂದಾಜು ಮಾಡಲು ಸಾಧ್ಯವಿಲ್ಲ; ಇದರ ಗಂಭೀರ ಪರಿಣಾಮಗಳ ಬಗ್ಗೆ ಪ್ರಮುಖ ಶಕ್ತಿಗಳಿಗೆ ಚೆನ್ನಾಗಿ ಗೊತ್ತಿವೆ. ಆದರೂ, ನ್ಯಾಯ ಸ್ಥಾಪಿಸುವ ಕಡೆಗೆ ಯಾವುದೇ ಗಮನವಿಲ್ಲ ಮತ್ತು ಯಾರೂ ಕೂಡ ಈ ಬಗ್ಗೆ ಗಮನ ಹರಿಸಲು ಸಿದ್ಧರೂ ಅಲ್ಲ.

ಇಂತಹ ಪರಿಸ್ಥಿತಿಗಳಲ್ಲಿ, ಮುಸ್ಲಿಂ ರಾಷ್ಟ್ರಗಳು ಕನಿಷ್ಠ ಪಕ್ಷ ಎಚ್ಚರಗೊಳ್ಳಬೇಕು. ತಮ್ಮಲ್ಲಿರುವ ಭಿನ್ನಾಭಿಪ್ರಾಯಗಳನ್ನು ತೊಲಗಿಸಿ ಏಕತೆಯನ್ನು ಸ್ಥಾಪಿಸಬೇಕು. ಒಂದೇ ಕಲಿಮವನ್ನು ಹೊಂದಿರುವ ಮುಸ್ಲಿಮರು ತಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಒಂದಾಗಲು ಏಕೆ ಸಾಧ್ಯವಿಲ್ಲ? ಆದ್ದರಿಂದ ಇದರ ಬಗ್ಗೆ ಚಿಂತಿಸಿ ಏಕತೆಯನ್ನು ಸ್ಥಾಪಿಸಬೇಕು. ಇದು ಲೋಕದಿಂದ ಅಶಾಂತಿಯನ್ನು ದೂರ ಮಾಡುವ ಮಾರ್ಗವಾಗಬಹುದು. ನ್ಯಾಯದ ಅವಶ್ಯಕತೆಗಳನ್ನು ಪೂರೈಸಲು ಮತ್ತು ಪೀಡಿತರ ಹಕ್ಕುಗಳನ್ನು ಪೂರೈಸಲು ಅವರು ಒಗ್ಗೂಡಬೇಕು ಮತ್ತು ಧ್ವನಿ ಎತ್ತಬೇಕು. ಒಂದಾದರೆ ಮತ್ತು ಒಗ್ಗಟ್ಟಾಗಿ ಇರುವುದಾದರೆ ಅವರ ಧ್ವನಿಯ ಹಿಂದೆ ಶಕ್ತಿಯೂ ಇರುತ್ತದೆ. ಇಲ್ಲದಿದ್ದರೆ ಅಮಾಯಕ ಮುಸಲ್ಮಾನರ ಜೀವಹಾನಿಗೆ ಈ ಮುಸ್ಲಿಂ ಸರಕಾರಗಳೇ ಹೊಣೆಯಾಗಬೇಕಾಗುವುದು.

ಸರ್ವಶಕ್ತನಾದ ಅಲ್ಲಾಹನು ಮುಸ್ಲಿಂ ಸರ್ಕಾರಗಳಿಗೆ ಬುದ್ಧಿ ಮತ್ತು ತಿಳುವಳಿಕೆಯನ್ನು ನೀಡಲಿ. ಒಂದಾಗಿ ಮತ್ತು ನ್ಯಾಯವನ್ನು ಸ್ಥಾಪಿಸುವವರಾಗಲಿ. ಅಲ್ಲಾಹನು ಲೋಕದ ಪ್ರಬಲ ಶಕ್ತಿಗಳಿಗೆ ವಿವೇಕ ಮತ್ತು ತಿಳುವಳಿಕೆಯನ್ನು ದಯಪಾಲಿಸಲಿ. ಜಗತ್ತನ್ನು ವಿನಾಶದತ್ತ ಕೊಂಡೊಯ್ಯುವ ಬದಲು ಜಗತ್ತನ್ನು ವಿನಾಶದಿಂದ ರಕ್ಷಿಸಲು ಪ್ರಯತ್ನಿಸುವವರಾಗಲಿ. ಅವರ ಅಹಂಕಾರವನ್ನು ತೃಪ್ತಿಪಡಿಸುವುದು ಅವರ ಉದ್ದೇಶವಾಗದಿರಲಿ. ವಿನಾಶ ಬಂದರೆ ಈ ಪ್ರಬಲ ರಾಷ್ಟ್ರಗಳು ಕೂಡ ಸುರಕ್ಷಿತವಾಗಿರದು ಎಂದು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು.

ಹೇಗಿದ್ದರೂ ನಮ್ಮ ಬಳಿ ಇರುವುದು ಪ್ರಾರ್ಥನೆಯ ಆಯುಧವಾಗಿದೆ, ಇದನ್ನು ಪ್ರತಿಯೊಬ್ಬ ಅಹ್ಮದಿಯು ಹಿಂದೆಂದಿಗಿಂತಲೂ ಹೆಚ್ಚಾಗಿ ಬಳಸಬೇಕು. ಗಾಝಾದಲ್ಲಿ ಕೆಲವು ಅಹ್ಮದಿ ಮನೆಗಳನ್ನು ಸುತ್ತುವರಿಯಲಾಗಿದೆ. ಸರ್ವಶಕ್ತನಾದ ಅಲ್ಲಾಹನು ಅವರನ್ನು ಕೂಡ ಸುರಕ್ಷಿತವಾಗಿರಿಸಲಿ. ಎಲ್ಲ ಮುಗ್ಧರು ಮತ್ತು ದೌರ್ಜನ್ಯಕ್ಕೆ ಒಳಗಾದವರನ್ನು ಅವರು ಎಲ್ಲೇ ಇದ್ದರೂ ಸುರಕ್ಷಿತವಾಗಿರಿಸಲಿ. ಸರ್ವಶಕ್ತನಾದ ಅಲ್ಲಾಹನು ಹಮಾಸಿಗೂ ತಿಳುವಳಿಕೆಯನ್ನು ನೀಡಲಿ, ತಮ್ಮ ಜನರ ಮೇಲೆಯೇ ದೌರ್ಜನ್ಯ ಉಂಟಾಗಲು ಅವರು ಕಾರಣಕರ್ತರಾಗದಿರಲಿ. ಅವರು ಯಾರ ಮೇಲೂ ಅನ್ಯಾಯವನ್ನು ಮಾಡದಿರಲಿ. ಯುದ್ಧ ಮಾಡಲೇ ಬೇಕಿದ್ದರೆ ಇಸ್ಲಾಮಿನ ಅಧ್ಯಾಪನೆಗಳ ಪ್ರಕಾರ ಯುದ್ಧ ಮಾಡಬೇಕು. ಯಾವುದೇ ಸಮುದಾಯದೊಂದಿಗೆ ಇರುವ ಶತ್ರುತ್ವ ನಮ್ಮನ್ನು ನ್ಯಾಯದಿಂದ ವರ್ತಿಸುವುದರಿಂದ ಹಿಂದೆ ಸರಿಯುವಂತೆ ಮಾಡಬಾರದು. ಇದೇ ಸರ್ವಶಕ್ತನಾದ ಅಲ್ಲಾಹನ ಆಜ್ಞೆಯಾಗಿದೆ.

ಎರಡೂ ಕಡೆಗಳಲ್ಲಿ ನ್ಯಾಯವನ್ನು ಸ್ಥಾಪಿಸಲು ಮತ್ತು ಆ ಮೂಲಕ ಶಾಂತಿಯನ್ನು ಸ್ಥಾಪಿಸಲು ಸರ್ವಶಕ್ತನಾದ ಅಲ್ಲಾಹನು ಪ್ರಮುಖ ರಾಷ್ಟ್ರಗಳಿಗೂ ಸೌಭಾಗ್ಯ ನೀಡಲಿ. ಒಂದು ಕಡೆಗೆ ವಾಲಿಕೊಂಡು ಮತ್ತೊಂದು ಕಡೆಯ ಹಕ್ಕುಗಳನ್ನು ಕಸಿದುಕೊಳ್ಳುವಂತೆಯೂ ಅನ್ಯಾಯ ಮತ್ತು ಕ್ರೌರ್ಯಗಳನ್ನು ಮಾಡುವಂತೆಯೂ ಆಗಬಾರದು. ಲೋಕದಲ್ಲಿ ಶಾಂತಿ ಮತ್ತು ಸಮಾಧಾನ ಕಾಣುವಂತಾಗಲು ಅಲ್ಲಾಹನು ನಮಗೆ ಸೌಭಾಗ್ಯ ನೀಡಲಿ. (ಆಮೀನ್).

## ಹೃದಯವೇ, ನೀನು ಈ ಜನರ ಬಗ್ಗೆ ಕಾಳಜಿವಹಿಸು.

**(2023 ಅಕ್ಟೋಬರ್ 27ರ ಜುಮಾ ಖುತ್‌ಬದಲ್ಲಿ ಅಹ್ಮದಿಯಾ ಮುಸ್ಲಿಂ ಜಮಾಅತಿನ ಜಾಗತಿಕ ನೇತಾರ ಹೀಗೆ ಹೇಳಿದರು:)**

ಹಮಾಸ್ ಮತ್ತು ಇಸ್ರೇಲಿನ ಯುದ್ಧ ಹಾಗೂ ಅದರ ಪರಿಣಾಮವಾಗಿ ಮಹಿಳೆಯರು ಮತ್ತು ಮಕ್ಕಳ ಸಮೇತ ಅಮಾಯಕ ಪೆಲಸ್ತೀನಿಯರ ಮರಣಗಳು ವರ್ಧಿಸುತ್ತಾ ಇವೆ. ಯುದ್ಧದ ಸ್ಥಿತಿಗಳು ಯಾವ ವೇಗದಿಂದ ತೀವ್ರಗೊಳ್ಳುತ್ತಿವೆಯೋ ಮತ್ತು ಇಸ್ರೇಲ್ ಸರ್ಕಾರ ಹಾಗೂ ದೊಡ್ಡ ಶಕ್ತಿಶಾಲಿ ರಾಷ್ಟ್ರಗಳು ಯಾವ ಕಾರ್ಯನೀತಿಯನ್ನು ಪಾಲಿಸುತ್ತಿವೆಯೋ ಅದರಿಂದ ಈಗ ಜಾಗತಿಕ ಯುದ್ಧ ನಡೆಯಬಹುದೆಂದು ತೋರುತ್ತಿದೆ.

ಈ ಯುದ್ಧದ ವಲಯ ವಿಸ್ತಾರವಾಗುತ್ತಿರುವುದಾಗಿ ತೋರುತ್ತಿದೆಯೆಂದೂ ಬೇಗನೇ ಯುದ್ಧವನ್ನು ಕೊನೆಗೊಳಿಸಲು ಕಾರ್ಯನೀತಿಯನ್ನು ಕೈಗೊಳ್ಳದಿದ್ದರೆ ಲೋಕವು ನಾಶವಾಗುವುದು ಎಂದೂ ಕೆಲವು ಇಸ್ಲಾಮಿಕ ದೇಶಗಳ ಅಧ್ಯಕ್ಷರು, ರಷ್ಯಾ, ಚೈನಾ ಮತ್ತು ಕೆಲವು ವಿಶ್ಲೇಷಕರು ಕೂಡ ಈಗಂತು ಬಹಿರಂಗವಾಗಿ ಹೇಳಲು ಮತ್ತು ಬರೆಯಲು ಶುರುಮಾಡಿರುವರು. ಇವೆಲ್ಲವೂ ವಾರ್ತೆಗಳಲ್ಲಿ ಪ್ರಸಾರವಾಗುತ್ತಿವೆ. ಪೂರ್ತಿ ಸ್ಥಿತಿಗತಿಗಳು ನಿಮ್ಮೆಲ್ಲರ ಮುಂದೆ ಇವೆ.

ಆದ್ದರಿಂದ ಅಹ್ಮದಿಯರು ದುಆಗಳ ಕಡೆಗೆ ವಿಶೇಷವಾಗಿ ಗಮನಹರಿಸಬೇಕು. ಆರಾಮದಿಂದ ಇರಬೇಡಿರಿ. ಪ್ರತಿ ನಮಾಝಿನಲ್ಲಿ ಒಂದು ಸಜ್‌ದ ಅಥವಾ ಕನಿಷ್ಠ ಪಕ್ಷ ದಿನದ ಒಂದು ನಮಾಝಿನಲ್ಲಿ ಒಂದು ಸಜ್‌ದ ಖಂಡಿತವಾಗಿಯೂ ಇದಕ್ಕಾಗಿ ಮಾಡಬೇಕು. ಅದರಲ್ಲಿ ದುಆ ಮಾಡಬೇಕು.

ಪಾಶ್ಚಿಮಾತ್ಯದ ಯಾವುದೇ ರಾಷ್ಟ್ರಗಳ ಅಧ್ಯಕ್ಷ ಈ ವಿಷಯದಲ್ಲಿ ನ್ಯಾಯಪಾಲನೆ ಮಾಡುತ್ತಿಲ್ಲ. ಯಾವ ದೇಶದ ಅಧ್ಯಕ್ಷ ಒಳ್ಳೆಯವನು ಅಥವಾ ಯಾವ ದೇಶದ ನೇತಾರ ಕೆಟ್ಟವನು ಎಂಬ ಚರ್ಚೆಯಲ್ಲಿ ಅಹ್ಮದಿಯರು ನಿರತರಾಗಬಾರದು. ಎಲ್ಲಿಯ ವರೆಗೆ ಧೈರ್ಯದಿಂದ ಯಾರಾದರೂ ಯುದ್ಧವನ್ನು ನಿಲ್ಲಿಸಲು ಪ್ರಯತ್ನಿಸುವುದಿಲ್ಲವೋ ಅಲ್ಲಿಯ ವರೆಗೆ ಅವರು ಲೋಕವನ್ನು ನಾಶದ ಕಡೆಗೆ ಕೊಂಡೊಯ್ಯಲು ಕಾರಣಕರ್ತರಾಗುತ್ತಾರೆ. ದುಆಗಳನ್ನು ಮಾಡಬೇಕು ಮತ್ತು ದೌರ್ಜನ್ಯವನ್ನು ತಡೆಯಬೇಕು ಎಂಬ ಸಂಗತಿಯನ್ನು ಹರಡಲು ಪ್ರಯತ್ನಿಸಿರಿ. ಯಾವನಾದರೂ ಅಹ್ಮದಿಗೆ ಯಾರೊಂದಿಗಾದರೂ ನಂಟು ಇದ್ದರೆ ಅವರಿಗೆ ಮನವರಿಕೆ ಮಾಡಿಸಬೇಕು.

'ನಮ್ಮ ಮುಗ್ಧ ಪ್ರಜೆಗಳನ್ನು ಹಮಾಸ್ ಕೊಂದಿದೆ; ಆದ್ದರಿಂದ ನಾವು ಅದರ ಸೇಡು ತೀರಿಸುವೆವು' ಎಂದು ಇಸ್ರೇಲ್ ಹೇಳುತ್ತಿದೆ. ಆದರೆ ಈ ಪ್ರತೀಕಾರ ಎಲ್ಲ ಮಿತಿಯನ್ನು ಪಾರು ಮಾಡಿದೆ. ಎಷ್ಟು ಇಸ್ರೇಲರು ಸಾವನ್ನಪ್ಪಿರುವರು ಎಂದು ಹೇಳಲಾಗುತ್ತಿವೆಯೋ ಅದರ ನಾಲ್ಕೈದು ಪಟ್ಟು ಅಧಿಕ ಮುಗ್ಧ ಪೆಲಸ್ತೀನಿಯರ ಜೀವಹಾನಿ ಉಂಟಾಗಿದೆ. ಹಮಾಸನ್ನು ಕೊನೆಗೊಳಿಸುವುದು ಗುರಿ ಎಂದಾದರೆ ಅವರೊಂದಿಗೆ ಮುಖಾಮುಖಿಯಾಗಿ ಯುದ್ಧ ಮಾಡಬೇಕು. ಮಹಿಳೆಯರನ್ನು ಮತ್ತು ಮಕ್ಕಳನ್ನು ಏಕೆ ಸಾವಿಗೆ ಗುರಿಪಡಿಸುತ್ತೀರಿ. ಅದೇ ರೀತಿಯಲ್ಲಿ ನೀರು, ಆಹಾರ ಮತ್ತು ಚಿಕಿತ್ಸೆಯಿಂದಲೂ ಪೆಲಸ್ತೀನಿಯರನ್ನು ಇಸ್ರೇಲರು ವಂಚಿತಗೊಳಿಸಿರುವರು.

ಈ ರಾಷ್ಟ್ರಗಳು ವಾದಿಸುವ ಮಾನವ ಹಕ್ಕುಗಳು ಮತ್ತು ಯುದ್ಧ ನೀತಿಗಳು ಎಲ್ಲ ಇಲ್ಲಿಗೆ ಕೊನೆಗೊಳ್ಳುತ್ತವೆ. ಆದರೂ ಕೆಲವು ಜನರು ಇದರ ಬಗ್ಗೆ ಗಮನಸೆಳೆಯುತ್ತಿದ್ದಾರೆ. ಉದಾಹರಣೆಗೆ, ಅಮೇರಿಕದ ಮಾಜಿ ಅಧ್ಯಕ್ಷ ಬರಾಕ್ ಒಬಾಮ ಕೆಲವು ದಿನಗಳ ಹಿಂದೆ ಹೀಗೆ ಹೇಳಿದರು: ಯುದ್ಧ ಮಾಡುವುದಾದರೆ ಯುದ್ಧ ನೀತಿಗಳನ್ನು ಮುಂದಿರಿಸಬೇಕು.

ಮುಗ್ಧ ಪ್ರಜೆಗಳ ಮೇಲೆ ದೌರ್ಜನ್ಯ ನಡೆಯಬಾರದು ಎಂದು ವಿಶ್ವಸಂಸ್ಥೆಯ ಜನರಲ್ ಸೆಕ್ರೆಟರಿ ಕೂಡ ತನ್ನ ಹೇಳಿಕೆಯನ್ನು ನೀಡಿದ್ದರು. ಅದಕ್ಕಾಗಿ ಇಸ್ರೇಲ್ ಸರ್ಕಾರ ಬೊಬ್ಬೆ ಹಾಕಿದಾಗ, ಶಾಂತಿಯ ಚಾಂಪಿಯನ್ ಎಂದು ಸ್ವತಃ ಭಾವಿಸುವ ಲೋಕದ ಶಕ್ತಿಶಾಲಿ ರಾಷ್ಟ್ರಗಳ ಯಾವ ಅಧ್ಯಕ್ಷರೂ ವಿಶ್ವಸಂಸ್ಥೆಯ ಸೆಕ್ರೆಟರಿಗೆ ಬೆಂಬಲವಾಗಿ ಏನೂ ಹೇಳಲಿಲ್ಲ. ಬದಲಾಗಿ ಅವರ ಹೇಳಿಕೆಯನ್ನು ಇಷ್ಟಪಡಲಿಲ್ಲ. ಏನಿದ್ದರೂ ಸ್ಥಿತಿಗತಿಗಳು ಬಹಳ ಕೆಟ್ಟು ಹೋಗಿವೆ ಮತ್ತು ಕೆಟ್ಟು ಹೋಗುತ್ತಾ ಇವೆ. ಒಟ್ಟಿನಲ್ಲಿ ಈ ಸ್ಥಿತಿಯಲ್ಲಿ ನಾವು ದುಆಗಳ ಕಡೆಗೆ ಬಹಳ ಗಮನಹರಿಸಬೇಕಾಗಿದೆ.

ಪಾಶ್ಚಿಮಾತ್ಯ ಮಾಧ್ಯಮಗಳು ಒಂದು ಪಕ್ಷದ ವಾರ್ತೆಗಳನ್ನು ಅತಿಶಯೋಕ್ತಿಯಿಂದ ಪ್ರಸಾರ ಮಾಡುತ್ತವೆ. ಮರುಪಕ್ಷದ ಕುರಿತು ಒಂದು ಮೂಲೆಯಲ್ಲಿ ಚಿಕ್ಕದಾಗಿ ವಾರ್ತೆ ಕೊಡುತ್ತವೆ. ಉದಾಹರಣೆಗೆ, ಹಮಾಸ್‌ನಲ್ಲಿ ಕೈದಿಯಾಗಿ ಇದ್ದಾಗ ನನ್ನೊಂದಿಗೆ ಉತ್ತಮವಾಗಿ ವರ್ತಿಸಲಾಗಿತ್ತು ಎಂದು ಕೆಲವು ದಿನಗಳ ಹಿಂದೆ ಬಿಡುಗಡೆಗೊಂಡ ಒಂದು ಮಹಿಳೆ ಹೇಳಿದ್ದನ್ನು ಒಂದು ಮೂಲೆಯಲ್ಲಿ ವಾರ್ತೆಯಾಗಿ ನೀಡಿತು. ಹಮಾಸಿನ ಜೈಲು ಒಂದು ನರಕವಾಗಿದೆ ಎಂದು ಯಾರೋ ಹೇಳಿದ್ದನ್ನು ಸ್ಥಿರವಾದ ದೊಡ್ಡ ವಾರ್ತೆಯಾಗಿ ಪ್ರಸಾರ ಮಾಡಿತು. ಎಲ್ಲ ಸ್ಥಿತಿಗತಿಗಳನ್ನು ನೇರವಾಗಿ ಮುಂದಿರಿಸುತ್ತಾ ಲೋಕದ ಜನರಿಗೆ ಸ್ವತಃ ತೀರ್ಮಾನ ಮಾಡಲು ಅನುವು ಮಾಡಿಕೊಡುತ್ತಿದ್ದರೆ ಅದು ನ್ಯಾಯಪಾಲನೆ ಆಗುತ್ತಿತ್ತು.

ದುಆದೊಂದಿಗೆ ತಮ್ಮ ಶಕ್ತಿ ಅನುಸಾರ ಪ್ರಯತ್ನವನ್ನು ಸಹ ಮಾಡಬೇಕಾಗಿದೆ. ದೌರ್ಜನ್ಯಪೀಡಿತ ಮುಸ್ಲಿಮರಿಗಾಗಿ ದುಆ ಮಾಡಿರಿ. ಮುಸ್ಲಿಂ ಸರ್ಕಾರಗಳ ಕಡೆಯಿಂದ ಒಂದು ಸಂಯುಕ್ತ ಹಾಗೂ ದೀರ್ಘಕಾಲೀನ ಯೋಜನೆ ಉಂಟಾಗಲಿಕ್ಕಾಗಿಯೂ ದುಆ ಮಾಡಿರಿ. ಮುಸ್ಲಿಮರ ಕಷ್ಟತೆಗಳು ದೂರವಾಗಲಿಕ್ಕಾಗಿ ನಮ್ಮೊಳಗೆ ಒಂದು ಪ್ರತ್ಯೇಕವಾದ ನೋವು ಇರಬೇಕು. ನಾವಂತು ಹಝ್ರ್‌ರತ್ ಮಸೀಹ್ ಮೌಊದ್‌ರನ್ನು[ಅ] ನಂಬುವವರಾಗಿದ್ದೇವೆ. ನಮಗೆ ಮುಸ್ಲಿಮರು ಕಷ್ಟತೆಗಳನ್ನು ಕೊಡುತ್ತಿರುವುದಾದರೂ ಹಝ್ರ್‌ರತ್ ಮಸೀಹ್ ಮೌಊದ್[ಅ] ತನ್ನೊಂದು ಫಾರಸೀ ಪದ್ಯದಲ್ಲಿ ತಮ್ಮ ಭಾವನೆಗಳನ್ನು ಹೀಗೆ ವ್ಯಕ್ತಪಡಿಸಿಕೊಂಡಿದ್ದರು: ಹೃದಯವೇ, ನೀನು ಈ ಜನರ ಬಗ್ಗೆ ಕಾಳಜಿವಹಿಸು. ಎಷ್ಟಾದರೂ ಅವರು ನನ್ನ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಪ್ರೀತಿಸುತ್ತಾರೆ ಎಂದು ವಾದಿಸುವವರಾಗಿರುವರು. ಆದ್ದರಿಂದ ಹಝ್ರ್‌ರತ್ ಪೈಗಂಬರ್‌ರೊಂದಿಗೆ[ಸ] ನಮಗೆ ಇರುವ ಪ್ರೇಮ, ಮುಸ್ಲಿಮರಿಗಾಗಿ ನಾವು ವಿಶೇಷವಾಗಿ ದುಆ ಮಾಡಬೇಕು ಎಂದು ಆವಶ್ಯಪಡುತ್ತದೆ. ಅಲ್ಲಾಹನು ನಮಗೆ ಅದರ ಸೌಭಾಗ್ಯ ನೀಡಲಿ – ಆಮೀನ್.

ಓದಿದ್ದು

## ಒಳ್ಳೆಯ ಬಟ್ಟೆ, ಕಪ್ಪು ಕನ್ನಡಕಗಳನ್ನು ಧರಿಸಿದ್ದ ದಲಿತನಿಗೆ ಹಲ್ಲೆ

## ಗುಜರಾತ್‌ನಲ್ಲಿ ಮೇಲ್ಜಾತಿ ಗುಂಪಿನಿಂದ ನಡೆದ ಕೃತ್ಯ

**ಪಲನ್‌ಪುರ (ಗುಜರಾತ್), ಜೂ.1:** ಗುಜರಾತ್ ರಾಜ್ಯದ ಬನಸ್ಕಾಂತ ಜಿಲ್ಲೆಯ ಗ್ರಾಮವೊಂದರಲ್ಲಿ ಮೇಲ್ಜಾತಿಗಳ ಜನರ ಗುಂಪೊಂದು ದಲಿತ ವ್ಯಕ್ತಿಯೊಬ್ಬರ ಮೇಲೆ ಹಲ್ಲೆ ನಡೆಸಿದೆ. ಈ ಹಲ್ಲೆಗೆ ಕಾರಣವೆಂದರೆ, ಆ ದಲಿತ ವ್ಯಕ್ತಿಯು "ಒಳ್ಳೆಯ ಬಟ್ಟೆಗಳು ಮತ್ತು ಕಪ್ಪು ಕನ್ನಡಕಗಳನ್ನು ಧರಿಸುತ್ತಿದ್ದರು" ಹಾಗೂ ಅದು ಈ ಮೇಲ್ಜಾತಿಗಳ ಜನರ ಅಸಮಾಧಾನಕ್ಕೆ ಕಾರಣವಾಗಿತ್ತು!

ಘಟನೆಯ ಪಲನ್‌ಪುರ ತಾಲೂಕಿನ ಮೋಟ ಎಂಬ ಗ್ರಾಮದಲ್ಲಿ ಮಂಗಳವಾರ ರಾತ್ರಿ ನಡೆದಿದೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ದುಷ್ಕರ್ಮಿಗಳು ದಲಿತ ವ್ಯಕ್ತಿಯ ಮೇಲೆ ಮಾತ್ರ ಹಲ್ಲೆ ನಡೆಸಿದ್ದಲ್ಲ, ತಡೆಯಲು ಬಂದ ಅವರ ತಾಯಿಗೂ ಹೊಡೆದಿದ್ದಾರೆ. ತಾಯಿ ಮತ್ತು ಮಗ ಈಗ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸಂತ್ರಸ್ತ ಜಿಗರ್ ಶೆಖಾಲಿಯಾ ನೀಡಿದ ದೂರಿನ ಆಧಾರದಲ್ಲಿ ಏಳು ಜನರ ವಿರುದ್ಧ ಮೊದಲ ಮಾಹಿತಿ ವರದಿ ದಾಖಲಾಗಿದೆ. "ನಾನು ಒಳ್ಳೆಯ ಬಟ್ಟೆಗಳು ಮತ್ತು ಕಪ್ಪು ಕನ್ನಡಕಗಳನ್ನು ಧರಿಸುವುದನ್ನು ಸಹಿಸಲಾಗದೆ ಅವರು ನನಗೆ ಮತ್ತು ನನ್ನ ತಾಯಿಗೆ ಹೊಡೆದಿದ್ದಾರೆ" ಎಂದು ಅವರು ತನ್ನ ದೂರಿನಲ್ಲಿ ಹೇಳಿದ್ದಾರೆ.

"ಮಂಗಳವಾರ ಬೆಳಗ್ಗೆ ನಾನು ಮನೆಯ ಹೊರಗಡೆ ನಿಂತಿದ್ದಾಗ, ಏಳು ಆರೋಪಿಗಳ ಪೈಕಿ ಒಬ್ಬ ನನ್ನ ಸಮೀಪ ಬಂದ. 'ಈಗ ನೀನು ತುಂಬಾ ಹಾರಾಡುತ್ತಿದ್ದೀಯ' ಎಂದು ಹೇಳಿ ನನ್ನನ್ನು ನಿಂದಿಸಿದ ಮತ್ತು ಕೊಲ್ಲುವ ಬೆದರಿಕೆಯನ್ನು ಹಾಕಿದ' ಎಂದು ದೂರಿನಲ್ಲಿ ಜಿಗತ್ ಶೆಖಾಲಿಯಾ ಹೇಳಿದ್ದಾರೆ.

ಅದೇ ರಾತ್ರಿ, ನಾನು ಗ್ರಾಮದ ದೇವಸ್ಥಾನವೊಂದರ ಹೊರಗೆ ನಿಂತಿದ್ದಾಗ ರಜಪೂತ ಎಂಬ ಉಪನಾಮ ಹೊಂದಿರುವ ಸಮುದಾಯದ ಆರು ಮಂದಿ ದೊಣ್ಣೆಗಳನ್ನು ಹಿಡಿದುಕೊಂಡು ನನ್ನ ಬಳಿಗೆ ಬಂದರು. ನೀನು ಯಾಕೆ ಒಳ್ಳೆಯ ಬಟ್ಟೆ ಧರಿಸಿದ್ದಿ ಮತ್ತು ಕಪ್ಪು ಕನ್ನಡಕ ಹಾಕಿದ್ದಿ" ಎಂದು ಅವರು ಪ್ರಶ್ನಿಸಿದರು.

"ಅವರು ನನಗೆ ಹೊಡೆದರು ಮತ್ತು ಅಂಗಡಿಯೊಂದರ ಹಿಂಭಾಗಕ್ಕೆ ಎಳೆದುಕೊಂಡು ಹೋದರು. ನನ್ನ ರಕ್ಷಣೆಗೆ ತಾಯಿ ಓಡಿ ಬಂದಾಗ ಅವರು ತಾಯಿಯ ಮೇಲೆಯೂ ಹಲ್ಲೆ ನಡೆಸಿದರು ಮತ್ತು ಕೊಲ್ಲುವ ಬೆದರಿಕೆಯೊಡ್ಡಿದರು. ಅವರು ತಾಯಿಯ ಬಟ್ಟೆಗಳನ್ನೂ ಹರಿದರು" ಎಂಬುದಾಗಿ ಸಂತ್ರಸ್ತ ತನ್ನ ದೂರಿನಲ್ಲಿ ಹೇಳಿದ್ದಾರೆ. ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆಯ ವಿವಿಧ ವಿಧಿಗಳು ಮತ್ತು ದಲಿತ ದೌರ್ಜನ್ಯ ತಡೆ ಕಾಯ್ದೆಯ ವಿಧಿಗಳಂತೆ ಮೊಕದ್ದಮೆ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದರು. ಆದರೆ, ಯಾವುದೇ ಆರೋಪಿಯ ಬಂಧನವಾಗಿಲ್ಲ. **(ವಾರ್ತಾಭಾರತಿ 02–06–23)**

=====================================================================

## ಚೀನದಲ್ಲಿ ಬದಲಾಗುತ್ತಿರುವ ನೀತಿಗಳು

ಒಂದು ಕಾಲದಲ್ಲಿ ಜನಸಂಖ್ಯೆ ನಿಯಂತ್ರಣಕ್ಕಾಗಿ ಕಠಿನ ನೀತಿಗಳನ್ನು ಜಾರಿಗೊಳಿಸಿದ್ದ ಚೀನ ಈಗ ಜನಸಂಖ್ಯೆಯನ್ನು ಹೆಚ್ಚಿಸಲು ಹೊಸ ಯೋಜನೆಗಳನ್ನು, ನೀತಿಗಳನ್ನು ಅನುಷ್ಠಾನಗೊಳಿಸುತ್ತಿದೆ. ಅದಲ್ಲದೇ ಚೀನ 60 ವರ್ಷಗಳಲ್ಲೇ ಮೊದಲ ಬಾರಿಗೆ ಜನ ಸಂಖ್ಯೆಯಲ್ಲಿ ಇಳಿಕೆಯನ್ನು ಕಂಡಿದೆ.

ಕಳೆದ ದಶಕಗಳಲ್ಲಿ ಜನ ಸಂಖ್ಯೆಯನ್ನು ಇಳಿಸಲು ಹಾಗೂ ಏರಿಕೆ ಮಾಡಲು ಚೀನ ನೀತಿಗಳನ್ನು ರೂಪಿಸಿದೆ. 1979 – 2015ರ ವರೆಗೆ 'ಒಂದು ಮಗುವಿನ' ನೀತಿಯನ್ನು ಜಾರಿ ಮಾಡಿತ್ತು. ಆದರೆ 2015ರ ಅನಂತರ ಪ್ರತೀ ಪೋಷಕರು ಎರಡು ಮಕ್ಕಳನ್ನು ಹೊಂದಬಹುದು ಎಂದು ನೀತಿಯಲ್ಲಿ ಬದಲಾವಣೆ ತಂದಿತು. ಅದರಿಂದ ಈಚೆಗೆ ದೇಶದಲ್ಲಿ ಜನಸಂಖ್ಯೆಯನ್ನು ಏರಿಸುವ ಕ್ರಮವಾಗಿ ಮೂರು ಮಕ್ಕಳನ್ನು ಪಡೆಯಲು ಪ್ರತೀ ದಂಪತಿಗೆ ಪ್ರೋತ್ಸಾಹ ನೀಡಲಾಗುತ್ತಿದೆ.

ಅದಲ್ಲದೇ ಇತ್ತೀಚೆಗೆ ಮದುವೆಯಾಗಲು ಹಾಗೂ ಮಕ್ಕಳನ್ನು ಹೊಂದಲು ಉತ್ತೇಜಿಸಲು ಪ್ರಾಯೋಗಿಕವಾಗಿ ವಿವಿಧ ಯೋಜನೆಗಳನ್ನು, ಸೌಲಭ್ಯಗಳನ್ನು ಚೀನದ 29ಕ್ಕೂ ಹೆಚ್ಚು ನಗರಗಳಲ್ಲಿ ಜಾರಿ ಮಾಡಲು ಸ್ಥಳೀಯ ಸರಕಾರಗಳು ಮುಂದಾಗಿವೆ. ಆದರೆ ಜೀವನವೆಚ್ಚ ಒಂದೇ ಸಮನೆ ಹೆಚ್ಚುತ್ತಿರುವ ಹಿನ್ನಲೆಯಲ್ಲಿ ಕುಟುಂಬಗಳು ಕೂಡ ಒಂದಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಲು ಅಷ್ಟೊಂದು ಆಸಕ್ತಿ ತೋರುತ್ತಿಲ್ಲ.

**(ಉದಯವಾಣಿ 11–02–23)**

## ಶರ್ಟ್ ಧರಿಸದ ಅಧಿಕಾರಿಯ ಅಮಾನತು

**ಲಕ್ನೋ:** ಉತ್ತರ ಪ್ರದೇಶ ಶಿಕ್ಷಣ ಇಲಾಖೆಯ ಅಧಿಕಾರಿಯನ್ನು ಅಮಾನತು ಮಾಡಲಾಗಿದೆ. ವೀಡಿಯೋ ಕಾನ್ಫರೆನ್ಸ್ ಮೂಲಕ ನಡೆದ ಸಭೆಗೆ ಆ ಅಧಿಕಾರಿ ಶರ್ಟ್ ಧರಿಸದೆ, ಬನಿಯನ್ ಹಾಕಿಕೊಂಡು ಹಾಜರಾಗಿದ್ದರು. ಸೂಕ್ತ ರೀತಿಯಲ್ಲಿ ಬಟ್ಟೆ ಧರಿಸದೇ ಅವರು ಕುಳಿತಿದ್ದರು ಎಂಬ ಆರೋಪವನ್ನು ಹೊರಿಸಲಾಗಿದೆ. ಈ ಹಿನ್ನೆಲೆಯಲ್ಲಿ ಉತ್ತರ ಪ್ರದೇಶ ಶಿಕ್ಷಣ ಖಾತೆಯ ನಿರ್ದೇಶಕ ವಿಜಯ ಕಿರಣ್ ಆನಂದ್ ಆ ಅಧಿಕಾರಿಯನ್ನು ಅಮಾನತು ಮಾಡುವ ಆದೇಶ ಹೊರಡಿಸಿದ್ದಾರೆ. **(ಉದಯವಾಣಿ 15–06–2023)**

==========================================================

## ಅತ್ಯಪರೂಪದ ಶೋಧ: ಕೃತಕ ಭ್ರೂಣ ಕೋಶ ಸೃಷ್ಟಿ!

## ಅಮೆರಿಕ ಮ್ಯಾಗ್ದಲೆನಾ ಗೋಯೆಜ್‌ರಿಂದ ನವಶೋಧ, ಜೀವಶಾಸ್ತ್ರ ವಲಯದಲ್ಲಿ ಸಂತಸ–ಗೊಂದಲ

## ಲಾಭವೇನು? ಆತಂಕಗಳೇನು?

ಇತ್ತೀಚೆಗೆ ಸ್ತ್ರೀಯರಿಗೆ ಗರ್ಭಪಾತ ಹೆಚ್ಚಾಗಿದೆ. ಅವು ಯಾಕೆ ಆಗುತ್ತವೆ ಎನ್ನುವುದನ್ನು ಈ ಕೃತಕ ಭ್ರೂಣಗಳ ಬೆಳವಣಿಗೆಯ ಮೂಲಕ ತಿಳಿಯಬಹುದು. ಇವುಗಳ ಸೃಷ್ಟಿಗೆ ಅಂಡಾಣು – ವೀರ್ಯಾಣುವಿನ ಅಗತ್ಯವಿಲ್ಲವಾದರೂ, ಮನುಷ್ಯನ ಜೀವಕೋಶಗಳಿಂದಲೇ ಸಿದ್ಧಪಡಿಸಬೇಕು. ಒಂದು ವೇಳೆ ಈ ಮಾರ್ಗದಲ್ಲೇ ಭ್ರೂಣದ ಸೃಷ್ಟಿ ಸಾಧ್ಯವಾದರೆ, ಐವಿಎಫ್ ಪ್ರಯೋಗಾಲಯದಲ್ಲಿ ಭ್ರೂಣಗಳನ್ನು ಬೆಳೆಸುವ ಪದ್ಧತಿ ಮತ್ತು ಸಂಶೋಧನೆಗಳೆಲ್ಲ ಅರ್ಥ ಕಳೆದುಕೊಳ್ಳುತ್ತವೆ ಎನ್ನುವುದು ವಿಜ್ಞಾನಿಗಳನ್ನು ಕಾಡುತ್ತಿರುವ ಸಂಗತಿಯಾಗಿದೆ.

**ಮೆಲ್ಬರ್ನ್:** ಜೀವಜಗತ್ತಿನ ವಿಕಾಸದ ಬಗ್ಗೆ ಹಲವಾರು ಸಂಶೋಧನೆಗಳು ನಿತ್ಯ ನಡೆಯುತ್ತಲೇ ಇವೆ. ಪ್ರಸ್ತುತ ಇನ್ನೊಂದು ಅತ್ಯಂತ ಮಹತ್ವದ ಸೃಷ್ಟಿಯೊಂದು ನಡೆದಿದೆ. ಇಂಗ್ಲೆಂಡ್‌ನ ಕೇಂಬ್ರಿಜ್ ವಿ.ವಿ.ಯ ಮ್ಯಾಗ್ದಲೆನಾ ಗೋಯೆಜ್ ಅವರು ಕ್ಯಾಲಿಫೋರ್ನಿಯಾ ತಾಂತ್ರಿಕ ಸಂಸ್ಥೆಯೊಂದಿಗೆ ಸೇರಿಕೊಂಡು; ವಿಶೇಷ ಜೀವಕೋಶಗಳನ್ನು ಬಳಸಿ ಕೃತಕವಾಗಿ ಮನುಷ್ಯನ ಭ್ರೂಣಕೋಶಗಳನ್ನು ಸೃಷ್ಟಿಸಿದ್ದಾರೆ. ಇವು ಮನುಷ್ಯನ ಭ್ರೂಣಕೋಶಗಳಲ್ಲವಾದರೂ, ಅದನ್ನೇ ಹೋಲುವ ಕೃತಕ ರೂಪಗಳು! ಇವು ಕೃತಕವಾದರೂ ಮಾಮೂಲಿ ಭ್ರೂಣಕೋಶಗಳ ಹಲವು ಲಕ್ಷಣಗಳನ್ನು ಹೊಂದಿವೆ. ಈ ವಿಚಾರ ಇತ್ತೀಚೆಗೆ ಅಮೆರಿಕದ ಬೋಸ್ಟನ್‌ನಲ್ಲಿ ನಡೆದ ಇಂಟರ್‌ನ್ಯಾಶನಲ್ ಸೊಸೈಟಿ ಫಾರ್ ಸ್ಟೆಮ್ ಸೆಲ್ ರೀಸರ್ಚ್ ಸಭೆಯಲ್ಲಿ ಬಹಿರಂಗವಾಗಿದೆ.

ಇದನ್ನು ಪ್ರೊಫೆಸರ್ ಮ್ಯಾಗ್ದಲೆನಾ ಗೋಯೆಜ್ ಬಹಿರಂಗಪಡಿಸಿದ್ದೇ ತಡ ಹಲವು ರೀತಿಯ ಚರ್ಚೆಗಳು ಆರಂಭವಾಗಿವೆ. ಪ್ರಸಿದ್ಧ ನಿಯತಕಾಲಿಕೆಗೆ ಕಳುಹಿಸಲಾಗಿದೆಯಾದರೂ ಅದಿನ್ನೂ ಪ್ರಕಟವಾಗಿಲ್ಲ. ಈ ಸಂಶೋಧನೆ ವಿಜ್ಞಾನಿಗಳ ವಲಯದಲ್ಲಿ ಕೆಲವು ಆತಂಕಗಳನ್ನೂ ಹುಟ್ಟಿಸಿದೆ.

**ಮ್ಯಾಗ್ದಲೆನಾ ಸಂಶೋಧನೆಯೇನು?:** ಮ್ಯಾಗ್ದಲೆನಾ ತಮ್ಮ ಸಂಶೋಧನೆಯನ್ನು ವಿವರಿಸುವಾಗ ಹಲವು ಗಂಭೀರ ಸಂಗತಿಗಳನ್ನು ಬಹಿರಂಗಪಡಿಸಿದ್ದಾರೆ. ಮೊದಲನೆಯದಾಗಿ ಮನುಷ್ಯನ ಒಂದೇ ಒಂದು ವಿಶೇಷ ಜೀವಕೋಶವನ್ನು ಬಳಸಿ ಕೃತಕ ಭ್ರೂಣಕೋಶಗಳನ್ನು ಸಿದ್ಧಪಡಿಸಲಾಗಿದೆ. ಇದಕ್ಕೆ ಗ್ಯಾಸ್ಟ್ರಿಕುಲೇಶನ್ ಎಂಬ ಪದ್ಧತಿ ಬಳಸಲಾಗಿದೆ. ಆದರೆ ಈ ಪದ್ಧತಿ 14 ದಿನಗಳ ನಿಯಮವನ್ನು ಮೀರಿದೆ. ಪ್ರಯೋಗಾಲಯದಲ್ಲಿ ಭ್ರೂಣವನ್ನು ಬೆಳೆಸಲು 14 ದಿನಗಳ ಸಮಯವನ್ನು ನಿಗದಿಪಡಿಸಲಾಗಿದೆ. ಇದಕ್ಕಿಂತ ಹೆಚ್ಚಿನ ಅವಧಿ ಯಾವುದೇ ಭ್ರೂಣ ಬದುಕಿರಲು ಸಾಧ್ಯವಿಲ್ಲ ಎನ್ನುವುದೇ ಇದಕ್ಕೆ ಕಾರಣ. ಅಂಡಾಣು ಹುಟ್ಟಿ ಬೆಳೆದು ಗರ್ಭಕೋಶವನ್ನು ಸೇರಿಕೊಳ್ಳುವ ಅವಧಿಯೂ ಇಷ್ಟೇ ಆಗಿದೆ.

ಪ್ರಸ್ತುತ ಮ್ಯಾಗ್ದಲೆನಾ ಶೋಧದಲ್ಲಿ 14 ದಿನಗಳಿಗಿಂತ ಹೆಚ್ಚಿನ ಸಮಯವನ್ನು ಬಳಸಿಕೊಳ್ಳಲಾಗಿದೆ. 2021ರಲ್ಲಿ ಇದಕ್ಕಿಂತ ಹೆಚ್ಚಿನ ಸಮಯ ನೀಡಲು ಚಿಂತನೆ ನಡೆಸಲಾಗಿತ್ತು. ಬಹುಶಃ ಭ್ರೂಣದ ಕುರಿತ ಸಂಶೋಧನೆಗೆ ನೆರವಾಗುವ ಕಾರಣ ಹೆಚ್ಚುವರಿ ಸಮಯಕ್ಕೆ ಅನುಮತಿ ನೀಡುವ ಸಾಧ್ಯತೆಯೂ ಇದೆ.

**ನವಶೋಧದ ವಿಶೇಷವೇನು?:** ಒಂದೇ ಒಂದು ಜೀವಕೋಶ ಬಳಸಿ ಬೆಳೆಸಿರುವ ಕೃತಕ ಭ್ರೂಣಕೋಶಗಳು, ಮನುಷ್ಯನ ಸಹಜ ಭ್ರೂಣಕೋಶಗಳನ್ನು ಹೋಲುತ್ತವೆ. ಭ್ರೂಣದ ಬೆಳವಣಿಗೆಯ ಅತ್ಯಂತ ಆರಂಭಿಕ ಸ್ಥಿತಿಯಲ್ಲಿರುವಂತೆ ಈ ಭ್ರೂಣಗಳು ಕಾಣುತ್ತವೆ. ಇವು ಇನ್ನಷ್ಟು ಬೆಳೆಯುತ್ತ ಹೋದಂತೆಲ್ಲ ಕರುಳಬಳ್ಳಿ, ಗರ್ಭಕೋಶದಲ್ಲಿ ಭ್ರೂಣದ ಸುತ್ತಲೂ ಇರುವ ಯಾಲ್ಕ್ ಸ್ಯಾಕ್ ಸೇರಿದಂತೆ ಭ್ರೂಣಕೋಶದ ರೂಪವನ್ನು ಪಡೆಯುತ್ತವೆ. ಆದರೆ ಹೃದಯ, ಮೆದುಳು ಸೇರಿದಂತೆ ಇನ್ನಿತರ ಮಹತ್ವದ ಅಂಗಾಂಗಗಳ ಬೆಳವಣಿಗೆಗಳು ಇಲ್ಲಿರುವುದಿಲ್ಲ. ಅರ್ಥಾತ್ ಮನುಷ್ಯನ ಸಹಜ ಭ್ರೂಣಗಳ ಬೆಳವಣಿಗೆಯಲ್ಲಿ ಕಾಣುವ ಎಲ್ಲ ಲಕ್ಷಣಗಳು ಇಲ್ಲಿರುವುದಿಲ್ಲ. **(ಉದಯವಾಣಿ 18–06–2023)**

## ಬಾಲಕನ ಕುತ್ತಿಗೆ – ತಲೆ ಮರು ಜೋಡಿಸಿದ ಇಸ್ರೇಲ್ ವೈದ್ಯರು!

**ಜೆರುಸಲೇಮ್:** ಅಪಘಾತವೊಂದರಲ್ಲಿ ಕುತ್ತಿಗೆಯಿಂದ ತುಂಡಾಗಿ ತಲೆ ಬೇರ್ಪಟ್ಟ 12 ವರ್ಷದ ಬಾಲಕನಿಗೆ ಇಸ್ರೇಲ್ ವೈದ್ಯರು ಶಸ್ತ್ರಚಿಕಿತ್ಸೆ ಮಾಡಿದ್ದಾರೆ. ಪವಾಡವೆಂಬಂತೆ ಪುನಃ ಕುತ್ತಿಗೆ ಮತ್ತು ತಲೆಯನ್ನು ಮರು ಜೋಡಿಸಿದ್ದಾರೆ.

ಪ್ಯಾಲೆಸ್ಥೀನ್‌ನ ಪಶ್ಚಿಮ ದಂಡೆಯ ಮೇಲೆ ಬಾಲಕ ಸೈಕಲ್ ಚಲಾಯಿಸುತ್ತಿದ್ದ. ಈ ವೇಳೆ ಕಾರು ಡಿಕ್ಕಿಯಾಗಿ, ಬಾಲಕನ ಬೆನ್ನುಹುರಿಯ ಮೇಲ್ಭಾಗವು ತಲೆ ಬುರುಡೆಯಿಂದ ಬೇರ್ಪಟ್ಟಿತ್ತು. ಇದನ್ನು ವೈದ್ಯಕೀಯ ಪರಿಭಾಷೆಯಲ್ಲಿ 'ಬೈಲಾಟರಲ್ ಅಟ್ಲಾಂಟೊ ಆಕ್ಸಿಪಿಟಲ್ ಜಾಯಿಂಟ್ ಡಿಸ್‌ಲೊಕೇಶನ್' ಎನ್ನುತ್ತಾರೆ.

ಕೂಡಲೇ ಬಾಲಕನನ್ನು ವಿಶೇಷ ವಿಮಾನದ ಮೂಲಕ ಜೆರುಸಲೇಂನ ಹದಾಶಾ ಮೆಡಿಕಲ್ ಸೆಂಟರ್‌ಗೆ ದಾಖಲಿಸಲಾಯಿತು. ತುರ್ತು ಶಸ್ತ್ರಚಿಕಿತ್ಸೆ ನಡೆಸಿದ ಮೂಳೆತಜ್ಞ ಡಾ। ಓಹದ್ ಐನಾವ್ ನೇತೃತ್ವದ ವೈದ್ಯರ ತಂಡ, ಈ ಸೂಕ್ಷ್ಮ ಮತ್ತು ಸಾಹಸಮಯ ಶಸ್ತ್ರಚಿಕಿತ್ಸೆ ನಡೆಸಿ, ಬಹುತೇಕ ತಲೆಬುರುಡೆಯಿಂದ ಕುತ್ತಿಗೆ ಬೇರ್ಪಟ್ಟಿದ್ದನ್ನು ಪ್ಲೇಟ್ಸ್ ಮತ್ತು ಫಿಕ್ಸೇಶನ್ಸ್ ಬಳಸಿ ಮರು ಜೋಡಿಸಿದ್ದಾರೆ.

'ಬಾಲಕ ಬದುಕುವ ಸಂಭವ ಶೇ. 50ರಷ್ಟು ಮಾತ್ರ ಇತ್ತು. ಆದರೆ ಅತ್ಯಾಧುನಿಕ ತಂತ್ರಜ್ಞಾನ ಮತ್ತು ವೈದ್ಯಕೀಯ ಉಪಕರಣಗಳನ್ನು ಬಳಸಿ ಈ ಸೂಕ್ಷ್ಮ ಶಸ್ತ್ರಚಿಕಿತ್ಸೆ ನಡೆಸಿದ್ದೇವೆ. ಬಾಲಕನ ಆರೋಗ್ಯ ಸ್ಥಿರವಾಗಿದ್ದು, ಯಾವುದೇ ಸಹಾಯಕ ವಸ್ತುಗಳು ಇಲ್ಲದೇ ಆತ ನಡೆದಾಡುತ್ತಿದ್ದಾನೆ' ಎಂದು ಡಾ। ಓಹದ್ ಐನಾವ್ ತಿಳಿಸಿದ್ದಾರೆ. **(ಉದಯವಾಣಿ 15–07–2023)**

===========================================================================

## 16 ಸಾವಿರ ಅನಾಥ ಮೃತದೇಹಗಳ ಅಂತ್ಯ ಸಂಸ್ಕಾರ

## ಸಮಾಜ ಸೇವಕ ಅಯ್ಯೂಬ್ ಅಹ್ಮದ್‌ಗೆ ಪದ್ಮಶ್ರೀ ನೀಡುವಂತೆ ಪ್ರಧಾನಿಗೆ ಪತ್ರ

| |
|---|
| ಅಯ್ಯೂಬ್ ಅಹ್ಮದ್ ಅವರು ಅನಾಥ ಮೃತದೇಹಗಳನ್ನು ಸಾಗಿಸಲೆಂದೇ ತಮ್ಮ ಸ್ವಂತ ಹಣದಲ್ಲಿ ಒಂದು ಅಂಬಾಸಿಡರ್ ಮತ್ತು ಮಾರುತಿ ಓಮಿನಿ ಕಾರನ್ನು ಇಟ್ಟುಕೊಂಡಿದ್ದು. ಯಾರೇ ಕರೆ ಮಾಡಿ ಅಪರಿಚಿತ ಮೃತದೇಹಗಳ ಬಗ್ಗೆ ಮಾಹಿತಿ ನೀಡಿದರೆ ಸಾಕು ಆ ಸ್ಥಳಕ್ಕೆ ಹೋಗಿ ಈ ಕುರಿತು ಪೊಲೀಸರಿಗೆ ವಿಷಯ ಮುಟ್ಟಿಸಿದ ನಂತರ ಅನಾಥ ಮೃತದೇಹವನ್ನು ಕೆ.ಆರ್. ಆಸ್ಪತ್ರೆಯ ಶವಾಗಾರದಲ್ಲಿ ಮೂರು ದಿನಗಳವರೆಗೆ ಇರಿಸಿ ನಂತರ ಯಾರೂ ಬರದಿದ್ದರೆ ಸ್ವತಃ ಅವರೇ ಸ್ವಂತ ಹಣದಲ್ಲಿ ಅಂತ್ಯ ಸಂಸ್ಕಾರ ಮಾಡಿದ್ದಾರೆ. ಮೈಸೂರು ಅಲ್ಲದೆ ಚಾಮರಾಜನಗರ ಜಿಲ್ಲೆ, ಮಂಡ್ಯ ಜಿಲ್ಲೆಗಳಲ್ಲಿಯೂ ಅನಾಥ ಮೃತದೇಹಗಳನ್ನು ಅಂತ್ಯ ಸಂಸ್ಕಾರ ಮಾಡಿದ್ದಾರೆ. |

**ಮೈಸೂರು, ಜು.19:** ಸಾವಿರಾರು ಅನಾಥ ಮೃತದೇಹಗಳ ಅಂತ್ಯ ಸಂಸ್ಕಾರ ಮಾಡಿ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿರುವ ಮೈಸೂರಿನ ರಾಜೀವ್ ನಗರ ನಿವಾಸಿ ಅಯ್ಯೂಬ್ ಅಹ್ಮದ್ ಅವರಿಗೆ ಪದ್ಮಶ್ರೀ ಪ್ರಶಸ್ತಿ ನೀಡುವಂತೆ ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಹಾಗೂ ಮೈಸೂರು – ಕೊಡಗು ಸಂಸದ ಪ್ರತಾಪ ಸಿಂಹ ಅವರು ಪ್ರಧಾನಮಂತ್ರಿಗೆ ಪತ್ರ ಬರೆದು ಒತ್ತಾಯ ಮಾಡಿದ್ದಾರೆ.

ಮೈಸೂರಿನ ಬಡೇ ಮಿಯಾನ್ ಎಂದೇ ಹೆಸರುವಾಸಿಯಾಗಿರುವ ಇವರು, 22 ವರ್ಷಗಳಿಂದ ಯಾವುದೇ ಜಾತಿ, ಧರ್ಮ ಎನ್ನದೆ ಅನಾಥ ಮೃತದೇಹಗಳನ್ನು ತನ್ನ ಸ್ವಂತ ಹಣದಲ್ಲೇ ಅಂತ್ಯ ಸಂಸ್ಕಾರ ಮಾಡಿದ್ದಾರೆ. ಅಯ್ಯೂಬ್ ಅಹ್ಮದ್ ಮಂಡಿ ಮಾರ್ಕೆಟ್‌ನಲ್ಲಿ ಓರ್ವ ಕೂಲಿ ಕೆಲಸಗಾರನಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ನಿಷ್ಕಲ್ಮಶ ಮನಸ್ಸಿನಿಂದ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ.

**ಕೋವಿಡ್ ಸಂದರ್ಭದಲ್ಲಿ ಆಪತ್ಬಾಂಧವ:** ಕೊರೋನ ಸಂದರ್ಭದಲ್ಲಿ ಇಡೀ ವಿಶ್ವವೇ ಹೆದರಿ ಮನೆಯಲ್ಲಿ ಕುಳಿತಿದ್ದರೂ ಅಯ್ಯೂಬ್ ಅಹ್ಮದ್ ಮಾತ್ರ ಕೋವಿಡ್‌ನಿಂದ ಮೃತಪಟ್ಟ ಮೃತದೇಹಗಳ ಅಂತ್ಯ ಸಂಸ್ಕಾರ ಮಾಡಿದ್ದಾರೆ. ಇವರ ಸೇವೆಯನ್ನು ಗುರುತಿಸಿ ಅನೇಕ ಸಂಘ – ಸಂಸ್ಥೆಗಳು ಹಲವಾರು ಪ್ರಶಸ್ತಿಗಳನ್ನು ನೀಡಿ ಗೌರವಿಸಿವೆ. ಇದರ ಜೊತೆಗೆ ಅಮೆರಿಕದ ಹಾರ್ಮೋನಿ ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ. ಮೈಸೂರು ಜಿಲ್ಲೆಯಿಂದ ಕೊಡಮಾಡುವ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಕೂಡ ಲಭಿಸಿದೆ. ಮೈಸೂರು ದಸರಾ ಮಹೋತ್ಸವ ಉದ್ಘಾಟನೆ ವೇಳೆ ದಸರಾ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಹಾಗಾಗಿ ಶಾಸಕ ತನ್ವೀರ್ ಸೇಠ್ ಮತ್ತು ಸಂಸದ ಪ್ರತಾಪಸಿಂಹ ಅವರು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದು 2024ನೇ ಸಾಲಿನ 'ಪದ್ಮಶ್ರೀ' ಪ್ರಶಸ್ತಿ ನೀಡುವಂತೆ ಮನವಿ ಮಾಡಿದ್ದಾರೆ. **(ವಾರ್ತಾಭಾರತಿ 20–07–2023)**

===========================================================================

## ಶ್ವಾನವಾಗಿ ಬದಲಾದ ವ್ಯಕ್ತಿ!

ಟ್ರೆಂಡ್‌ಗಳನ್ನು ಸೃಷ್ಟಿಸುವ ರೀತಿಯ ಹೊಸ ಹೊಸ ಅವತಾರಗಳನ್ನು ಕೆಲವರು ಇಷ್ಟಪಡೋದು, ಅದಕ್ಕಾಗಿ ಬದಲಾಗೋದನ್ನು ನೋಡಿರುತ್ತೀರಿ. ಆದರೆ ಮನುಷ್ಯನೆಂದಾದರೂ ಶ್ವಾನವಾಗಿ ಬದಲಾಗೋದನ್ನು ನೋಡಿದ್ದೀರಾ? ಜಪಾನ್ ಮೂಲದ ವ್ಯಕ್ತಿಯೊಬ್ಬ 12 ಲಕ್ಷ

ರೂ. ಖರ್ಚು ಮಾಡಿ, ಶ್ವಾನವಾಗಿ ಬದಲಾಗಿದ್ದಾನೆ! ಆತನ ವೀಡಿಯೋ ಈಗ ಜಾಲತಾಣದಲ್ಲಿ ಭಾರೀ ವೈರಲ್ ಆಗಿದೆ. ಟೋಕೋ ಎಂಬಾತನಿಗೆ ಮೊದಲಿಂದಲೂ ಶ್ವಾನದ ಜೀವನದ ಅನುಭವವನ್ನು ಪಡೆಯಬೇಕೆಂಬ ಆಸೆ ಇತ್ತಂತೆ. ಈ ಹಿನ್ನೆಲೆಯಲ್ಲಿ ಥೇಟ್ ನಿಜವಾದ ಶ್ವಾನದಂತೆಯೇ ಕಾಣುವ ಹೈಪರ್ ರಿಯಲಾಸ್ಟಿಕ್ ಎನ್ನುವ ಡಾಗ್ ಕಾಸ್ಟ್ಯೂಮ್ ಅನ್ನು 40 ದಿನ ತಯಾರಿಸಿ, ಅದನ್ನು ಧರಿಸಿ ಪಾರ್ಕ್‌ಗೆ ವಾಕಿಂಗ್ ಹೋಗಿದ್ದಾರೆ. ಶ್ವಾನವೇ ಎನ್ನುವಷ್ಟು ನೈಜವಾಗಿ ಕಾಣುತ್ತಿರುವ ಆತನೊಂದಿಗೆ ಇತರ ಶ್ವಾನಗಳೂ ಬೆರೆಯುವ ವೀಡಿಯೋ ವೈರಲ್ ಆಗಿದೆ. **(ಉದಯವಾಣಿ 31–07–2023)**

---

## ಮಗುವಿಗೆ ಮದ್ಯ ಕುಡಿಸಿದ ತಾಯಿ!

**ಕ್ಯಾಲಿಫೋರ್ನಿಯಾ:** ಅಳುತ್ತಿದ್ದ ಮಗುವನ್ನು ಸುಮ್ಮನಿರಿಸಲು ತಾಯಿಯೊಬ್ಬಳು ಮಗುವಿಗೆ ಮದ್ಯ ನೀಡಿದ ಘಟನೆ ಅಮೆರಿಕದ ಕ್ಯಾಲಿಫೋರ್ನಿಯಾದ ಸ್ಯಾನ್ ಬರ್ನ್ಯಾಡಿಯೋ ಕೌಂಟಿಯಲ್ಲಿ ವರದಿಯಾಗಿದೆ. ಹಾನೆಸ್ಸಿ ಡಿ ಲಾ ಟೊರ್ರೆ (37) ಎಂಬ ಮಹಿಳೆ ತನ್ನ ಮಗುವಿನೊಂದಿಗೆ ಕಾರಿನಲ್ಲಿ ರಿಯಾಲ್ಟೊ ಮಾರ್ಗವಾಗಿ ಪ್ರಯಾಣಿಸುತ್ತಿದ್ದಳು. ಮಗು ಒಂದೇ ಸಮನೆ ಅಳುತ್ತಿತ್ತು. ಅಳು ನಿಲ್ಲಿಸಲು ಆಕೆ ಮಗುವಿಗೆ ಮದ್ಯದ ಬಾಟಲಿಯನ್ನು ನೀಡಿದ್ದಾಳೆ. ಮಗು ಮದ್ಯ ಸೇವಿಸಿ ಪ್ರಜ್ಞೆ ತಪ್ಪಿದೆ. ಸದ್ಯ ಆಸ್ಪತ್ರೆಯಲ್ಲಿ ಮಗು ಚಿಕಿತ್ಸೆ ಪಡೆಯುತ್ತಿವೆ. ಈ ಘಟನೆಗೆ ಸಂಬಂಧಿಸಿದಂತೆ ಸ್ಥಳೀಯ ಪೊಲೀಸರು ತಾಯಿಯನ್ನು ಬಂಧಿಸಿದ್ದಾರೆ. ಮತ್ತೊಂದು ಘಟನೆಯಲ್ಲಿ, ಒಹಿಯೋದಲ್ಲಿ ತಾಯಿಯೊಬ್ಬಳು ತನ್ನ 16 ತಿಂಗಳ ಮಗುವನ್ನು ಮನೆಯಲ್ಲಿ ಬಿಟ್ಟು 10 ದಿನಗಳು ಜಾಲಿ ರೈಡ್‌ಗೆಂದು ಪೋರ್ಟೋರಿಕೊ ಮತ್ತು ಡೆಟ್ರಾಯಿಟ್ ಟ್ರಿಪ್‌ಗೆ ಹೋಗಿದ್ದಾಳೆ. ಮನೆಯಲ್ಲಿ ಒಂಟಿಯಾದ ಮಗು, ಹಸಿವಿನಿಂದ ಒದ್ದಾಡಿ ಪ್ರಾಣ ಕಳೆದುಕೊಂಡಿದೆ. ಘಟನೆ ಹಿನ್ನಲೆಯಲ್ಲಿ ತಾಯಿ ಕ್ರಿಸ್ಟೆಲ್ ಕ್ಯಾಂಡಾಲಾರಿಯೊ (31)ಳನ್ನು ಪೊಲೀಸರು ಬಂಧಿಸಿದ್ದಾರೆ. **(ಉದಯವಾಣಿ 10–8–2023)**

---

## ಪತ್ರದ ವಿಳಂಬ ವಿತರಣೆ: ಅಂಚೆ ಪಾಲಕರಿಗೆ 3.10 ಲ. ರೂ. ದಂಡ!

**ಬೆಂಗಳೂರು, ಆ, 16:** ಖಾಸಗಿ ಬ್ಯಾಂಕ್ ಮ್ಯಾನೇಜರ್ ಹುದ್ದೆಯ ಸಂದರ್ಶನಕ್ಕೆ ಸಂಬಂಧಿಸಿದ ಪತ್ರ ತಡವಾಗಿ ತಲುಪಿಸಿ, ಉದ್ಯೋಗ ಅವಕಾಶವನ್ನು ತಪ್ಪಿಸಿದ ಪೋಸ್ಟ್ ಮಾಸ್ಟರ್‌ಗೆ ಗ್ರಾಹಕ ವ್ಯಾಜ್ಯ ಪರಿಹಾರ ಆಯೋಗ ಭಾರಿ ಮೊತ್ತದ ಪರಿಹಾರ ನೀಡುವಂತೆ ತೀರ್ಪು ನೀಡಿದೆ.

ಕೊಪ್ಪಳ ಜಿಲ್ಲೆಯ 32 ವರ್ಷದ ವ್ಯಕ್ತಿಯೊಬ್ಬರು ಖಾಸಗಿ ಬ್ಯಾಂಕೊಂದರ ಮ್ಯಾನೇಜರ್ ಹುದ್ದೆಗೆ ಸಂಬಂಧಿಸಿ 2014ರ ಜುಲೈ ತಿಂಗಳಲ್ಲಿ ಪರೀಕ್ಷೆ ಬರೆದಿದ್ದರು. ಉತ್ತಮ ಅಂಕ ಗಳಿಸಿದ ಹಿನ್ನೆಲೆಯಲ್ಲಿ ಅಭ್ಯರ್ಥಿಗೆ ಮೂಲ ಅಂಕಪಟ್ಟಿ ಹಾಗೂ ಇತರ ದಾಖಲೆಯನ್ನು ಆ. 13ರೊಳಗೆ ಸಲ್ಲಿಸಲು ಬ್ಯಾಂಕ್ 2014ರ ಜುಲೈ 24ರಂದು ಪತ್ರವನ್ನು ಭಾರತೀಯ ಅಂಚೆಯ ಮೂಲಕ ಪತ್ರ ರವಾನಿಸಿದ್ದು, ಆದರೆ ಈ ಪತ್ರವು ಅಭ್ಯರ್ಥಿಗೆ ಆ. 28ರಂದು ಕೈ ಸೇರಿದೆ.

ಉದ್ಯೋಗಕ್ಕೆ ಸಂಬಂಧಿಸಿದ ಪತ್ರವು 15 ದಿನ ತಡವಾಗಿ ಕೈ ಸೇರಿರುವುದರಿಂದ ಮ್ಯಾನೇಜರ್ ಹುದ್ದೆ ಅವಕಾಶ ಕೈ ತಪ್ಪಿ ಹೋಗಿದೆ. ಭಾರತೀಯ ಅಂಚೆಯಲ್ಲಿ ಸೇವಾ ನ್ಯೂನತೆಯಿಂದಾಗಿಯೇ ಬ್ಯಾಂಕ್ ಸಂದರ್ಶನ ಕೈ ತಪ್ಪಿ ಹೋಗಿರುವುದನ್ನು ಪ್ರಶ್ನಿಸಿ ವ್ಯಕ್ತಿಯು ಬಸವಭವನದಲ್ಲಿರುವ ಬೆಂಗಳೂರಿನ ರಾಜ್ಯ ಗ್ರಾಹಕ ವ್ಯಾಜ್ಯ ಆಯೋಗಕ್ಕೆ 2015ರಲ್ಲಿ ದೂರು ನೀಡಿ ವಾದವನ್ನು ಮಂಡಿಸಿದ್ದಾರೆ.

ಪತ್ರದ ವಿಳಾಸದಲ್ಲಿ ವ್ಯತ್ಯಾಸದಿಂದ ನಿರ್ದಿಷ್ಟ ಅವಧಿಯಲ್ಲಿ ಪತ್ರ ತಲುಪಿಸಲು ಸಾಧ್ಯವಾಗಿಲ್ಲ ಹಾಗೂ ಕರ್ತವ್ಯ ನಿರ್ವಹಿಸುತ್ತಿದ್ದ ಪೋಸ್ಟ್ ಮಾಸ್ಟರ್ ಈ ಸಂದರ್ಭದಲ್ಲಿ ಇಲಾಖಾ ತರಬೇತಿಯಲ್ಲಿದ್ದರು. ಈ ವೇಳೆ ಹೊಸದಾಗಿ ತಾತ್ಕಾಲಿಕವಾಗಿ ಕರ್ತವ್ಯ ನಿಯೋಜನೆಗೊಂಡವರಿಗೆ ವಿಳಾಸದ ವ್ಯತ್ಯಾಸದಿಂದ ನಿರ್ದಿಷ್ಟ ಅವಧಿಯಲ್ಲಿ ಪತ್ರ ತಲುಪಿಸಲು ಸಾಧ್ಯವಾಗಿಲ್ಲ ಎಂದು ಅಂಚೆ ಇಲಾಖೆ ವಾದಿಸಿತ್ತು.

ಆಯೋಗವು ಗ್ರಾಹಕ ಸೇವೆಯಲ್ಲಿ ವ್ಯತ್ಯಯವಾಗಿರುವುದನ್ನು ಮನಗಂಡು ದೂರುದಾರರಿಗೆ 2 ಲಕ್ಷ ರೂ. ಪರಿಹಾರಕ್ಕೆ ಶೇ.6ರ ಬಡ್ಡಿ ದರದಲ್ಲಿ ಒಟ್ಟು 8 ವರ್ಷಕ್ಕೆ 90,000 ರೂ ಹಾಗೂ ನ್ಯಾಯಾಲಯದ ಪರಿಹಾರ ವೆಚ್ಚ 20,000 ರೂ. ನಂತೆ ಒಟ್ಟು 3.10 ಲಕ್ಷ ರೂ. ಪರಿಹಾರ ನೀಡುವಂತೆ ಅಂಚೆ ಇಲಾಖೆಗೆ ಆದೇಶ ಹೊರಡಿಸಿದೆ. **(ಉದಯವಾಣಿ 17–08–2023)**

---

## ಬಾಲಕಿಗೆ ಲೈಂಗಿಕ ಕಿರುಕುಳ

## 97 ವರ್ಷ ಜೈಲು, 8.30 ಲ. ರೂ. ದಂಡ

**ಕಾಸರಗೋಡು, ಆ. 17:** ಹನ್ನೆರಡರ ಹರೆಯದ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಪ್ರಕರಣಕ್ಕೆ ಸಂಬಂಧಿಸಿ ಸಂಬಂಧಿ ಯುವಕನಿಗೆ

97 ವರ್ಷ ಸಜೆ ಹಾಗೂ 8.30 ಲಕ್ಷ ರೂ. ದಂಡ ವಿಧಿಸಿ ಕಾಸರಗೋಡು ಹೆಚ್ಚುವರಿ ಜಿಲ್ಲಾ ಸೆಶನ್ಸ್ ನ್ಯಾಯಾಲಯ(1) ತೀರ್ಪು ನೀಡಿದೆ.

ಮಂಜೇಶ್ವರ ಕುಂಜತ್ತೂರು ಉದ್ಯಾವರದ ಸಯ್ಯಿದ್ ಮುಹಮ್ಮದ್ ಬಶೀರ್ (41)ಗೆ ಈ ಶಿಕ್ಷೆ ವಿಧಿಸಿದೆ. ಕಾಸರಗೋಡು ಜಿಲ್ಲೆಯಲ್ಲಿ ಅತ್ಯಂತ ಹೆಚ್ಚು ವರ್ಷ ಸಜೆ ವಿಧಿಸಿದ ತೀರ್ಪು ಇದಾಗಿದೆ. ಕೇರಳ ರಾಜ್ಯದಲ್ಲಿ ದ್ವಿತೀಯ ಅತ್ಯಂತ ಹೆಚ್ಚು ವರ್ಷ ಸಜೆಯಾಗಿದೆ. ಪತ್ತನಂತಿಟ್ಟದಲ್ಲಿ ಪೋಕ್ಸೊ ಪ್ರಕರಣದಲ್ಲಿ 104 ವರ್ಷ ಸಜೆ ವಿಧಿಸಲಾಗಿತ್ತು. ಅದು ಅತ್ಯಂತ ಹೆಚ್ಚು ವರ್ಷ ಸಜೆ ನೀಡಿದ ಪ್ರಕರಣವಾಗಿತ್ತು.

**(ಉದಯವಾಣಿ 18–08–2023)**

===============================================================

## ನರ್ಸ್‌ಗೆ ಜೀವನ ಪರ್ಯಂತ ಜೈಲು

**ಲಂಡನ್:** ಏಳು ಮಕ್ಕಳನ್ನು ಕೊಂದಿರುವ ಯುನೈಟೆಡ್ ಕಿಂಗ್‌ಡಮ್‌ನ ನರ್ಸ್ ಲೂಸಿ ಲೆಟ್ಟಿಗೆ ಸ್ಥಳೀಯ ಕೋರ್ಟ್ ಸೋಮವಾರ ಜೀವಾವಧಿ ಶಿಕ್ಷೆ ವಿಧಿಸಿದೆ. ಇಂಗ್ಲೆಂಡ್‌ನ ವಾಯವ್ಯ ಭಾಗದಲ್ಲಿರುವ ಮ್ಯಾಂಚೆಸ್ಟರ್‌ನ ಕೋರ್ಟ್‌ನ ನ್ಯಾಯಾಧೀಶ ಜೇಮ್ಸ್ ಗಾಸ್ ಅವರು 'ಇದೊಂದು ಗಂಭೀರ ಅಪರಾಧವಾದ್ದರಿಂದ ಆಕೆಗೆ ಜೀವನ ಪರ್ಯಂತ ಜೈಲು ಶಿಕ್ಷೆ ವಿಧಿಸಲಾಗಿದೆ. ಆಕೆಗೆ ವಿಧಿಸಲಾಗಿರುವ ಶಿಕ್ಷೆಯನ್ನು ಗಮನಿಸಿಕೊಂಡು ಇತರರು ಇಂಥ ಹೇಯ ಕೃತ್ಯ ಮಾಡಲು ಹಿಂದೇಟು ಹಾಕುವಂತಾಗಬೇಕು' ಎಂದು ಹೇಳಿದ್ದಾರೆ. ಆರು ಮಂದಿ ಮಕ್ಕಳನ್ನು ಕೊಲ್ಲುವ ಪ್ರಯತ್ನ ನಡೆಸಿದ ಆರೋಪವೂ ಇರುವ ಆಕೆ ದುರುದ್ದೇಶ ಪೂರ್ವಕವಾಗಿಯೇ ಮಕ್ಕಳನ್ನು ಹತ್ಯೆ ಮಾಡಿದ್ದಾಳೆ. ಇದೊಂದು ವಿಕೃತದ ಪರಮಾವಧಿ. ತನ್ನ ಜೀವನದ ಉಳಿದ ಅವಧಿಯಲ್ಲಿ ಆಕೆ ಜೈಲಿನಲ್ಲಿ ಇದ್ದು, ಕೃತ್ಯವನ್ನೇಕೆ ನಡೆಸಿದೆ ಎಂದು ಯೋಚಿಸಬೇಕು ಎಂದು ತೀರ್ಪಿನಲ್ಲಿ ಹೇಳಿದ್ದಾರೆ. ಆಕೆಯ ಬಂಧನಕ್ಕೆ ಭಾರತೀಯ ಮೂಲದ ವೈದ್ಯ ಡಾ। ರವಿ ಜಯರಾಂ ಕಾರಣರಾಗಿದ್ದರು.

**(ಉದಯವಾಣಿ 22–08–2023)**

===============================================================

## ದಿನಕ್ಕೆ ಗಂಟೆ ಕೆಲಸ: ವರ್ಷಕ್ಕೆ 1 ಕೋಟಿ ಸಂಬಳ

**ಹೊಸದಿಲ್ಲಿ:** ಗೂಗಲ್ ಕಂಪೆನಿಯಲ್ಲಿ ಕೆಲಸ ಮಾಡುತ್ತಿರುವ 23 ವರ್ಷದ ಸಾಫ್ಟ್‌ವೇರ್ ಎಂಜಿನಿಯರ್ ಒಬ್ಬ ದಿನಕ್ಕೆ ಒಂದು ಗಂಟೆ ಮಾತ್ರ ಕೆಲಸ ಮಾಡುತ್ತಾರೆ. ಆದರೆ ವರ್ಷಕ್ಕೆ ಬರೋಬ್ಬರಿ 1.2 ಕೋಟಿ ರೂ. ಸಂಬಳ ಪಡೆಯುತ್ತಿದ್ದಾರೆ.

ದೇವನ್ ಎಂಬ ಅಡ್ಡನಾಮದ ಟೆಕಿ, ಸಂಬಳದ ಜತೆಗೆ ಈ ವರ್ಷ ಬೋನಸ್ ಕೂಡ ಪಡೆದಿದ್ದಾರೆ ಎಂದು ವರದಿಯೊಂದು ತಿಳಿಸಿದೆ. ಗೂಗಲ್ ಉಪಕರಣಗಳು ಹಾಗೂ ಉತ್ಪನ್ನಗಳಿಗೆ ಕೋಡ್ ಬರೆಯುವ ಕೆಲಸವನ್ನು ದೇವನ್ ಮಾಡುತ್ತಾರೆ. ತಮ್ಮ ಬಾಸ್ ನೀಡುವ ವಾರದ ಕೆಲಸವನ್ನು ಅವರು ಕೆಲವೇ ದಿನದಲ್ಲಿ ಪೂರ್ಣಗೊಳಿಸುತ್ತಾರೆ. ಅನಂತರ ಉಳಿದ ದಿನಗಳಲ್ಲಿ ವಿಶ್ರಾಂತಿ ಪಡೆಯುತ್ತಾರೆ. ಕಳೆದ ಬಾರಿ ಪ್ರಾಜೆಕ್ಟ್ ಒಂದನ್ನು ಬೇಗ ಪೂರ್ಣಗೊಳಿಸಿ, ಉಳಿದ ಅವಧಿಯಲ್ಲಿ ರಜೆ ಮೇಲೆ ಹವಾಯ್‌ಗೆ ಪ್ರವಾಸಕ್ಕೆ ಹೋಗಿದ್ದರು.

'ಕೆಲಸ – ಜೀವನದ ಸಮತೋಲನ ಮತ್ತು ಸೌಲಭ್ಯಗಳಿಗಾಗಿ ಅನೇಕ ಉದ್ಯೋಗಿಗಳು ಗೂಗಲ್ ಕಂಪೆನಿಯನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಹಾರ್ಡ್ ವರ್ಕ್ ಮಾಡುವ ಬದಲು ಸ್ಮಾರ್ಟ್ ವರ್ಕ್‌ಗೆ ನಾನು ಮೊರೆ ಹೋಗುತ್ತೇನೆ' ಎಂದು ದೇವನ್ ಹೇಳಿದ್ದಾರೆ. ವಿಶಾಲವಾದ ಕ್ಯಾಂಪಸ್, ಉಚಿತ ಆಹಾರ ಮತ್ತು ದೊಡ್ಡ ಪ್ರಮಾಣದ ಸಂಬಳದ ಕಾರಣ ಗೂಗಲ್ ಕಂಪೆನಿ ಪ್ರಖ್ಯಾತವಾಗಿದೆ.

**(ಉದಯವಾಣಿ 23–08–2023)**

===============================================================

## ಗೋಹತ್ಯೆ ನಿಷೇಧದಿಂದ ರೈತರು ಸಂಕಷ್ಟದಲ್ಲಿ

**ಸಾಯಿನಾಥ್**

**ಬೆಂಗಳೂರು, ಆ.24:** "ತಳಮಟ್ಟದಲ್ಲಿ ರೈತರ ಸಮಸ್ಯೆ, ಕೃಷಿ ಚಟುವಟಿಕೆಗಳ ಅರಿವೇ ಇಲ್ಲದ 'ಈಡಿಯಟ್ಸ್'ಗಳು ಮಾತ್ರ ಗೋಹತ್ಯೆ ನಿಷೇಧಿಸಬೇಕು ಎನ್ನುತ್ತಾರೆ. ಜೊತೆಗೆ ಇಂತಹ ದಡ್ಡರೇ ಗೋರಕ್ಷಣೆ ಹೆಸರಿನಲ್ಲಿ ಕೆಲಸ ಮಾಡುತ್ತಾರೆ" ಎಂದು ರೇಮನ್ ಮ್ಯಾಗ್ಸಸೆ ಪ್ರಶಸ್ತಿ ಪುರಸ್ಕೃತ, ಹಿರಿಯ ಪತ್ರಕರ್ತ ಪಿ. ಸಾಯಿನಾಥ್ ಹೇಳಿದ್ದಾರೆ.

ಗುರುವಾರ ನಗರದ ಅರಮನೆ ರಸ್ತೆಯ ಕೊಂಡಜ್ಜಿ ಸಭಾಂಗಣದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ 'ಪರ್ಯಾಯ ಕೃಷಿ ಧೋರಣೆಗಳು' ಕುರಿತ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, 'ಗೋಹತ್ಯೆ ನಿಷೇಧ ಕಾಯ್ದೆ ಹೆಸರಿನಲ್ಲಿ ರಾಜಕೀಯ ನಡೆಯುತ್ತಿದೆ. ಆದರೆ ವಾಸ್ತವ ಸ್ಥಿತಿಯು ಬೇರೆಯೇ ಇದ್ದು, ರೈತಾಪಿ ವರ್ಗದ ಅಳಲು ಯಾರೂ

ಕೇಳುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಗೋರಕ್ಷಣೆ ಹೆಸರಿನಲ್ಲಿ ಕಾರ್ಯಾಚರಣೆ ನಡೆಸುವವರು, ಗೋಹತ್ಯೆ ನಿಷೇಧಿಸಬೇಕು ಎನ್ನುವವರು ಬಹುದೊಡ್ಡ ದಡ್ಡರು. ಅವರಿಗೆ ರೈತ ವರ್ಗ ಯಾವ ರೀತಿಯ ಸಂಕಷ್ಟದಲ್ಲಿದೆ ಎನ್ನುವುದೇ ಅರಿವಿಲ್ಲ. ಗೋಹತ್ಯೆ ನಿಷೇಧಿಸಿದರೆ ಮೊದಲು ಪೆಟ್ಟು ಬೀಳುವುದು ಶ್ರಮಿಕ ವರ್ಗಕ್ಕೆ. ಜತೆಗೆ, ಪಶುಸಂಗೋಪನೆ ಇಲ್ಲದಂತೆಯೇ ಆಗಲಿದೆ. ಹಾಗೆಯೇ ಚರ್ಮ ಉದ್ಯಮವನ್ನೇ ಆವಲಂಬಿಸಿರುವ ದಲಿತ ಸಮುದಾಯ ಬೀದಿಗೆ ಬರಲಿದೆ. ಹೀಗೆ, ಹಲವು ಕೆಟ್ಟ ಪರಿಣಾಮಗಳನ್ನು ಉಂಟು ಮಾಡುವ ಗೋಹತ್ಯೆ ನಿಷೇಧ ಕಾಯ್ದೆಯನ್ನು ರಾಜಕೀಯ ಲಾಭಕ್ಕಾಗಿ ಮಾತ್ರ ಜಾರಿಗೆ ತರಲಾಗುತ್ತಿದೆ ಎಂದು ಹೇಳಿದರು. ಮಹಾರಾಷ್ಟ್ರದಲ್ಲಿ ಬಿಜೆಪಿ ಸರಕಾರ ಅಧಿಕಾರಕ್ಕೇರಿದ ಬೆನ್ನಲ್ಲೇ ಗೋಹತ್ಯೆ ನಿಷೇಧ ಕಾಯ್ದೆಯನ್ನು ಪರಿಷ್ಕರಿಸಿ ಹಲವು ಕಲಂಗಳನ್ನು ಸೇರ್ಪಡಿಸಲಾಯಿತು.

ಇದು ಮುಖ್ಯವಾಗಿ ಮುಸ್ಲಿಮ್ ಸಮುದಾಯವನ್ನು ಗುರಿಯಾಗಿಸಿಕೊಂಡು ಹಿಂಸೆ ನೀಡುವುದೇ ಆಗಿತ್ತು. ಅದರಲ್ಲೂ ಈ ಕಾಯ್ದೆಯಲ್ಲಿ ಬಜರಂಗದಳ, ವಿಶ್ವಹಿಂದೂ ಪರಿಷತ್ತು ಹಾಗೂ ಸಂಘ ಪರಿವಾರದ ಕಾರ್ಯಕರ್ತರಿಗೆ ದಾಳಿ ನಡೆಸುವ, ಪರಿಶೀಲನೆ ನಡೆಸುವ ಅವಕಾಶವೂ ಕಲ್ಪಿಸಲಾಗಿತ್ತು. ಇದು ಬಹುದೊಡ್ಡ ದುರಂತ ಹಾಗೂ ಸಂವಿಧಾನ ವಿರೋಧಿ ನಡೆ ಎಂದು ಟೀಕಿಸಿದರು.

**(ವಾರ್ತಾಭಾರತಿ 25–08–2023)**

==========================================================================

## ಶಾಲೆಗೆ ಬಾರದೆ 9 ವರ್ಷ ಸಂಬಳ ಪಡೆದ ಶಿಕ್ಷಕ!

**ಶ್ರೀರಂಗಪಟ್ಟಣ, ಆ. 27:** ಶಾಲೆಗೆ ಕರ್ತವ್ಯಕ್ಕೆ ಹಾಜರಾಗದೆ ಹಾಜರಿ ಪುಸ್ತಕದಲ್ಲಿ ನಿರಂತರವಾಗಿ ಸಹಿ ಹಾಕಿ ಶಿಕ್ಷಕನೊಬ್ಬ ಸಂಬಳ ಪಡೆಯುತ್ತಿರುವ ಪ್ರಕರಣ ತಾಲೂಕಿನ ನೆಲಮನೆ ಗ್ರಾಮದ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಬೆಳಕಿಗೆ ಬಂದಿದೆ.

ಕಾಡಪ್ಪ ಗೋಳ ಎಂ.ಬಿ. ಎಂಬ ಸಹಶಿಕ್ಷಕ ಶಾಲೆಗೇ ಬಾರದೆ ಸಂಬಳವನ್ನು 2023 ಜೂನ್‌ವರೆಗೂ ಪಡೆದಿದ್ದಾನೆಂದು ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷರು, ಸದಸ್ಯರು ಸೇರಿದಂತೆ ಗ್ರಾಮಸ್ಥರು ಆರೋಪಿಸಿದ್ದಾರೆ. ಈ ಶಿಕ್ಷಕ 2014ರಲ್ಲಿ ಕರ್ತವ್ಯಕ್ಕೆ ಹಾಜರಾಗಿದ್ದು, ಕೇವಲ 2ವರ್ಷಗಳಷ್ಟೇ. ಅನಂತರ ಕರ್ತವ್ಯಕ್ಕೆ ಹಾಜರಾಗದಿದ್ದರೂ ಚಾಚೂ ತಪ್ಪದೆ ಕಾಲ ಕಾಲಕ್ಕೆ ಸಂಬಳ ಮಾತ್ರ ಪಡೆದಿದ್ದಾನೆ. ಇದರ ಹಿಂದೆ ಹಿರಿಯ ಅಧಿಕಾರಿಗಳ ಕೈವಾಡವಿರುವುದಾಗಿ ಗ್ರಾಮಸ್ಥರು ಆರೋಪಿಸಿದ್ದಾರೆ. **(ಉದಯವಾಣಿ 28–08–2023)**

==========================================================================

## ತಾಯಿಯ ಬೆತ್ತಲೆಗೊಳಿಸಿ, ಮಗನ ಹತ್ಯೆ

### * ಮಧ್ಯಪ್ರದೇಶದಲ್ಲಿ ದಲಿತ ಕುಟುಂಬದ ಮೇಲೆ ಅಮಾನುಷ ದಾಳಿ * ಪೊಲೀಸರಿಂದ ಕೊಲೆ ಪ್ರಕರಣ ದಾಖಲು

**ಭೋಪಾಲ್:** ಮಧ್ಯಪ್ರದೇಶದಲ್ಲಿ ದುಷ್ಕರ್ಮಿಗಳ ಗುಂಪೊಂದು ದಲಿತ ಕುಟುಂಬದ ಮೇಲೆ ಅಮಾನುಷವಾಗಿ ದಾಳಿ ನಡೆಸಿ, ದಲಿತ ಮಹಿಳೆಯನ್ನು ವಿವಸ್ತ್ರಗೊಳಿಸಿ, ಆಕೆಯ 18 ವರ್ಷದ ಪುತ್ರನನ್ನು ಥಳಿಸಿ ಕೊಂದಿರುವ ಘಟನೆ ವರದಿಯಾಗಿದೆ. ಸಾಗರ ಜಿಲ್ಲೆಯಲ್ಲಿ ಈ ಕೃತ್ಯ ನಡೆದಿದೆ. 2019ರಲ್ಲಿ ದಲಿತ ಸಮುದಾಯದ ಯುವತಿಯೊಬ್ಬರು ನಾಲ್ವರ ವಿರುದ್ಧ ಲೈಂಗಿಕ ಕಿರುಕುಳದ ಪ್ರಕರಣ ದಾಖಲಿಸಿದ್ದರು. ಈಗ ಆ ಕೇಸನ್ನು ವಾಪಸ್ ಪಡೆಯುವಂತೆ ಪೀಡಿಸಿ, ದುಷ್ಕರ್ಮಿಗಳ ಗುಂಪು ಯುವತಿ ಮನೆಗೆ ಲಗ್ಗೆ ಇಟ್ಟಿದೆ. ಆಕೆಯನ್ನು ಥಳಿಸಿದ್ದು ಮಾತ್ರವಲ್ಲದೇ, ಯುವತಿಯ 18 ವರ್ಷದ ತಮ್ಮನನ್ನು ಹೊಡೆದು ಕೊಂದು ಹಾಕಿದ್ದಾರೆ. ಜತೆಗೆ ಯುವತಿಯ ತಾಯಿಯನ್ನು ವಿವಸ್ತ್ರಗೊಳಿಸಿ ಕ್ರೌರ್ಯ ಮೆರೆದಿದ್ದಾರೆ.

'ಘಟನೆ ನಡೆದ ಬಳಿಕ ಪೊಲೀಸರು ಸ್ಥಳಕ್ಕಾಗಮಿಸಿ ನನಗೆ ಟವೆಲ್ ನೀಡಿದರು. ನನಗಾಗಿ ಬೇರೆ ಸೀರೆ ಹುಡುಕಿ ತರುವವರೆಗೂ ನಾನು ಟವಲ್ ಧರಿಸಿಯೇ ಇದ್ದೆ. ನನ್ನ ಮಗನನ್ನು ತೀವ್ರವಾಗಿ ಥಳಿಸಿದ್ದರಿಂದ ಆತ ಮೃತಪಟ್ಟಿದ್ದಾನೆ' ಎಂದು ಯುವತಿಯ ತಾಯಿ ಹೇಳಿಕೊಂಡಿದ್ದಾರೆ. ಇನ್ನು ದಷ್ಕರ್ಮಿಗಳು ಸಂತ್ರಸ್ತರ ಮನೆಯನ್ನು ಧ್ವಂಸಗೊಳಿಸಿದ್ದಲ್ಲದೇ, ಅಕ್ಕ–ಪಕ್ಕದಲ್ಲಿದ್ದ ನೆಂಟರಿಷ್ಟರ ಮನೆಗೂ ನುಗ್ಗಿ ಯಾರೂ ಸಹಾಯ ಮಾಡಬಾರದೆಂದು ಬೆದರಿಕೆ ಹಾಕಿ ಹೋಗಿದ್ದಾರೆ ಎಂದೂ ಯುವತಿಯ ಕುಟುಂಬಸ್ಥರು ಆರೋಪಿಸಿದೆ.

ಈ ಸಂಬಂಧಿಸಿದಂತೆ ಪೊಲೀಸರು 12 ಮಂದಿ ವಿರುದ್ಧ ಕೊಲೆ ಪ್ರಕರಣ ದಾಖಲಿಸಿ, 8 ಮಂದಿಯನ್ನು ಬಂಧಿಸಿದ್ದಾರೆ. ಉಳಿದ ಆರೋಪಿಗಳಿಗಾಗಿ ಹುಡುಕಾಟ ನಡೆಸುತ್ತಿರುವುದಾಗಿ ತಿಳಿಸಿದ್ದಾರೆ. ಇತ್ತ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಹಾಗೂ ದಲಿತರ ಮೇಲಿನ ದೌರ್ಜನ್ಯ ತಡೆಗಟ್ಟುವಲ್ಲಿ ರಾಜ್ಯ ಸರಕಾರ ವಿಫಲವಾಗಿದೆ ಎಂದು ಬಿಜೆಪಿ ವಿರುದ್ಧ ಕಾಂಗ್ರೆಸ್ ಹರಿಹಾಯ್ದರೇ, ಸಾವಲ್ಲೂ ಕಾಂಗ್ರೆಸ್ ರಾಜಕಾರಣ ಮಾಡುತ್ತಿದೆ ಎಂದು ಬಿಜೆಪಿ ಆರೋಪಿಸಿದೆ. **(ಉದಯವಾಣಿ 29–08–2023)**

## 9ನೇ ತರಗತಿ ವಿದ್ಯಾರ್ಥಿಗೆ 9 ಸಲ ಕಚ್ಚಿದ ಸರ್ಪ!

**ವಾಡಿ, ಆ. 29:** ಹಾವು ಕಣ್ಣಿಗೆ ಬಿದ್ದರೆ ಸಾಕು ಎದೆಯೊಡೆಯುತ್ತದೆ. ಇನ್ನೂ ಸರ್ಪ ಕಚ್ಚಿತೆಂದರೆ ಹೃದಯದ ಬಡಿತವೇ ನಿಂತು ಬಿಡುತ್ತದೆ. ಆದರೆ ಇಲ್ಲೊಬ್ಬ ಹುಡುಗನಿಗೆ ಹಾವು ಪದೇ ಪದೇ ಕಚ್ಚುತ್ತಿದ್ದು, ಅದರ ಕಾಟಕ್ಕೆ ಬೇಸತ್ತು ಊರು ತೊರೆದು ಮತ್ತೊಂದು ಊರಿಗೆ ಹೋಗಿ ನೆಲೆಸಿದರೂ ಅಲ್ಲಿಯೂ ಕಚ್ಚಿದೆ. ಬರೋಬ್ಬರಿ ಒಂಬತ್ತು ಸಲ ಹಾವು ಕಚ್ಚಿದ್ದು, ಬಾಲಕನ ಕುಟುಂಬಸ್ಥರ ನೆಮ್ಮದಿ ಕೆಡಿಸಿದೆ.

ಕಲಬುರುಗಿ ಜಿಲ್ಲೆಯ ಚಿತ್ತಾಪುರ ತಾಲೂಕಿನ ನಾಲವಾರ ವಲಯದ ಹಳಕರ್ಟಿ ಗ್ರಾಮದಲ್ಲಿ ಈ ಘಟನೆ ಬೆಳಕಿಗೆ ಬಂದಿದೆ. ಗ್ರಾಮದ ನಿವಾಸಿ ವಿಜಕುಮಾರ ರಾವೂರಕರ ಅವರ ಪುತ್ರ ರಾವೂರ ಶ್ರೀ ಸಿದ್ಧಲಿಂಗೇಶ್ವರ ವಿದ್ಯಾಭಿವೃದ್ಧಿ ಸಂಸ್ಥೆಯಲ್ಲಿ ಒಂಬತ್ತನೇ ತರಗತಿಯಲ್ಲಿ ಓದುತ್ತಿರುವ ಪ್ರಜ್ವಲ್ ವಿಜಯಕುಮಾರ (13) ಪದೇ ಪದೇ ಹಾವು ಕಡಿತಕ್ಕೊಳಗಾಗುತ್ತಿದ್ದ. ಆರಂಭದಲ್ಲಿ ಆರು ಸಲ ಮನೆಯಲ್ಲೇ ಕಾಲಿಗೆ ಕಡಿದಿತ್ತು. ಇದರಿಂದ ಬೇಸತ್ತು ಊರು ತೊರೆದು ವಾಡಿ ಪಟ್ಟಣದ ಬಳಿರಾಮ ಚೌಕ್ ಬಡವಾಣೆಯಲ್ಲಿ ಬಾಡಿಗೆ ಮನೆ ಪಡೆದು ವಾಸವಿದ್ದರೂ ಬಿಡದ ಸರ್ಪ ಮೂರು ಸಲ ಕೈ ಬೆರಳಿಗೆ ಕಡಿದಿದೆ. ಆ. 26ರಂದು ಬಾಲಕನಿಗೆ ಹಾವು ಕಡಿದಿದ್ದು, ಸದ್ಯ ಕಲಬುರಗಿ ಜಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ಒಂಬತ್ತು ಬಾರಿ ಹಾವು ಕಡಿದರೂ ಮಗನ ಪ್ರಾಣಕ್ಕೆ ತೊಂದರೆಯಾಗಿಲ್ಲ. ಚಿಕಿತ್ಸೆ ಪಡೆದು ಆರೋಗ್ಯವಾಗಿದ್ದಾನೆ. ಈ ಹಾವುಗಳು ನಮ್ಮ ಮಗನ ಬೆನ್ನಟ್ಟಿದ್ದೇಕೆ ಎಂಬುದೇ ಅರ್ಥವಾಗುತ್ತಿಲ್ಲ ಎಂದು ಆತನ ತಂದೆ ವಿಜಕುಮಾರ ರಾವೂರಕರ 'ಉದಯವಾಣಿ' ಜತೆ ಆತಂಕ ವ್ಯಕ್ತಪಡಿಸಿದ್ದಾರೆ. **(ಉದಯವಾಣಿ 30–08–2023)**

==========================================================================

## ರಕ್ಷಾ ಬಂಧನದಂದೇ ಅಪ್ರಾಪ್ತೆಯರ ಮೇಲೆ ಸಾಮೂಹಿಕ ಅತ್ಯಾಚಾರ

**ರಾಯ್ಪುರ:** ರಕ್ಷಾ ಬಂಧನದ ಸಂಭ್ರಮ ಮುಗಿಸಿಕೊಂಡು ಹಿಂದಿರುಗುತ್ತಿದ್ದ ಇಬ್ಬರು ಅಪ್ರಾಪ್ತ ವಯಸ್ಕ ಸಹೋದರಿಯರ ಮೇಲೆ ಹತ್ತು ಮಂದಿಯ ಗುಂಪೊಂದು ಸಾಮೂಹಿಕ ಅತ್ಯಾಚಾರ ನಡೆಸಿದ ಘಟನೆ ಛತ್ತೀಸಗಢದ ರಾಯ್ಪುರದಲ್ಲಿ ನಡೆದಿದೆ. ಇಬ್ಬರು ಬಾಲಕಿಯರು ತಮ್ಮ ಸಂಬಂಧಿಯೊಂದಿಗೆ ಮನೆಗೆ ಮರಳುತ್ತಿದ್ದರು. ಈ ವೇಳೆ ಅವರನ್ನು ಅಡ್ಡ ಹಾಕಿದ ಮೂವರು ಆರೋಪಿಗಳು, ಅವರಿಂದ ಮೊಬೈಲ್ ಮತ್ತು ನಗದನ್ನು ದರೋಡೆ ಮಾಡಿದ್ದಾರೆ. ಅನಂತರ ನಾಲ್ಕು ಬೈಕ್‌ಗಳಲ್ಲಿ ಉಳಿದ 7 ಮಂದಿ ಆರೋಪಿಗಳು ಸ್ಥಳಕ್ಕೆ ಬಂದಿದ್ದಾರೆ. ಬಾಲಕಿಯರ ಸಂಬಂಧಿಯನ್ನು ಆರೋಪಿಗಳು ಹಿಗ್ಗಾಮುಗ್ಗಾ ಥಳಿಸಿದ್ದಾರೆ. ಬಳಿಕ ಇಬ್ಬರು ಬಾಲಕಿಯರನ್ನು ನಿರ್ಜನ ಪ್ರದೇಶಕ್ಕೆ ಕರೆದುಕೊಂಡು ಹೋಗಿ ಸಾಮೂಹಿಕ ಅತ್ಯಾಚಾರ ನಡೆಸಿದ್ದಾರೆ. ಘಟನೆ ಸಂಬಂಧ ಸ್ಥಳೀಯ ಬಿಜೆಪಿ ನಾಯಕನ ಪುತ್ರ ಸೇರಿದಂತೆ ಒಟ್ಟು 10 ಮಂದಿ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಪ್ರಕರಣದ ಪ್ರಮುಖ ಆರೋಪಿ ಪೂನಂ ಠಾಕೂರ್ ಇತ್ತೀಚೆಗೆ ಜಾಮೀನಿನ ಮೇಲೆ ಜೈಲಿನಿಂದ ಹೊರಬಂದಿದ್ದಾನೆ. ಈತ ಸ್ಥಳೀಯ ನಾಯಕ ಲಕ್ಷ್ಮೀ ನಾರಾಯಣ ಸಿಂಗ್ ಪುತ್ರನಾಗಿದ್ದಾನೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. **(ಉದಯವಾಣಿ 03–09–2023)**

==========================================================================

## ಪತ್ನಿಯನ್ನೇ ಬೆತ್ತಲೆ ಮೆರವಣಿಗೆ ಮಾಡಿದ!

**ಜೈಪುರ:** ಬುಡಕಟ್ಟು ಮಹಿಳೆಯೊಬ್ಬರನ್ನು ಬೆತ್ತಲೆಗೊಳಿಸಿ, ಗ್ರಾಮದಲ್ಲಿ ಸಾರ್ವಜನಿಕವಾಗಿ ಮೆರವಣಿಗೆ ನಡೆಸಿರುವ ಅಮಾನುಷ ಘಟನೆ ರಾಜಸ್ಥಾನದ ಪ್ರತಾಪಗಢ ಜಿಲ್ಲೆಯಲ್ಲಿ ವರದಿಯಾಗಿದೆ. ವಿಪರ್ಯಾಸವೆಂದರೆ ಈ ಕೃತ್ಯವನ್ನು ನಡೆಸಿರುವುದೇ ಮಹಿಳೆಯ ಪತಿ! ಗುರುವಾರ ರಾತ್ರಿ 21 ವರ್ಷದ ಯುವತಿಯನ್ನು ಆಕೆಯ ಪತಿ ವಿಪರೀತವಾಗಿ ಥಳಿಸಿದ್ದಲ್ಲದೇ, ಆಕೆಯನ್ನು ವಿವಸ್ತ್ರಗೊಳಿಸಿ ಮನೆಯಿಂದ ಹೊರದೂಡಿ, ಮೆರವಣಿಗೆ ನಡೆಸಿದ್ದಾನೆ. ಈ ವೇಳೆ ಮಹಿಳೆ ಸಹಾಯಕ್ಕಾಗಿ ಅಂಗಲಾಚಿದ್ದಾರೆ, ಅದನ್ನೂ ವೀಡಿಯೋ ಮಾಡಿ, ಜಾಲತಾಣದಲ್ಲಿ ಹರಿಬಿಡಲಾಗಿದೆ. ವೀಡಿಯೋ ವೈರಲ್ ಆಗುತ್ತಿದ್ದಂತೆ ಸಿಎಂ ಅಶೋಕ್ ಗೆಹ್ಲೋಟ್ ಈ ಬಗ್ಗೆ ಕಠಿನ ಕ್ರಮಕ್ಕೆ ಆದೇಶಿಸಿದ್ದರು. ಅನಂತರ ಪೊಲೀಸರು 6 ತಂಡಗಳನ್ನು ರಚಿಸಿ, ಮಹಿಳೆಯ ಪತಿ ಸೇರಿದಂತೆ 10 ಮಂದಿಯನ್ನು ಬಂಧಿಸಿದ್ದಾರೆ.

ಕಾರಣವೇನು?: ಮದುವೆಯಾಗಿದ್ದರೂ ಮಹಿಳೆ ಬೇರೆಯವರೊಂದಿಗೆ ವಿವಾಹೇತರ ಸಂಬಂಧದಲ್ಲಿದ್ದು, ಆ ವ್ಯಕ್ತಿಯೊಂದಿಗೇ ವಾಸವಿದ್ದರಂತೆ. ಈ ಹಿನ್ನಲೆಯಲ್ಲಿ ಮಹಿಳೆಯ ಪತಿ, ಮಾವ ಸೇರಿದಂತೆ ಇತರರು ಸೇರಿ ಆಕೆಯನ್ನು ಅಪಹರಿಸಿ, ತಮ್ಮ ಊರಿಗೆ ಎಳೆದು ತಂದು ಕೃತ್ಯ ಎಸಗಿದ್ದಾರೆಂದು ಪೊಲೀಸರು ತಿಳಿಸಿದ್ದಾರೆ. **(ಉದಯವಾಣಿ 03–09–2023)**

==========================================================================

## ಶಬರಿಮಲೆ ಭೇಟಿಗಾಗಿ ಪಾದ್ರಿ ಸ್ಥಾನಕ್ಕೆ ರಾಜೀನಾಮೆ!

**ತಿರುವನಂತಪುರ:** ಮಾಲೆ ಧರಿಸಿ ವ್ರತ ತೊಟ್ಟು ಶಬರಿಮಲೆ ಸ್ವಾಮಿ ಅಯ್ಯಪ್ಪ ದೇಗುಲಕ್ಕೆ ಭೇಟಿ ನೀಡುವ ತಮ್ಮ ಹೆಬ್ಬಯಕೆಯಿಂದಾಗಿ ಕೇರಳದ ಚರ್ಚ್‌ವೊಂದರ ಪಾದ್ರಿಯೊಬ್ಬರು ಚರ್ಚ್ ನಿರ್ವಹಣೆಗೆ ತಮಗೆ ನೀಡಿದ್ದ ಪರವಾನಿಗೆಯನ್ನು ಹಿಂದಿರುಗಿಸಿದ್ದಾರೆ. ಆಂಗ್ಲಿಕನ್ ಚರ್ಚ್ ಆಫ್ ಇಂಡಿಯಾದ ಪಾದ್ರಿ ರೆ। ಮನೋಜ್ ಕೆ.ಜಿ. ಅವರು ಶಬರಿಮಲೆ ತೀರ್ಥಕ್ಷೇತ್ರಕ್ಕೆ ಭೇಟಿ ನೀಡಲು ಇದೇ ತಿಂಗಳು ಮಾಲೆ

ಧರಿಸಿ 41 ದಿನಗಳ ಸಾಂಪ್ರದಾಯಿಕ ವ್ರತ ಆಚರಿಸಲು ನಿರ್ಧರಿಸಿದ್ದಾರೆ.

'ನನ್ನ ಈ ನಿರ್ಧಾರದ ಮಾಹಿತಿ ತಿಳಿದ ಚರ್ಚ್, ಇಂತಹ ನಡವಳಿಕೆಯು ಸ್ವೀಕಾರಾರ್ಹವಲ್ಲ. ನೀವು ಚರ್ಚ್‌ನ ಸಿದ್ಧಾಂತಗಳನ್ನು ಮತ್ತು ನಿಯಮಗಳನ್ನು ಉಲ್ಲಂಘಿಸಿದ್ದೀರಿ ಎಂದಿದ್ದಲ್ಲದೇ, ಅದಕ್ಕೆ ಕಾರಣ ನೀಡುವಂತೆ ವಿವರಣೆ ಕೇಳಿದೆ. ಇದಕ್ಕೆ ಸ್ಪಷ್ಟನೆ ನೀಡುವ ಬದಲು, ಪಾದ್ರಿಯಾದ ಸಂದರ್ಭದಲ್ಲಿ ಚರ್ಚ್ ನಿರ್ವಹಣೆಗೆ ನೀಡಿದ್ದ ಐಡಿ ಕಾರ್ಡ್ ಮತ್ತು ಪರವಾನಿಗೆಯನ್ನು ಹಿಂದಿರುಗಿಸಿದ್ದೇನೆ' ಎಂದು ರೆ। ಮನೋಜ್ ತಿಳಿಸಿದ್ದಾರೆ.

'ನಾನು ಚರ್ಚ್‌ನ ಸಿದ್ಧಾಂತ ಮತ್ತು ನಿಯಮಗಳನ್ನು ಉಲ್ಲಂಘಿಸಿಲ್ಲ, ನನ್ನ ಕೆಲಸಗಳು ಚರ್ಚ್‌ನ ಸಿದ್ಧಾಂತಗಳ ಆಧಾರವಲ್ಲ, ಬದಲಾಗಿ ನನ್ನ ಕಾರ್ಯಗಳು ಭಗವಂತನ ಸೂಚನೆಗಳಿಗೆ ಆಧಾರವಾಗಿದೆ. ನಾನು ಯಾವ ತಪ್ಪನ್ನೂ ಮಾಡಿಲ್ಲ. ಹಿಂದೂ ಧರ್ಮವನ್ನು ಅದರ ಆಚರಣೆಗೆ ಮೀರಿ ಅರ್ಥೈಸಿಕೊಳ್ಳುವುದು ನನ್ನ ಉದ್ದೇಶವಾಗಿದೆ' ಎಂದು ಹೇಳಿದ್ದಾರೆ. ಪಾದ್ರಿಯಾಗುವ ಮೊದಲು ಮನೋಜ್ ಅವರು ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದರು. **(ಉದಯವಾಣಿ 11–09–2023)**

==========

## ಮದ್ರಸಾಗಳಲ್ಲಿ ಸಂಸ್ಕೃತ ಪಾಠ!

## ಎನ್‌ಸಿಇಆರ್‌ಟಿ ಪಠ್ಯಕ್ರಮ ಅಳವಡಿಕೆಗೆ ಉತ್ತರಾಖಂಡ ವಕ್ಫ್ ಮಂಡಳಿ ನಿರ್ಧಾರ

**ಡೆಹ್ರಾಡೂನ್:** ವಕ್ಫ್ ಮಂಡಳಿ ವ್ಯಾಪ್ತಿಯಲ್ಲಿ ಬರುವ ಮದ್ರಸಾಗಳಲ್ಲಿ ಇಸ್ಲಾಮ್ ತತ್ವಗಳನ್ನು ಕಲಿಸುವುದು ಸಹಜ ವಿದ್ಯಮಾನ. ಇಷ್ಟೆಲ್ಲದರ ಮಧ್ಯೆ ಉತ್ತರಾಖಂಡ ವಕ್ಫ್ ಮಂಡಳಿ, ಮದ್ರಸಾಗಳಲ್ಲಿ ಸಂಸ್ಕೃತ ಕಲಿಸಲು ತೀರ್ಮಾನಿಸಿದೆ! ಆರಂಭಿಕ ಹಂತದಲ್ಲಿ ರಾಜ್ಯದ 4 ಮದ್ರಸಾಗಳಲ್ಲಿ ಪ್ರಾಯೋಗಿಕವಾಗಿ ಇದನ್ನು ಪರೀಕ್ಷಿಸಲಾಗುವುದು, ಅನಂತರ ಉಳಿದ ಕಡೆ ಇದನ್ನು ವಿಸ್ತರಿಸಲಾಗುವುದು ಎಂದು ಉತ್ತರಾಖಂಡ ವಕ್ಫ್ ಮಂಡಳಿ ಸಿಇಒ ಶಿರಾಝ್ ಹುಸೇನ್ ಹೇಳಿದ್ದಾರೆ.

ಈ ಬೆಳವಣಿಗೆಗೆ ಮುಖ್ಯ ಕಾರಣ ಎನ್‌ಸಿಇಆರ್‌ಟಿ ಪಠ್ಯವನ್ನು ಮದ್ರಸಾಗಳಲ್ಲಿ ಅಳವಡಿಸಲು ಅಲ್ಲಿನ ವಕ್ಫ್ ಮಂಡಳಿ ತೀರ್ಮಾನಿಸಿರುವುದು. ಎನ್‌ಸಿಇಆರ್‌ಟಿ ಪಠ್ಯದಲ್ಲಿ ಸಂಸ್ಕೃತ ಮಾಮೂಲಿ. ಅದರ ಭಾಗವಾಗಿ ವಿದ್ಯಾರ್ಥಿಗಳು ಸಂಸ್ಕೃತ ಭಾಷೆಯನ್ನು ಕಲಿಯಬೇಕಾಗುತ್ತದೆ. ಇದು ಮಹತ್ವದ ಬೆಳವಣಿಗೆಯಾಗಿದೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ಉತ್ತರಾಖಂಡ ವಕ್ಫ್ ಮುಖ್ಯಸ್ಥ ಶದಾಬ್ ಶಾಮ್ಸ್, ಯಾವುದೇ ಭಾಷೆಯನ್ನು ಯಾವುದೇ ಧರ್ಮದೊಂದಿಗೆ ತಳುಕು ಹಾಕಬಾರದು. ಪ್ರತಿಯೊಬ್ಬರೂ ಭಾಷೆಯನ್ನು ಕಲಿಯುವ ಹಕ್ಕು ಹೊಂದಿದ್ದಾರೆ. ಉತ್ತರಾಖಂಡದಲ್ಲಿ ಸಂಸ್ಕೃತ ಅಧಿಕೃತ ಭಾಷೆಗಳಲ್ಲಿ ಒಂದು. ಎನ್‌ಸಿಇಆರ್‌ಟಿಸಿ ಪಠ್ಯದಂತೆ ಇಂಗ್ಲಿಷ್, ಹಿಂದಿ ಜತೆಗೆ ಸಂಸ್ಕೃತವನ್ನು ಒಂದು ವಿಷಯವನ್ನಾಗಿ ಕಲಿಸಲು ತೀರ್ಮಾನಿಸಲಾಗಿದೆ. ಹಲವು ಪೋಷಕರೂ ಕೂಡ ತಮ್ಮ ಮಕ್ಕಳು ಇತರೆ ಮಕ್ಕಳಂತೆ ಎಲ್ಲ ವಿಷಯಗಳನ್ನು ಕಲಿಯಲಿ ಎಂದು ಬಯಸುತ್ತಿದ್ದಾರೆ ಎಂದು ಹೇಳಿದ್ದಾರೆ.

ಮದ್ರಸಾಗಳಲ್ಲಿ ಎನ್‌ಸಿಇಆರ್‌ಟಿ ಪಠ್ಯ ಅಳವಡಿಕೆ, ಜತೆಗೆ ಸಂಸ್ಕೃತವನ್ನೂ ಕಲಿಸಲು ಹೊರಟಿರುವುದು ದೇಶದ ಹಲವು ಮದ್ರಸಾಗಳಲ್ಲಿ ಧನಾತ್ಮಕ ಬದಲಾವಣೆಗೆ ಕಾರಣವಾಗಬಹುದು ಎಂದು ವಿಶ್ಲೇಷಿಸಲಾಗಿದೆ. **(ಉದಯವಾಣಿ 14–09–2023)**

==========

## 168 ಇಲಿ ಹಿಡಿಯಲು 69.5 ಲಕ್ಷ ರೂ.!

**ಹೊಸದಿಲ್ಲಿ:** ಇಲಿಗಳು ಬಹಳ ಕಾಟ ಕೊಡುತ್ತವೆ ಅನ್ನುವುದೇನೋ ಸತ್ಯ. ಆದರೆ ಅವುಗಳನ್ನು ಹಿಡಿಯಲಿಕ್ಕೆ ಎರಡು ವರ್ಷದಲ್ಲಿ ಗರಿಷ್ಠವೆಂದರೆ ಎಷ್ಟು ಖರ್ಚು ಮಾಡಲು ಸಾಧ್ಯ? ಉತ್ತರ ರೈಲ್ವೇಗೆ ಸೇರಿದ ಲಕ್ನೋ ವಿಭಾಗ 69.5 ಲಕ್ಷ ರೂ.ಗಳನ್ನು ವ್ಯಯಿಸಿದೆ. 2020–22ರ ಅವಧಿಯಲ್ಲಿ 168 ಇಲಿಗಳನ್ನು ಹಿಡಿಯಲು ಇಷ್ಟು ಹಣ ಖರ್ಚಾಗಿದೆ. ಅರ್ಥಾತ್ ಒಂದು ಇಲಿಗೆ 41,000 ರೂ.! ಮಧ್ಯಪ್ರದೇಶದ ಆರ್‌ಟಿಐ ಕಾರ್ಯಕರ್ತ ಚಂದ್ರಶೇಖರ್ ಗೌರ್ ಸಲ್ಲಿಸಿದ್ದ ಅರ್ಜಿಗೆ ಇಂತಹದ್ದೊಂದು 'ದುಬಾರಿ' ಮಾಹಿತಿ ಸಿಕ್ಕಿದೆ. ಇಲಿ ಹಿಡಿಯಲಿಕ್ಕೆಂದೇ ಲಕ್ನೋದಲ್ಲಿರುವ ಸೆಂಟ್ರಲ್ ವೇರ್ ಹೌಸಿಂಗ್ ಕಾರ್ಪೋರೇಶನ್‌ಗೆ ಗುತ್ತಿಗೆ ನೀಡಲಾಗಿತ್ತು. **(ಉದಯವಾಣಿ 17–09–2023)**

==========

## ಮ.ಪ್ರ: ಬಾಲಕಿಯ ಅತ್ಯಾಚಾರ

## ಆಟೋಚಾಲಕನ ಬಂಧನ: ಐವರ ವಿಚಾರಣೆ

**ಉಜ್ಜಯಿನಿ, ಸೆ. 28:** ಮಧ್ಯಪ್ರದೇಶದ ಉಜ್ಜಯಿಸಿ ನಗರದಲ್ಲಿ ಬಾಲಕಿಯ ಅತ್ಯಾಚಾರ ನಡೆದಿದ್ದು, ಪ್ರಕರಣಕ್ಕೆ ಸಂಬಂಧಿಸಿ ಪೊಲೀಸರು ಓರ್ವ ಆಟೋರಿಕ್ಷಾ ಚಾಲಕನನ್ನು ಗುರುವಾರ ಬಂಧಿಸಿದ್ದಾರೆ. ಇತರ ಐವರನ್ನು ಕೂಡಾ ಪ್ರಶ್ನಿಸಲಾಗುತ್ತಿದೆಯೆಂದು ಹಿರಿಯ ಅಧಿಕಾರಿಯೊಬ್ಬರು ಗುರುವಾರ ತಿಳಿಸಿದ್ದಾರೆ.

ಬಂಧಿತ ಆರೋಪಿಯ ಆಟೋರಿಕ್ಷಾದ ಪ್ರಯಾಣಿಕ ಸೀಟಿನಲ್ಲಿ ರಕ್ತದ ಕಲೆಗಳಿದ್ದುದನ್ನು ಕೂಡಾ ಪೊಲೀಸರು ಪತ್ತೆ ಹಚ್ಚಿದ್ದಾರೆ. 12

ವರ್ಷ ವಯಸ್ಸಿನ ಈ ಬಾಲಕಿಯು ಉಜ್ಜಯಿನಿಯ ಮಹಾಕಾಲ್ ಪೊಲೀಸ್ ಠಾಣಾ ವ್ಯಾಪ್ತಿಯ ಪ್ರದೇಶದಲ್ಲಿನ ರಸ್ತೆಯಲ್ಲಿ ತೀವ್ರ ರಕ್ತಸ್ರಾವಗೊಂಡ ಸ್ಥಿತಿಯಲ್ಲಿ ಪತ್ತೆಯಾಗಿದ್ದಳು.

ಅನಂತರ ಆಕೆಯನ್ನು ಆಸ್ಪತ್ರೆಗೆ ಪೊಲೀಸರು ಕರೆದೊಯ್ದಿದ್ದರು. ಆಕೆಯ ಮೇಲೆ ಅತ್ಯಾಚಾರ ನಡೆದಿರುವುದು ವೈದ್ಯಕೀಯ ಪರೀಕ್ಷೆಯಿಂದ ದೃಢಪಟ್ಟಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಸಂತ್ರಸ್ತ ಬಾಲಕಿಯು ಸತ್ನಾ ಜಿಲ್ಲೆಯವಳೆಂದು ಆಕೆಯ ಜೊತೆ ಸಂಭಾಷಣೆ ನಡೆಸಿದ ಆಪ್ತಸಮಾಲೋಚಕಿ (ಕೌನ್ಸೆಲರ್)ಯೊಬ್ಬರು ತಿಳಿಸಿದ್ದಾರೆ. ಸತ್ನಾ ಜಿಲ್ಲೆಯ ಜೈತ್ವಾರಾ ಪೊಲೀಸ್ ಠಾಣೆಯಲ್ಲಿ ಬಾಲಕಿಯೊಬ್ಬಳ ನಾಪತ್ತೆ ಪ್ರಕರಣಕ್ಕೆ ಸಂಬಂಧಿಸಿ ಸೆಪ್ಟಂಬರ್ 25ರಂದು ದೂರು ದಾಖಲಾಗಿತ್ತೆಂದು ಉಜ್ಜಯಿನಿ ಎಸ್ಪಿ ಸಚಿನ್ ಶರ್ಮಾ ತಿಳಿಸಿದ್ದಾರೆ.

ಸಿಸಿ ಟಿವಿ ವೀಡಿಯೊದ ಆಧಾರದಲ್ಲಿ ಪೊಲೀಸರು ಆಟೋರಿಕ್ಷಾ ಚಾಲಕನನ್ನು ವಶಕ್ಕೆ ತೆಗೆದುಕೊಂಡಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿ ಇತರ ಐವರನ್ನು ಕೂಡಾ ವಿಚಾರಣೆಗೊಳಪಡಿಸಲಾಗಿದೆಯೆಂದು ಅವರು ಹೇಳಿದ್ದಾರೆ.

ಇಂದೋರ್‌ನಲ್ಲಿ ತಜ್ಞ ವೈದ್ಯರ ತಂಡವೊಂದು ಬಾಲಕಿಗೆ ಶಸ್ತ್ರಚಿಕಿತ್ಸೆ ನಡೆಸಿದೆ. ಆಕೆಯ ಪರಿಸ್ಥಿತಿ ಗಂಭೀರವಾಗಿದ್ದರೂ, ಸ್ಥಿರವಾಗಿದೆಯೆಂದು ಪೊಲೀಸರು ತಿಳಿಸಿದ್ದಾರೆ.

ಘಟನೆಗೆ ಸಂಬಂಧಿಸಿ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಶಿವರಾಜ್ ಸಿಂಗ್ ಚೌಹಾಣ್ ಸರಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ. ರಾಜ್ಯದಲ್ಲಿ ಬಿಜೆಪಿಯ 20 ವರ್ಷಗಳ ದುರಾಡಳಿತದಿಂದಾಗಿ ಬಾಲಕಿಯರು, ಮಹಿಳೆಯರು, ಬುಡಕಟ್ಟು ಜನರು ಹಾಗೂ ದಲಿತರು ಸುರಕ್ಷಿತರಾಗಿ ಉಳಿದಿಲ್ಲವೆಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಲೈಂಗಿಕ ದೌರ್ಜನ್ಯಕ್ಕೊಳಗಾಗಿದ್ದ ಆಕೆ ಸುಮಾರು ಎರಡೂವರೆ ತಾಸುಗಳ ಕಾಲ ಸಹಾಯ ಯಾಚಿಸಿ ಮನೆಯಿಂದ ಮನೆಗೆ ಅಲೆದಾಡಿದ್ದಳು. ಆದರೆ ಯಾರೂ ಸಹಾಯಕ್ಕೆ ಬಾರದೆ ಇದ್ದುದರಿಂದ ಆಕೆ ರಸ್ತೆ ಬದಿಯಲ್ಲಿ ಮೂರ್ಛೆ ತಪ್ಪಿ ಬಿದ್ದಿದ್ದಳು ಎಂದು ಪ್ರಿಯಾಂಕಾ ಅವರು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

## ನೆರವು ಯಾಚಿಸಿ ಮನೆ ಮನೆಗೆ ಅಲೆದಾಡಿದ್ದ ಸಂತ್ರಸ್ತ ಬಾಲಕಿ

**ಉಜ್ಜಯಿನಿ, ಸೆ. 23:** ಅತ್ಯಾಚಾರಕ್ಕೊಳಗಾದ ಬಳಿಕ ತೀವ್ರ ರಕ್ತಸ್ರಾವವಾಗಿದ್ದ ಅಪ್ರಾಪ್ತ ವಯಸ್ಸಿನ ಬಾಲಕಿ ಸಹಾಯ ಯಾಚಿಸಿ ಮನೆಯಿಂದ ಮನೆಗೆ ಅಲೆದಾಡುತ್ತಿದ್ದಾಗ ಯಾರೂ ಕೂಡಾ ಆಕೆಯ ನೆರವಿಗೆ ಬರಲಿಲ್ಲವೆಂಬುದು ಸಿಸಿ ಟಿವಿಯಲ್ಲಿ ದಾಖಲಾದ ವಿಡಿಯೋದಲ್ಲಿ ಕಂಡುಬಂದಿರುವುದಾಗಿ ವರದಿಯಾಗಿತ್ತು.

ಆದರೆ ಸಂತ್ರಸ್ತ ಬಾಲಕಿಗೆ ನೆರವಾಗಲು ಯಾರೂ ಮುಂದೆ ಬರಲಿಲ್ಲವೆಂಬ ವರದಿಗಳನ್ನು ಉಜ್ಜಯಿನಿಯ ಪೊಲೀಸ್ ವರಿಷ್ಠ ಸಚಿನ್ ಶರ್ಮಾ ತಳ್ಳಿ ಹಾಕಿದ್ದಾರೆ. "ನೆರವು ಯಾಚಿಸಿ ಅಲೆದಾಡುತ್ತಿದ್ದ ಆಕೆಗೆ ಕೆಲವರು 100, ಇನ್ನು ಕೆಲವರು 50 ರೂ. ನೀಡಿದರು. ಆಕೆ ಟೋಲ್‌ಗೇಟನ್ನು ಹಾದುಹೋದಾಗ ಸಿಬ್ಬಂದಿ ಆಕೆಗೆ ಹಣ ಹಾಗೂ ಕೆಲವು ಬಟ್ಟೆಗಳನ್ನು ನೀಡಿದರು. ಕನಿಷ್ಠ 7–8 ಮಂದಿ ಆಕೆಗೆ ನೆರವಾಗಲು ಯತ್ನಿಸಿದರು ಎಂದವರು ಹೇಳಿದ್ದಾರೆ.

ಅತ್ಯಾಚಾರದ ಬಳಿಕ ಅರೆನಗ್ನ ಸ್ಥಿಯಲ್ಲಿದ್ದ ಬಾಲಕಿಯನ್ನು ವ್ಯಕ್ತಿಯೊಬ್ಬ ದೂರ ಓಡಿಸುತ್ತಿರುವ ದೃಶ್ಯವೂ ವಿಡಿಯೋದಲ್ಲಿ ದಾಖಲಾಗಿದೆ. ಕೊನೆಗೂ ಆಕೆಗೆ ಆಶ್ರಮವೊಂದರಲ್ಲಿ ಆಶ್ರಯ ದೊರೆಯಿತು. ಅಲ್ಲಿನ ಅರ್ಚಕರೊಬ್ಬರು ಆಕೆಗೆ ಬಟ್ಟೆಬರೆಗಳನ್ನು ನೀಡಿ, ಪೊಲೀಸರಿಗೆ ಕರೆ ಮಾಡಿದರು. 20 ನಿಮಿಷಗಳ ಬಳಿಕ ಸ್ಥಳಕ್ಕೆ ಆಗಮಿಸಿದ ಪೊಲೀಸರು ಆಕೆಯನ್ನು ಆಸ್ಪತ್ರೆಗೆ ಕರೆದೊಯ್ದರು.

**(ವಾರ್ತಾಭಾರತಿ 29–09–2023)**

===========================================================================

## ಮುಸ್ಲಿಮರು ಕೂಡ ನಮ್ಮವರೇ: ಭಾಗವತ್

## ಈ ದೇಶ ಮುಸ್ಲಿಮರಿಗೂ ಸೇರಿದೆ ಆರ್‌ಎಸ್‌ಎಸ್ ಮುಖ್ಯಸ್ಥ

**ಅಹ್ಮದಾಬಾದ್:** 'ಮುಸ್ಲಿಮರು ಕೂಡ ನಮ್ಮವರೇ. ಅವರು ನಮ್ಮಿಂದ ಪ್ರತ್ಯೇಕವಾಗಿಲ್ಲ. ಅವರ ಆರಾಧಾನಾ ವಿಧಾನ ಮಾತ್ರ ಬದಲಾಗಿದೆ. ಈ ದೇಶ ಅವರಿಗೂ ಸೇರಿದೆ' ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದಾರೆ.

ಗುಜರಾತ್‌ನ ಅಹ್ಮದಾಬಾದ್‌ನಲ್ಲಿ ನಡೆದ ಸಭೆಯೊಂದರಲ್ಲಿ ಅವರು ಈ ಹೇಳಿಕೆ ನೀಡಿದ್ದಾರೆ. ಈ ಸಭೆಯಲ್ಲಿ ಪ್ರಮುಖ ಮುಸ್ಲಿಂ ಮುಖಂಡರು ಕೂಡ ಭಾಗವಹಿಸಿದ್ದರು ಎಂದು ಮೂಲಗಳು ತಿಳಿಸಿವೆ. 2024ರ ಲೋಕಸಭೆ ಚುನಾವಣೆ ಹಿನ್ನಲೆಯಲ್ಲಿ ಭಾಗವತ್ ಅವರ ಈ ಹೇಳಿಕೆ ಮಹತ್ವ ಪಡೆದಿದೆ. ಚುನಾವಣೆ ದೃಷ್ಟಿಯಿಂದ ಬಿಜೆಪಿ ಮತ್ತು ಆರ್‌ಎಸ್‌ಎಸ್ ಮುಸ್ಲಿಮರ ವಿಶ್ವಾಸಕ್ಕೆ ಪಾತ್ರವಾಗಲು ಮುಂದಾಗಿದೆ.

'ಆರ್‌ಎಸ್‌ಎಸ್ ಇಡೀ ಸಮಾಜವನ್ನು ಒಗ್ಗೂಡಿಸಲು ಬಯಸಿದೆ. ಸಂಘವನ್ನು ವಿರೋಧಿಸುವವರನ್ನೂ ಜತೆಯಲ್ಲಿಯೇ ಕರೆದುಕೊಂಡು ಹೋಗಬೇಕು. ನಾವು ಬಾಂಗ್ಲಾದೇಶಕ್ಕೆ ಸಹಾಯ ಮಾಡಿದ ರೀತಿಯಲ್ಲೇ, ಪಾಕಿಸ್ಥಾನವನ್ನು ವಿರೋಧಿಸುವ ದೇಶಗಳಿಗೆ ಸಹಾಯಹಸ್ತ ಚಾಚಬೇಕಿದೆ' ಎಂದು ಭಾಗವತ್ ಪ್ರತಿಪಾದಿಸಿದ್ದಾರೆ. 'ಸನಾತನ ಧರ್ಮವನ್ನು ಟೀಕಿಸುವವರಿಗೆ ವಾಸ್ತವವಾಗಿ ಅದರ ಬಗ್ಗೆ ತಿಳಿದಿಲ್ಲ. ಟೀಕಿಸುವ ಜನರು ಅದರ ಬಗ್ಗೆ ತಿಳಿದ ಅನಂತರ ಅದನ್ನು ಮೆಚ್ಚಿದ ಹಲವು ಉದಾಹರಣೆಗಳಿವೆ' ಎಂದು ಹೇಳಿದ್ದಾರೆ.

**(ಉದಯವಾಣಿ 30-09-2023)**

==========================================================================

## ಲೈಂಗಿಕ ಕಿರುಕುಳ ಪ್ರತಿಭಟಿಸಿದ ಬಾಲಕಿಯನ್ನು ಚಲಿಸುತ್ತಿದ್ದ ರೈಲಿನೆದುರು ಎಸೆದ ದುಷ್ಕರ್ಮಿಗಳು

### * ಕೈ, ಕಾಲುಗಳನ್ನು ಕಳೆದುಕೊಂಡ ಬಾಲಕಿ. * ಉ.ಪ್ರದ ಬರೇಲಿಯಲ್ಲಿ ನಡೆದ ಭೀಕರ ಘಟನೆ

**ಬರೇಲಿ, ಅ.11:** ತನಗೆ ಲೈಂಗಿಕ ಕಿರುಕುಳ ನೀಡುವುದನ್ನು ಪ್ರತಿಭಟಿಸಿದ 17 ವರ್ಷದ ಬಾಲಕಿಯೊಬ್ಬಳನ್ನು ದುಷ್ಕರ್ಮಿಗಳು ಚಲಿಸುತ್ತಿದ್ದ ರೈಲಿನ ಎದುರು ಎಸೆದ ಬೀಭತ್ಸ ಘಟನೆ ಉತ್ತರ ಪ್ರದೇಶದ ಬರೇಲಿಯಲ್ಲಿ ಬುಧವಾರ ವರದಿಯಾಗಿದೆ. ಕೈ ಹಾಗೂ ಕಾಲುಗಳನ್ನು ಕಳೆದುಕೊಂಡ ಆಕೆಯ ಸ್ಥಿತಿ ಚಿಂತಾಜನಕವಾಗಿದ್ದು, ಜೀವನ್ಮರಣದ ಹೋರಾಟ ನಡೆಸುತ್ತಿದ್ದಾಳೆಂದು ಕುಟುಂಬಿಕರು ತಿಳಿಸಿದ್ದಾರೆ.

ಬರೇಲಿ ನಗರದ ಜಿ.ಬಿ. ಗಂಜ್ ಪ್ರದೇಶದಲ್ಲಿ ಈ ಘಟನೆ ನಡೆದಿದ್ದು, ಆಕೆಯ ದೇಹದಲ್ಲಿ ಹಲವು ಮೂಳೆಗಳು ಮುರಿದಿವೆ. ಪ್ರಕರಣಕ್ಕೆ ಸಂಬಂಧಿಸಿ ಓರ್ವ ವ್ಯಕ್ತಿಯನ್ನು ಬಂಧಿಸಲಾಗಿದೆ ಎಂದು ಜಿಲ್ಲಾ ಮ್ಯಾಜಿಸ್ಟ್ರೇಟ್ ತಿಳಿಸಿದ್ದಾರೆ. ಇದೇ ವೇಳೆ ಕರ್ತವ್ಯ ನಿರ್ಲಕ್ಷ್ಯದ ಆರೋಪದಲ್ಲಿ ನಾಲ್ವರು ಪೊಲೀಸರನ್ನು ಅಮಾನತುಗೊಳಿಸಲಾಗಿದೆ.

ಪದವಿಪೂರ್ವ ವಿದ್ಯಾರ್ಥಿನಿಯಾದ ಸಂತ್ರಸ್ತ ಬಾಲಕಿಯು, ಪ್ರತಿದಿನ ಸಂಜೆ ಹೊತ್ತಿನಲ್ಲಿ ಟ್ಯೂಶನ್‌ಗೆ ತೆರಳುತ್ತಿದ್ದಾಗ ಓರ್ವ ಯುವಕ ಹಾಗೂ ಆತನ ಸಂಗಡಿಗರು ಕಿರುಕುಳ ನೀಡುತ್ತಿದ್ದರೆಂದು ಆಕೆಯ ತಂದೆ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಆರೋಪಿಯ ಕುಟುಂಬಿಕರ ಮೇಲೂ ಪಾಲಕರು ದೂರು ನೀಡಿದ್ದಾರೆ.

ಬರೇಲಿಯ ಖಾಡವು ರೈಲ್ವೆ ಕ್ರಾಸಿಂಗ್ ಬಳಿ ಮಂಗಳವಾರ ರಾತ್ರಿ ರಕ್ತಸಿಕ್ತ ಸ್ಥಿತಿಯಲ್ಲಿ ಬಾಲಕಿ ಪತ್ತೆಯಾಗಿದ್ದು, ಆಕೆಯ ಎರಡೂ ಕಾಲುಗಳು ಮತ್ತು ಒಂದು ಕೈ ತುಂಡಾಗಿದೆ. ಆಕೆಯನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಶಸ್ತ್ರಕ್ರಿಯೆ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಈ ಮಧ್ಯೆ ನಗರ ಪೊಲೀಸ್ ಅಧೀಕ್ಷಕ ರಾಹುಲ್ ಭಾಟಿ ಅವರು ಹೇಳಿಕೆಯೊಂದನ್ನು ನೀಡಿ, ಬಾಲಕಿಯನ್ನು ಚಲಿಸುತ್ತಿದ್ದ ರೈಲಿನೆದುರು ಎಸೆಯಲಾಗಿತ್ತೇ ಅಥವಾ ಆಕೆ ಬೇರೆ ಯಾವುದೇ ಕಾರಣಗಳಿಂದಾಗಿ ಗಾಯಗೊಂಡಳೇ ಎಂಬುದನ್ನು ಈಗಲೇ ಖಚಿತಪಡಿಸಲು ಸಾಧ್ಯವಿಲ್ಲವೆಂದು ಹೇಳಿದ್ದಾರೆ.

ಟ್ಯೂಶನ್ ತರಗತಿಯಿಂದ ಮನೆಗೆ ಹಿಂದಿರುಗುತ್ತಿದ್ದ ಬಾಲಕಿಯನ್ನು ಇಬ್ಬರು ಯುವಕರು ತಡೆದಿದ್ದು, ಆಕೆಯೊಂದಿಗೆ ಅಸಭ್ಯವಾಗಿ ವರ್ತಿಸಿದ್ದರು. ಆಗ ಆಕೆ ಪ್ರತಿಭಟಿಸಿದಾಗ ಕ್ರುದ್ಧರಾದ ಅವರು ಆಕೆಯನ್ನು ರೈಲಿನೆದುರು ಎಸೆದಿದ್ದಾರೆಂದು ಪೊಲೀಸರು ತಿಳಿಸಿದ್ದಾರೆ.

ಘಟನೆಯನ್ನು ಮುಖ್ಯಮಂತ್ರಿ ಆದಿತ್ಯನಾಥ್ ಅವರ ಗಮನಕ್ಕೆ ತರಲಾಗಿದ್ದು, ಬಾಲಕಿಯ ಕುಟುಂಬಕ್ಕೆ 5 ಲಕ್ಷ ರೂ.ಗಳ ಪರಿಹಾರವನ್ನು ನೀಡಲಾಗುವುದೆಂದು ಅವರು ತಿಳಿಸಿದರು.

ಬಾಲಕಿಯ ಸ್ಥಿತಿ ಗಂಭೀರವಾಗಿರುವ ಹಿನ್ನೆಲೆಯಲ್ಲಿ ಹೆಚ್ಚಿನ ಚಿಕಿತ್ಸೆಗಾಗಿ ಉನ್ನತ ಮಟ್ಟದ ಆಸ್ಪತ್ರೆಗೆ ದಾಖಲಿಸಲಾಗುವುದು. ಚಿಕಿತ್ಸಾ ವೆಚ್ಚವನ್ನು ರಾಜ್ಯ ಸರಕಾರವೇ ಸಂಪೂರ್ಣವಾಗಿ ಭರಿಸಲಿದೆ ಎಂದರು. **(ವಾರ್ತಾಭಾರತಿ 12-10-2023)**

==========================================================================

## ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ

## ಸ್ವಯಂಘೋಷಿತ 'ದೇವಮಾನವ'ನ ಬಂಧನ

**ಹೊಸದಿಲ್ಲಿ, ಅ.12:** ಸಮಸ್ಯೆಗಳನ್ನು ಪರಿಹರಿಸುವ ನೆಪದಲ್ಲಿ ಇಬ್ಬರು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪದಲ್ಲಿ ದಿಲ್ಲಿ ಪೊಲೀಸರು 33 ವರ್ಷದ ಸ್ವಯಂಘೋಷಿತ 'ದೇವಮಾನವ'ನೊಬ್ಬನನ್ನು ಬಂಧಿಸಿದ್ದಾರೆ.

ವಿನೋದ್ ಕಶ್ಯಪ್ ಎಂಬ ಹೆಸರಿನ ಆರೋಪಿಯು ದಿಲ್ಲಿಯ ಕಕ್ರೋಲ ಪ್ರದೇಶದಲ್ಲಿ 'ಮತಾ ಮಸಾನಿ ಚೌಕಿ ದರ್ಬಾರ್' ಎಂಬ ಹೆಸರಿನ ಆಶ್ರಮವೊಂದನ್ನು ನಡೆಸುತ್ತಿದ್ದನು.

"ನಾವು 'ದೇವಮಾನವ'ನ ಭಕ್ತೆಯರಾಗಿದ್ದೇವೆ ಹಾಗೂ ತನ್ನ ದರ್ಬಾರ್‌ನಲ್ಲಿ ಸೇವೆ ಮಾಡುವಂತೆ ಅವರು ನಮಗೆ ಸೂಚಿಸಿದ್ದರು" ಎಂದು ಇಬ್ಬರು ಮಹಿಳೆಯರು ತಮ್ಮ ದೂರಿನಲ್ಲಿ ಹೇಳಿದ್ದಾರೆ.

ಈ ಮಹಿಳೆಯರು ಆರೋಪಿಯ ಆಶ್ರಮದಲ್ಲಿ ತಂಗಿದ್ದಾಗ ಅವನು ಇಬ್ಬರೂ ಮಹಿಳೆಯರ ಮೇಲೆ ಅತ್ಯಾಚಾರ ನಡೆಸಿದ್ದಾನೆ ಎಂದು ದ್ವಾರಕಾದ ಡಿಸಿಪಿ ಎಮ್. ಹರ್ಷವರ್ಧನ್ ಹೇಳಿದರು. ಈ ಘಟನೆಯ ಬಗ್ಗೆ ಯಾರಿಗೂ ಏನನ್ನೂ ಹೇಳಬಾರದು ಎಂದು ಆರೋಪಿಯು ಸಂತ್ರಸ್ತೆಯರಿಗೆ ಬೆದರಿಕೆಯನ್ನೂ ಹಾಕಿದ್ದನು ಎಂದು ಪೊಲೀಸ್ ಅಧಿಕಾರಿ ಹೇಳಿದರು.

"ಆರೋಪಿಯ ಬೇಡಿಕೆಯಂತೆ ನಾವು ನಮ್ಮ ಆಭರಣಗಳನ್ನು ಮಾರಾಟ ಮಾಡಿ ಅವನಿಗೆ ಹಣ ನೀಡಿದ್ದೇವೆ. ನೀವು ಹಣ ನೀಡದಿದ್ದರೆ ನಿಮ್ಮ ಬದುಕನ್ನು ನಾಶಗೊಳಿಸುವ ಸಾಮರ್ಥ್ಯ ನನ್ನಲ್ಲಿದೆ, ನೀವು ನನ್ನೊಂದಿಗೆ ಹೊಂದಿರುವ ಲೈಂಗಿಕ ಸಂಬಂಧವನ್ನು ನಿಮ್ಮ ಗಂಡಂದಿರು ಮತ್ತು ಕುಟುಂಬ ಸದಸ್ಯರಿಗೆ ಹೇಳುತ್ತೇನೆ ಎಂಬ ಬೆದರಿಕೆಯನ್ನೂ ಅವನು ಹಾಕಿದ್ದಾನೆ ಎಂದು ಮಹಿಳೆಯರು ತಮ್ಮ ದೂರಿನಲ್ಲಿ ತಿಳಿಸಿದ್ದಾರೆ" ಎಂದು ಪೊಲೀಸ್ ಅಧಿಕಾರಿ ಹೇಳಿದರು. ನಾವೀಗ ಆರೋಪಿಯನ್ನು ಬಂಧಿಸಿದ್ದೇವೆ ಎಂದು ಅವರು ತಿಳಿಸಿದರು.

**(ವಾರ್ತಾಭಾರತಿ 13–09–2023)**

==========================================================================

## ಚರ್ಮದ ಕ್ಯಾನ್ಸರ್ ಗುಣಪಡಿಸಲು ಸೋಪ್ ಸಂಶೋಧಿಸಿದ 14ರ ಬಾಲಕ!

**ವಾಷಿಂಗ್ಟನ್:** ಅಮೆರಿಕದ 14 ವರ್ಷದ ಬಾಲಕ ಹೇಮನ್ ಬೆಕಲೆ ಚರ್ಮದ ಕ್ಯಾನ್ಸರ್ ವಿರುದ್ಧ ಹೋರಾಡಲು ಸಹಾಯಕವಾಗುವ ಸೋಪ್ ಅನ್ನು ಅಭಿವೃದ್ಧಿಪಡಿಸಿದ್ದಾರೆ. ಈ ಮೂಲಕ ಅಮೆರಿಕದ ಉನ್ನತ ಯುವ ವಿಜ್ಞಾನಿ ಎಂದು ಗುರುತಿಸಿಕೊಂಡಿದ್ದಾರೆ. ವಿಶೇಷವೆಂದರೆ ಈ ಸಾಬೂನಿನ ವೆಚ್ಚವೇ ಕೇವಲ 10 ಡಾಲರ್‌ಗಿಂತ (831 ರೂ.) ಕಡಿಮೆಯಾಗಿದ್ದಾಗಿದೆ. ಚರ್ಮದ ಜೀವಕೋಶಗಳನ್ನು ಸಕ್ರಿಯಗೊಳಿಸುವ ಮೂಲಕ ಅವುಗಳು ಕ್ಯಾನ್ಸರ್‌ಕಾರಕ ಜೀವಕೋಶದ ವಿರುದ್ಧ ಹೋರಾಡಲು ಸಹಾಯಕವಾಗುವಂಥ ಪದಾರ್ಥಗಳನ್ನು ಬಳಸಿ, ಸೋಪ್ ತಯಾರಿಸಿರುವುದಾಗಿ ಬೆಕಲೆ ಹೇಳಿದ್ದಾರೆ. ಇಥಿಯೋಪಿಯಾದಲ್ಲಿ ವಾಸವಾಗಿದ್ದಾಗ ಸೂರ್ಯನ ಕಿರಣಗಳಿಗೆ ಮೈಯೊಡ್ಡಿ ನಿರಂತರವಾಗಿ ಕೆಲಸ ಮಾಡುವವರನ್ನು ನೋಡಿದಾಗ ಇಂಥದ್ದೊಂದು ಆಲೋಚನೆ ಮೂಡಿತು. ಈ ಹಿನ್ನಲೆಯಲ್ಲಿ ಚರ್ಮದ ಕ್ಯಾನ್ಸರ್ ಬಗ್ಗೆ ಆಳವಾದ ಅಧ್ಯಯನ ನಡೆಸಿ, ಜನರು ಶಾಶ್ವತವಾಗಿ ಬಳಸಬಹುದಾದ, ಕಡಿಮೆ ವೆಚ್ಚವೂ ಆಗಿರಬಹುದಾದಂಥ ಸೋಪನ್ನು ಅಭಿವೃದ್ಧಿಪಡಿಸಲಾಗಿದೆ. ಬಹು ಹಂತದ ಪ್ರಯೋಗಗಳು ಯಶಸ್ವಿಯಾದ ಬಳಿಕ ಸೋಪ್ ಅನ್ನು ಪರಿಚಯಿಸಿದ್ದಾಗಿಯೂ ಬೆಕೆಲೆ ಹೇಳಿದ್ದಾರೆ. ಫೇರ್‌ಫ್ಯಾಕ್ಸ್ ಕೌಂಟಿಯ ಫ್ರಾಸ್ಟ್‌ಮಿಡಲ್ ಸ್ಕೂಲ್‌ನಲ್ಲಿ ಓದುತ್ತಿರುವ ಬೆಕಲೆ, 2023ರ ಯಂಗ್ ಸೈಂಟಿಸ್ಟ್ ಚಾಲೆಂಜ್‌ನಲ್ಲಿ ಸ್ಪರ್ಧಿಸಿ ಇತರ 9 ಸ್ಪರ್ಧಿಗಳನ್ನು ಪರಾಜಿತಗೊಳಿಸಿ 25,000 ಡಾಲರ್‌ಗಳ ಬಹುಮಾನವನ್ನು ಪಡೆದುಕೊಂಡಿದ್ದಾರೆ. **(ಉದಯವಾಣಿ 26–10–2023)**

==========================================================================

## ಜೈಲುಗಳಿಗೆ ಹೋಗುವವರಲ್ಲಿ ಮುಸ್ಲಿಮರೇ ನಂ.1: ಬದ್ರುದ್ದೀನ್

**ಹೊಸದಿಲ್ಲಿ:** ಮುಸ್ಲಿಮರಲ್ಲಿ ಅಪರಾಧ ಪ್ರಕರಣಗಳು ಜಾಸ್ತಿ. ಜೈಲುಗಳಿಗೆ ಹೋಗುವವರ ಸಂಖ್ಯೆಯಲ್ಲಿ ಮುಸ್ಲಿಮರೇ ನಂ. 1 ಎಂಬ ಆಲ್ ಇಂಡಿಯಾ ಯುನೈಟಡ್ ಡೆಮಾಕ್ರಾಟಿಕ್ ಫ್ರಂಟ್ (ಎಐಯುಡಿಎಫ್) ಮುಖ್ಯಸ್ಥ ಬದ್ರುದ್ದೀನ್ ಅಜ್ಮಲ್ ಹೇಳಿಕೆ ವಿವಾದ ಸೃಷ್ಟಿಸಿದ ಬೆನ್ನಲ್ಲೇ ಅವರು ತಮ್ಮ ಹೇಳಿಕೆಗೆ ಬದ್ಧರಾಗಿರುವುದಾಗಿ ತಿಳಿಸಿದ್ದಾರೆ. ಅಸ್ಸಾಂನ ಗೋಲ್ಪರಾದಲ್ಲಿ ಅ.20ರಂದು ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ್ದ ಅವರು, 'ನಾವು ಮುಸ್ಲಿಮರು ದರೋಡೆ, ಡಕಾಯಿತಿ, ಅತ್ಯಾಚಾರ, ಲೂಟಿಯಲ್ಲಿ ನಂ. 1 ಆಗಿದ್ದೇವೆ. ಜೈಲುಗಳಿಗೆ ಹೋಗುವುದರಲ್ಲೂ ನಾವೇ ನಂ. 1. ನಮ್ಮ ಮಕ್ಕಳಿಗೆ ಶಾಲೆ, ಕಾಲೇಜುಗಳಿಗೆ ಹೋಗಲು ಸಮಯವಿಲ್ಲ. ಆದರೆ ಜೂಜಾಡಲು, ಇತರರಿಗೆ ವಂಚನೆ ಮಾಡಲು ಸಮಯವಿದೆ' ಎಂದು ಹೇಳಿದ್ದರು. 'ಜನರು ಈಗ ಚಂದ್ರನ ಮೇಲೆ ಹೋಗುತ್ತಿದ್ದಾರೆ. ಆದರೆ ನಾವು ಮುಸ್ಲಿಮರು ಜೈಲಿಗೆ ಹೋಗುವುದು ಹೇಗೆ ಎನ್ನುವುದರಲ್ಲಿ ಪಿಎಚ್.ಡಿ. ಮಾಡುತ್ತಿದ್ದೇವೆ. ನಮ್ಮ ಸಮುದಾಯದಲ್ಲಿ ಶಿಕ್ಷಣದ ಕೊರತೆಯೇ ಅಪರಾಧಗಳಲ್ಲಿ ನಮ್ಮವರು (ಮುಸ್ಲಿಮರು) ಹೆಚ್ಚು ತೊಡಗಲು ಕಾರಣ' ಎಂದು ಹೇಳಿದ್ದರು. **(ಉದಯವಾಣಿ 29–10–2023)**

==========================================================================

## ಮಗನಿಂದಲೇ ತಾಯಿಯ ಕೊಲೆ; ಅತ್ಯಾಚಾರ

**ಬಜಪೆ, ಅ. 31:** ಕಟೀಲು ಸಮೀಪದ ಕೊಂಡೇಲ ಗ್ರಾಮದ ದುರ್ಗಾನಗರದಲ್ಲಿನ ಮಹಿಳೆ ರತ್ನಾ ಶೆಟ್ಟಿ (56) ಅವರ ಬಾಯಿಗೆ ಟೊಮೊಟೋ ಹಾಕಿ ಉಸಿರುಗಟ್ಟಿಸಿ ಕೊಲೆಗೈದು ಬಳಿಕ ಅತ್ಯಾಚಾರ ಮಾಡಿದ ಅವರ ಮಗ ರವಿರಾಜ್ ಶೆಟ್ಟಿ (33)ಯನ್ನು ಪೊಲೀಸರು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.

ತಾಯಿಯನ್ನು ಕೊಲೆಗೈದು ಅತ್ಯಾಚಾರ ಮಾಡಿರುವ ವಿಲಕ್ಷಣ ಘಟನೆ ಇದಾಗಿದೆ. ಅ. 26ರಂದು ರಾತ್ರಿ ತಾಯಿ ರತ್ನಾ ಅವರ ಮೇಲೆ

ಕೈ ಹಾಕಿದ್ದು, ಇದರಿಂದ ಅವರು ಭಯಪಟ್ಟು ಕುಳಿತುಕೊಂಡಿದ್ದ ವೇಳೆ ಅವರ ಬಾಯಿ ಹಾಗೂ ಮೂಗನ್ನು ಸೇರಿಸಿ ಬಿಗಿದಿಟ್ಟುಕೊಂಡು ಟೊಮೆಟೊ ಹಣ್ಣು ಬಾಯಿಗೆ ಹಾಕಿದ್ದು ಅವರು ಉಸಿರುಗಟ್ಟಿ ಮೃತಪಟ್ಟಿದ್ದಾರೆ. ಬಳಿಕ ಅತ್ಯಾಚಾರವನ್ನು ಕೂಡ ಮಾಡಿದ್ದಾನೆ. ಶವವನ್ನು ಹಗ್ಗದಿಂದ ಕಟ್ಟಿದ್ದ. ಅದನ್ನು ಬೇರೆಡೆಗೆ ಸಾಗಿಸುವ ಬಗ್ಗೆ ಯೋಚನೆ ಮಾಡಿದ್ದ. ಆದರೆ ಅದಕ್ಕೆ ಸಮಯ ಸಿಗಲಿಲ್ಲ. ಬಳಿಕ ಕಿನ್ನಿಗೋಳಿಯಲ್ಲಿನ ಲಾಡ್ಜ್‌ವೊಂದರಲ್ಲಿ ಅ. 27 ಮತ್ತು 28ರಂದು ರಾತ್ರಿ ಉಳಿದುಕೊಂಡಿದ್ದ. **(ಉದಯವಾಣಿ 01–11–2023)**

==========================================================================

## ಮನುಷ್ಯನನ್ನೇ ಪುಡಿಗಟ್ಟಿದ ರೋಬೋಟ್ ಮೆಷಿನ್!

***ಸಿಯೋಲ್:*** ಮನುಷ್ಯರಿಗಿಂತಲೂ ವೇಗವಾಗಿ ಕಾರ್ಯ ನಿರ್ವಹಿಸುವ ರೋಬೋಟ್‌ಗಳು ಉಪಕಾರಿ ಎಷ್ಟೋ, ಅಷ್ಟೇ ಅಪಾಯಕಾರಿಯೂ ಹೌದು! ದಕ್ಷಿಣ ಕೊರಿಯಾದಲ್ಲಿ ತರಕಾರಿ ಪೆಟ್ಟಿಗೆಗೂ ಮನುಷ್ಯನಿಗೂ ವ್ಯತ್ಯಾಸ ತಿಳಿಯದೇ ಮನುಷ್ಯನನ್ನೇ ರೋಬೋಟ್ ಒಂದು ಪುಡಿಗಟ್ಟಿರುವ ಘಟನೆ ಇದಕ್ಕೆ ನೈಜ ಉದಾಹರಣೆ.

ಜಿಯೋಂಗ್‌ಸಾಂಗ್ ಪ್ರಾಂತದ ಕೃಷಿ ಉತ್ಪನ್ನಗಳ ವಿತರಣ ಕೇಂದ್ರದಲ್ಲಿ ಉದ್ಯೋಗಿಯೊಬ್ಬ ರೋಬೋಟ್ ಕಾರ್ಯಾಚರಣೆಯನ್ನು ಪರಿಶೀಲಿಸುತ್ತಿದ್ದ ವೇಳೆ ಈ ಘಟನೆ ಸಂಭವಿಸಿದೆ. ತರಕಾರಿ ತುಂಬುವ ಪೇಪರ್ ಪೆಟ್ಟಿಗೆಗಳನ್ನು ಎತ್ತಿ ಕ್ರಶರ್‌ಗೆ ಹಾಕುವ ರೋಬೋಟಿಕ್ ಯಂತ್ರವು ಪೆಟ್ಟಿಗೆ ಯಾವುದು, ಮನುಷ್ಯ ಯಾವುದೆಂದು ತಿಳಿಯದೇ ಉದ್ಯೋಗಿಯನ್ನೇ ಎತ್ತಿ ಕ್ರಶರ್ ಪ್ಯಾಲೆಟ್ ಮೇಲೆ ಹಾಕಿದೆ. ಇದರಿಂದ ಆತನ ಮುಖ ಮತ್ತು ಎದೆ ಭಾಗ ನಜ್ಜುಗುಜ್ಜಾಗಿದೆ. ತಕ್ಷಣವೇ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಕಾರಿಯಾಗದೆ ಉದ್ಯೋಗಿ ಮೃತಪಟ್ಟಿದ್ದಾರೆ. **(ಉದಯವಾಣಿ 10–11–2023)**

==========================================================================

## ಉ.ಪ್ರ.ದಲ್ಲಿ ಹಲಾಲ್ ಪ್ರಮಾಣೀಕೃತ ವಸ್ತುಗಳ ಮಾರಾಟ ನಿಷೇಧ

**ಲಕ್ನೋ:** ಉತ್ತರ ಪ್ರದೇಶದಲ್ಲಿ ಹಲಾಲ್ ಪ್ರಮಾಣೀಕೃತ ಆಹಾರ, ಔಷಧಗಳ ಸಂಗ್ರಹ, ಮಾರಾಟ ಮತ್ತು ವಿತರಣೆಯನ್ನು ತಕ್ಷಣದಿಂದ ನಿಷೇಧಿಸಿ ಆದೇಶ ಹೊರಡಿಸಲಾಗಿದೆ. ಚಿಲ್ಲರೆ ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ವಸ್ತುಗಳು, ಕೆಲವೊಂದು ಔಷಧಗಳಿಗೆ ಹಲಾಲ್ ಪ್ರಮಾಣ ಪತ್ರ ನೀಡಲಾಗುತ್ತದೆ ಎಂಬ ದೂರು ಸಲ್ಲಿಕೆಯಾದ ಹಿನ್ನಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಹೊಸ ನಿರ್ಧಾರ ಜಾರಿಯಾಗಿದೆ ಎಂದು ಉತ್ತರ ಪ್ರದೇಶದ ಆಹಾರ ಸುರಕ್ಷ ಆಯುಕ್ತರು ಹೇಳಿದ್ದಾರೆ. ಚೆನ್ನೈಯ ಹಲಾಲ್ ಇಂಡಿಯಾ ಪ್ರೈ. ಲಿ., ಹೊಸದಿಲ್ಲಿಯ ಜಮೀಯತ್ ಉಲೇಮಾ ಹಿಂದ್ ಹಲಾಲ್ ಟ್ರಸ್ಟ್, ಮುಂಬಯಿಯ ಹಲಾಲ್ ಕೌನ್ಸಿಲ್ ಆಫ್ ಇಂಡಿಯಾ, ಜಮೀಯತ್ ಉಲೇಮಾ ಚಿಲ್ಲರೆ ಮಾರುಕಟ್ಟೆಯಲ್ಲಿ ಮಾರಾಟವಾಗುವ ವಸ್ತುಗಳಿಗೆ ಹಲಾಲ್ ಪ್ರಮಾಣ ಪತ್ರ ನೀಡುತ್ತವೆ. **(ಉದಯವಾಣಿ 19–11–2023)**

==========================================================================

## ನಾಗರಿಕ ಸಮಾಜ ತಲೆ ತಗ್ಗಿಸುವಂತಹ ಕೃತ್ಯ

ಮಾನ್ಯರೇ,

ದಲಿತ ಮಹಿಳೆಯೊಬ್ಬರು ಸಾರ್ವಜನಿಕ ಟ್ಯಾಂಕ್‌ನ ನಲ್ಲಿಯಲ್ಲಿ ನೀರು ಕುಡಿದರೆಂಬ ಕ್ಷುಲ್ಲಕ ಕಾರಣಕ್ಕೆ ಸವರ್ಣೀಯರು ಆ ಟ್ಯಾಂಕ್‌ನಲ್ಲಿ ಸಂಗ್ರಹವಾಗಿದ್ದ ನೀರನ್ನು ಖಾಲಿ ಮಾಡಿ ಅದನ್ನು ಗೋಮೂತ್ರದಿಂದ ಶುದ್ಧೀಕರಣ ಮಾಡುವ ಮೂಲಕ ಬಹಿರಂಗವಾಗಿಯೇ ಅಸ್ಪೃಶ್ಯತೆ ಆಚರಣೆ ಮಾಡಿದ ಘಟನೆ ಅನಾಗರಿಕರಂತೆ ನಡೆದುಕೊಂಡಿರುವಂತಹ ಒಂದು ಅಮಾನವೀಯವಾದ ಕೃತ್ಯವಾಗಿದ್ದು ಈ ಘಟನೆಯಿಂದ ಇಡೀ ನಾಗರಿಕ ಸಮಾಜವೇ ತಲೆ ತಗ್ಗಿಸುವಂತಾಗಿದೆ.

ನಮ್ಮ ದೇಶದಲ್ಲಿ ಅಸ್ಪೃಶ್ಯತೆ ಆಚರಣೆ ನಿಷೇಧ ಕಾಯ್ದೆ ಜಾರಿ ಇದ್ದಾಗಿಯೂ ಇಂದಿಗೂ ಇಂತಹ ನೂರಾರು ಘಟನೆಗಳು ದೇಶದ ಮೂಲೆ ಮೂಲೆಯಲ್ಲಿ ಯಾವುದೇ ಎಗ್ಗಿಲ್ಲದೆ ನಡೆಯುತ್ತಲೇ ಬಂದಿವೆ. ಇಷ್ಟಾದರೂ ನಮ್ಮನ್ನಾಳುವ ಸರಕಾರಗಳು, ನಮ್ಮ ಜನಪ್ರತಿನಿಧಿಗಳು ಇಂತಹ ಕೃತ್ಯಗಳಿಗೆ ಕಡಿವಾಣ ಹಾಕುವಲ್ಲಿ ಸೋತಿರುವುದು ನಿಜಕ್ಕೂ ನಾಚಿಕೆಗೇಡಿನ ಸಂಗತಿ.

ದೇಶಕ್ಕೆ ಸ್ವಾತಂತ್ರ್ಯ ಬಂದು ಸುಮಾರು ಏಳು ದಶಕಗಳೇ ಕಳೆದಿದ್ದರೂ, ಆಧುನಿಕತೆ ಹಾಗೂ ತಂತ್ರಜ್ಞಾನದಲ್ಲಿ ಜಗತ್ತಿನ ಮುಂದೆ ನಾವು ಸರ್ವಶ್ರೇಷ್ಠರು, ಬುದ್ಧಿವಂತರು, ವಿಶ್ವಗುರು ಎಂದು ಎದೆ ಉಬ್ಬಿಸಿ ಎಷ್ಟೇ ಬೀಗಿದರೂ ಮನುಷ್ಯರ ಆತ್ಮ ಗೌರವದ ವಿಚಾರದಲ್ಲಿ ಭಾರತೀಯರು ಇಂದಿಗೂ ಅಲ್ಪಮಾನವರಾಗಿಯೇ ಉಳಿದು ಹೋಗಿರುವುದು ಈ ದೇಶದ ದೊಡ್ಡ ದುರಂತ. ಜಾತಿ, ಧರ್ಮದ ಹೆಸರಲ್ಲಿ ನಾಡಿನಲ್ಲಿ ಶಾಂತಿ ಕದಡಿ, ಹುಸಿ ದೇಶ ಪ್ರೇಮದ ಹೆಸರಲ್ಲಿ ಬೊಬ್ಬೆ ಹೊಡೆಯುವವರಿಗೆಲ್ಲ ಇಂತಹ ಘಟನೆಗಳು ಸ್ವಲ್ಪವಾದರೂ ಲಜ್ಜೆ ತರಿಸುವಂತಾಗಲಿ.

– ಅಪುರಾ, ಅಗತಗೌಡನಹಳ್ಳಿ, ಗುಂಡ್ಲುಪೇಟೆ

**(ವಾರ್ತಾಭಾರತಿ 25–11–2022)**

ಕವನ

## ಬುರ್ಕಿನೋಫಾಸೋದ ಹುತಾತ್ಮರು

ಊ ಕೆ.ಎಂ. ಉಮರ್, ಮಡಿಕೇರಿ

ವೀರ ಮರಣದ ಶಹೀದರೆ, ನಿಮ್ಮ ತ್ಯಾಗಕೆ ಸಾಟಿ ಏನಿಹುದು
ಮರಣವಿಲ್ಲದ ಶಾಶ್ವತ ಜೀವನ ದೇವನು ನಿಮಗೆ ನೀಡಿಹನು.

ಪರ್ವತದಷ್ಟೆ ದೊಡ್ಡ ತ್ಯಾಗವ ಮಾಡುತ ಜೀವ ತ್ಯಜಿಸಿದಿರಿ
ಪಾವನವಾಯಿತು ಜೀವನ ನಿಮ್ಮ, ಸ್ವರ್ಗದಿ ಸ್ಥಾನವ ಗಳಿಸಿದಿರಿ.

ಅಹ್ಮದಿಯತಿನ ಪರಂಪರೆಯೂ ತಲುಪುವುದೆಲ್ಲಿಗೆ ಯೋಚಿಸಿರಿ
ಅಲ್ಲಾಹು ಕರುಣಿಸಿ ಅನುಗ್ರಹ ನೀಡಿದ ಬಿಲಾಲರ ಚರಿತ್ರೆಯ ವೀಕ್ಷಿಸಿರಿ.

ಕ್ರೂರತೆ ತೋರಿಸಿ ಸಜ್ಜನರನ್ನ ಹತ್ಯೆಯ ಮಾಡುವ ನಿಮ್ಮ ಕೊನೆ
ಕೊಂಡೊಯ್ಯುವುದು ಅಬುಜಹಲನ ಸಂಗದ ಸಾಲಿಗೆ ತಪ್ಪದೆನೆ.

ಪಾಕಿಸ್ಥಾನದಿ, ಅಫ್‌ಘಾನಿಸ್ಥಾನದಿ, ಇಂಡೋನೇಶ್ಯವು ಸಾಲದೆನೆ
ಆಫ್ರಿಕನ್ ದೇಶದ ಬುರ್‌ಕಿನೊಫಾಸೊಗು ತಲುಪಿತು ನಿಮ್ಮ ವಿರೋಧದಲೆ.

ಕರುಣೆ ಇಲ್ಲದ ಕಲ್ಲು ಹೃದಯದ ಕ್ರೂರರೆ, ನಿಮಗೆ ನಾಶವಿದು
ಕರುಣೆಯ ತೋರುತ ಶಹೀದರ ಸಾಲಿಗೆ ಅಲ್ಲಾಹು ನೀಡಿದ ಲಾಭವಿದು.

ಸುಟ್ಟು ಉರಿಯುವ ಮರಳಲಿ ಬಿಲಾಲರ ಅಂಗಾತ ಮಲಗಿಸಿ
ಶಿಲೆಯನ್ನ ಎದೆಯಲಿ ಏರಿಸಿ ಎಳೆದರು ಕ್ರೂರರು ಕರುಣೆ ಇಲ್ಲದೆ ಬರದಲ್ಲಿ.

ಅಹದ್ ಎಂಬ ವಚನವು ಮಾತ್ರ ಉದಿರಿತು ಬಾಯಲಿ ವೀರನುಡಿ
ಅದುವೆ ಅಲ್ಲವೆ ಮಹ್‌ದಿಯ ಶಿಷ್ಯರ ಬಾಯಲಿ ಉದುರುವ ಸತ್ಯ ನುಡಿ.

ಅಫಘಾನಿಸ್ಥಾನದಿ ಮಹ್‌ದಿಯ ಶಿಷ್ಯ ಅಬ್ದುಲತೀಫ್ ಸಾಹಿಬರ
ಮೂಗನು ಛೇದಿಸಿ ಹಗ್ಗವ ಬಿಗಿದರು ಕ್ರೂರದಿ ನಿಮ್ಮ ಪೂರ್ವಿಕರು.

ಮಹ್‌ದಿ ಮಸೀಹರ ಸತ್ಯಕೆ ಸಾಕ್ಷಿ ಆಗುತ ಜೀವವ ತ್ಯಜಿಸುತಲಿ
ಮಾನವ ಕುಲಕೆ ಮಾದರಿಯಾಗುತ ನೆಲೆಸಿದರೆಲ್ಲರ ಮನದಲ್ಲಿ.

ಆಫ್ರಿಕನ್ ದೇಶದಿ ಮಹ್‌ದಿಯ ಶಿಷ್ಯರು ದೇವನ ಪ್ರಾರ್ಥನೆ ಸಲ್ಲಿಸಲು
ನೆಲೆಸಿದ ಗುಂಪಲಿ ವೃದ್ಧರನ್ನಾರಿಸಿ ಒಂದೊಂದಾಗಿ ಗುಂಡ್ಹೊಡೆದು.

ಕನಿಕರ ನಿಮ್ಮ ಸನಿಹಕು ಬಾರದ ಕ್ರೂರರೆ, ದೇವನ ನೆನಪಿಸಿರಿ
ಕರುಣಾಳು ದೇವನ ಸನ್ನಿಧಿ ಬೇಡುವ ಸಜ್ಜನ ಸಂಗವ ವಧಿಸಿದಿರಿ.

ಮಹ್‌ಶರ ದಿನದಲಿ ದೇವನ ಪ್ರಶ್ನೆಗೆ ಉತ್ತರವೇನು ನೀಡುವಿರಿ.
ಮಹ್‌ದಿಯ ಶಿಷ್ಯರ ಪ್ರಾರ್ಥನೆ ವೇಳೆ ವಧಿಸಿದೆವೆಂದು ಹೇಳುವಿರೋ.

ಮರೆಯದೆ ನೆನೆಯಿರಿ ಭುಟ್ಟೋ, ಫೈಝುಲ್, ಝಿಯಾಉಲ್ ಹಕ್ಕರ
ಕೊನೆಯನ್ನು
ಸನಾವುಲ್ಲಾ, ಬಟಾಲವಿ, ಡೂಯಿ, ಲೇಖರಾಮ ಶತ್ರು ನಾಯಕರ
ಕೊನೆಯನ್ನು. ♦

ಸಂಪಾದಕರಿಗೆ ಪತ್ರ

ಆತ್ಮೀಯರೇ,

ನಿಮ್ಮ ಪತ್ರಿಕಾ ಅಭಿಮಾನಿ ತಿಳಿಸುವ ವಂದನೆಗಳು. ಆಗಸ್ಟ್ 2023 "ಯುಗರಶ್ಮಿ" ಪತ್ರಿಕೆ ತಲುಪಿದೆ. ಅಭಿನಂದನೆಗಳು. ಪತ್ರಿಕೆಯ ಮುಖಪುಟದ ಕೆನಡಾದಲ್ಲಿರುವ ಮಸ್ಜಿದ್ ತುಂಬಾ ವಿಶಾಲವಾಗಿದೆ. ಖುಷಿ ಆಯಿತು. ಪ್ರಪಂಚ ವಿಶಾಲವಾಗಿದೆ ಎಂದು ಅರಿವು ಆಯಿತು.

ಸುವರ್ಣ ಕರ್ನಾಟಕ ಹಾರ್ದಿಕ ಶುಭಾಶಯುಗಳು ತಮಗೂ ಸಿಬ್ಬಂದಿಗೂ ತಿಳಿಸಿರಿ ಎಂಬ ವಿನಂತಿ.

– ಎಂ.ಎಸ್. ಹಿರೇಮಠ
ಬಸವನ ಬಾಗೇವಾಡಿ.

**"ದೇಶಪ್ರೇಮ (ಧಾರ್ಮಿಕ) ವಿಶ್ವಾಸದ ಅಂಶವಾಗಿದೆ."**

**– ಹಝ್ರತ್ ಮುಹಮ್ಮದ್ ಪೈಗಂಬರ್(ಸ)**

**ಯುಗರಶ್ಮಿಗೆ ಧನಸಹಾಯ ನೀಡಿದ ಉದಾರಮತಿಗಳು**

1. ಜ। ಕೆ.ಕೆ. ಬದ್ರುದ್ದೀನ್ ಸಾಹಿಬ್, ಬೆಂಗಳೂರು – ರೂ. 2000/–

# Ahmadiyya Muslim Community

Apps for mobile devises

Download free apps developed by Ahmadiyya Muslim Community for your iphone,ipode, and Android



**Quran**
Read the Holy Quran in easy Yassarnal Quran Font




**Conditions of Bai'at**
A pocket reference of Shara't-e-Bai'at in 7 languages



**Sermons**
Huzoor's Friday Sermons In 15 languages





**MTA**
Watch MTA Live, view Schedule and much more





**Ahmadiyya News**
Stay up to date with the Latest jama'at news

View these apps at alislam.org/apps or scan the QR code below


























**NEW PUBLICATIONS**





**Contact:**


**NAZARAT NASHRO-ISHA'AT**


**Sadr Anjuman Ahmadiyya**


**Qadian-143516 (Punjab)**


**Phone: 01872- 500970**





**NEW PUBLICATIONS**
**Contact:**
**NAZARAT NASHRO - ISHA'AT**
**Sadr Anjuman Ahmadiyya**
**Qadian – 143516 (Punjab)**
**Phone: 01872 - 500970**

ಪಾಂಡೇಶ್ವರ: ಮಂಗಳೂರಿನ ಪಾಂಡೇಶ್ವರದಲ್ಲಿರುವ ಅಹ್ಮದಿಯಾ ಮುಸ್ಲಿಂ ಘಟಕದ ವತಿಯಿಂದ ಸ್ವಾತಂತ್ರ್ಯೋತ್ಸವ ಆದರಿಸಲಾಯಿತು. ಆಚರಣೆಯ ಅಂಗವಾಗಿ ಘಟಕದ ಸುತ್ತು ಮುತ್ತಲಿನ ನಿವಾಸಿಗಳಿಗೂ ಪಾಂಡೇಶ್ವರ ಆರಕ್ಷಕ ಠಾಣೆಯ ಪದಾಧಿಕಾರಿಗಳಿಗೂ ಸಿಬ್ಬಂದಿಗಳಿಗೂ ಸಿಹಿತಿಂಡಿ ಮತ್ತು ದೇಶಪ್ರೇಮದ ಕುರಿತು ಇಸ್ಲಾಮಿನ ಉಪದೇಶಗಳನ್ನು ಒಳಗೊಂಡ ಕಿರುಹೊತ್ತಗೆಗಳನ್ನು ವಿತರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸ್ಥಳೀಯ ಅಧ್ಯಕ್ಷರಾದ ಬಿ.ಎಸ್. ಅಬ್ದುರ್ರಹೀಂ, ಮೌಲವಿ ತಾಹಿರ್ ಅಹ್ಮದ್, ಮಜ್ಲಿಸ್ ಅನ್ಸಾರುಲ್ಲಾಹ್ ಝಈಂ ಮುಹಮ್ಮದ್ ಯೂಸುಫ್, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಖಾಯಿದ್, ವಿ. ಎ. ರಶೀದ್ ಮತ್ತಿತರರು ಭಾಗವಹಿಸಿದರು.






ಮಂಗಳೂರಿನ ಖುದ್ದಾಮುಲ್ ಅಹ್ಮದಿಯಾ ಘಟಕ 13–08–2023ರಂದು ಕ್ರೀಡಾಕೂಟ ಏರ್ಪಡಿಸಿತ್ತು

ಖಾದಿಯಾನ್: ಅಕ್ಟೋಬರ್ 11, 12, 13 ದಿನಾಂಕಗಳಲ್ಲಿ ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ನಡೆದ ವಕ್ಫೆನೌ ಇಜ್ತಿಮಾದಲ್ಲಿ ಮತ್ತು 26, 27, 28 ದಿನಾಂಕಗಳಲ್ಲಿ ಜರಗಿದ ನ್ಯಾಶನಲ್ ಇಜ್ತಿಮಾದಲ್ಲಿ ಮೌಲವಿ ಇನಾಮುಲ್ಲಾ ಮತ್ತು ತಹಲೀ ದಂಪತಿಯ ಪುತ್ರಿ ಶಾಫಿಯಾ ("ಯುಗರಶ್ಮಿ" ಸಂಪಾದಕರ ಮೊಮ್ಮಗಳು) ಖುರ್‌ಆನ್ ತಿಲಾವತ್‌ನಲ್ಲಿ ಪ್ರಥಮ ಸ್ಥಾನ ಮತ್ತು ಉರ್ದು ಭಾಷಣದಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾಳೆ. ಅಲ್ಲದೆ, ಅರಬಿ ಕಸೀದ ಬಾಯಿಪಾಠ, ಖುರ್‌ಆನ್ ಸೂರಃ ಬಾಯಿಪಾಠ ಮತ್ತು ಹಿಫ್ಝ್ ನಮಾಝ್‌ನಲ್ಲಿ ಬಹುಮಾನ ಗಳಿಸಿದ್ದಾಳೆ. ಮಾಶಾಅಲ್ಲಾಹ್.





ಮಡಿಕೇರಿ: ಮಡಿಕೇರಿ ಜಮಾಅತಿನ ವಸೀಂ ಅಹ್ಮದ್ ಮತ್ತು ನಸೀಮ ಬಾನು ದಂಪತಿಯ ಪುತ್ರ ದಾನಿಶ್ ಅಹ್ಮದ್ (8 ವರ್ಷ) ಪವಿತ್ರ ಖುರ್‌ಆನ್ ಓದಿ ಪೂರ್ಣಗೊಳಿಸಿದ್ದಾನೆ. ಮಾಶಾಅಲ್ಲಾಹ್.



ತಿರುವನಂತಪುರದಲ್ಲಿ ಕಳೆದ ಡಿಸೆಂಬರ್ 2ರಂದು ನಡೆದ ಕೇರಳ ಪ್ರಾಂತ್ಯ ವಿಜ್ಞಾನ ಮೇಳದಲ್ಲಿ 'ಎ ಗ್ರೇಡ್' ಗಳಿಸಿದ 1. ಆಯಿಷ ನಸೀರ್ 2. ಷಹಾಮ ಪರ್ವೀನ್ (ಎಚ್‌ಎಸ್‌ಎಸ್ ವಿಭಾಗ, ಗಣಿತ ಶಾಸ್ತ್ರ ಗ್ರೂಪ್ ಪ್ರೊಜೆಕ್ಟ್) ಪಯಂಗಾಡಿಯ ಮಾಡಾಯಿ ಸರಕಾರಿ ಹೈಯರ್ ಸೆಕೆಂಡರಿ ಸ್ಕೂಲ್. (ಷಹಾಮ ಪರ್ವೀನ್, ಶಫೀಕ್ ಅಹ್ಮದ್ ಮತ್ತು ಫಾತಿಮತ್ ಝುಹ್ರಾ ದಂಪತಿಯ ಪುತ್ರಿ – ಯುಗರಶ್ಮಿ ಸಂಪಾದಕರ ಮೊಮ್ಮಗಳು)



Registered with the Registrar of Newspapers for India No. R.N. 27354/75
**Yugarashmi** Kannada Quarterly, **December - 2023.** Price : **Rs. 15/-**




ಮೂರನೇ ಮಹಾಯುದ್ಧದ ಭೀತಿ ದಿನೇ ದಿನೇ ವರ್ಧಿಸುತ್ತಿದೆ.

ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್
ಅಹ್ಮದಿಯಾ ಮುಸ್ಲಿಂ ಜಮಾಅತಿನ ಜಾಗತಿಕ ನೇತಾರ

#STOPWW3

Ahmadiyya Muslim Community, India

## ಜಾಗತಿಕ ಶಾಂತಿಯ ದೂತ ಮುಂದಿರಿಸಿದ ಶಾಂತಿ ಸ್ಥಾಪನೆಯ ಸುವರ್ಣ ತತ್ವಗಳು

1. ಸೃಷ್ಟಿಕರ್ತನನ್ನು ಅರಿಯಿರಿ
2. ಸಂಪೂರ್ಣ ನ್ಯಾಯಪಾಲನೆ ಸ್ಥಾಪಿಸಿರಿ
3. ಜಾಗತಿಕ ಏಕತೆಗೆ ಪ್ರೋತ್ಸಾಹ ಕೊಡಿರಿ
4. ಅಣ್ವಸ್ತ್ರವನ್ನು ಕೊನೆಗೊಳಿಸಿರಿ
5. ಆಯುಧ ವ್ಯಾಪಾರದಿಂದ ಅತಿಲಾಭ ಪಡೆಯುವುದನ್ನು ವರ್ಜಿಸಿರಿ
6. ಆರ್ಥಿಕ ಸಮಾನತೆಯನ್ನು ಸ್ಥಾಪಿಸಿರಿ ಮತ್ತು ಬಡತನವನ್ನು ತೊಡೆದುಹಾಕಿರಿ
7. ದೇಶದ ಏಳಿಗೆಗಾಗಿ ಪ್ರಯತ್ನಿಸಿರಿ
8. ಉಗ್ರವಾದವನ್ನು ತಿರಸ್ಕರಿಸಿರಿ
9. ಮನುಕುಲದ ಸೇವೆ ಮಾಡಿರಿ
10. ಪರಸ್ಪರರ ವಿಶ್ವಾಸಗಳನ್ನು ಆದರಿಸಿರಿ.

1800-103-2131 (Toll Free)

www.lightofislam.in | www.mta.tv
www.alislam.org | www.stopww3.co.uk

islaminind    islaminindia

Edited and Published by Muhammad Yusuf on behalf of Jamath Ahmadiyya at 10-23-1008/1, Ist Floor, Ansari Road, Mangalore - 575 001. Typing by : U. Basheer Ahmad
Printed at 'Karavali Printers', Azizuddin Road, Mangalore on behalf of Jubilee Printing Press, Mangalore